ಪಾರ್ತಿಸುಬ್ಬನ ಯಕ್ಷಗಾನ ಪ್ರಸಂಗಗಳು: ಪಠ್ಯ ಮತ್ತು ಪ್ರದರ್ಶನ

ಪಿಹೆಚ್.ಡಿ. ಪದವಿಗಾಗಿ
ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುತ್ತಿರುವ
ಸಂಶೋಧನ ಮಹಾಪ್ರಬಂಧದ ಅಂತಿಮ ಸಾರಲೇಖ

ಸಂಶೋಧಕರು
ದಿವ್ಯಶ್ರೀ. ಡಿ

ಮಾರ್ಗದರ್ಶಕರು
ಪ್ರೊ. ಸೋಮಣ್ಣ
ಪ್ರಾಧ್ಯಾಪಕರು
ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ
ಮಂಗಳೂರು ವಿಶ್ವವಿದ್ಯಾನಿಲಯ

೨೦೨೧

ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ
ಮಂಗಳೂರು ವಿಶ್ವವಿದ್ಯಾನಿಲಯ
ಮಂಗಳಗಂಗೋತ್ರಿ – ೫೭೪ ೧೯೯

ಪರಿವಿಡಿ

ಪಾರ್ತಿಸುಬ್ಬನ ಯಕ್ಷಗಾನ ಪ್ರಸಂಗಗಳು : ಪಠ್ಯ ಮತ್ತು ಪ್ರದರ್ಶನ

ಪ್ರಸ್ತಾವನೆ

- ಅಧ್ಯಯನದ ಉದ್ದೇಶ ಮತ್ತು ಮಹತ್ತ್ವ
- ಅಧ್ಯಯನದ ವ್ಯಾಪ್ತಿ ಮತ್ತು ವಿಧಾನಗಳು
- ಈವರೆಗಿನ ಅಧ್ಯಯನಗಳ ಸಮೀಕ್ಷೆ
    - ❖ ಯಕ್ಷಗಾನಕ್ಕೆ ಸಂಬಂಧಿಸಿದ ಕೃತಿಗಳು ಮತ್ತು ಬಿಡಿ ಲೇಖನಗಳು
    - ❖ ಸಂಶೋಧನೆ ಮತ್ತು ಅಧ್ಯಯನ ಗ್ರಂಥಗಳು
    - ❖ ಪಾರ್ತಿಸುಬ್ಬನ ಕುರಿತ ಆರಂಭಿಕ ಅಧ್ಯಯನಗಳು
    - ❖ ಪ್ರಸಂಗ ಸಾಹಿತ್ಯ ಮತ್ತು ಪ್ರದರ್ಶನದ ಕುರಿತ ಸಂಶೋಧನ ಮಹಾಪ್ರಬಂಧಗಳು
- ಸಮೀಕ್ಷೆಯಿಂದ ತಿಳಿದುಕೊಂಡ ಗ್ರಹಿಕೆಗಳು

ಅಧ್ಯಾಯ ಒಂದು

ಪಾರ್ತಿಸುಬ್ಬನ ಬದುಕು

೧.೧ ಕೌಟುಂಬಿಕ ಹಿನ್ನೆಲೆ

೧.೨ ಶಿಕ್ಷಣ ಮತ್ತು ವೃತ್ತಿ

೧.೩ ಕಾಲ, ದೇಶ ವಿಚಾರ ಚರ್ಚೆ

೧.೪ ಪಾರ್ತಿಸುಬ್ಬನ ಕುರಿತ ಅಪೂರ್ಣ ಐತಿಹಾಸಿಕ ಕಾದಂಬರಿ

ಅಧ್ಯಾಯ ಎರಡು

ಪಾರ್ತಿಸುಬ್ಬ ಮತ್ತು ತೆಂಕುತಿಟ್ಟು ಯಕ್ಷಗಾನ:

ರಾಮನಾಟ್ಟಂ–ಕಥಕಳಿ ಪ್ರಭಾವ ವಿವೇಚನೆ

೨.೧ ಕೇರಳದ ಕಲಾ ಪ್ರಕಾರಗಳು

೨.೧.೧ ಚಾಕ್ಯಾರ್ ಕುತ್ತ್

೨.೧.೨ ನಂಙ್ಯಾರ್ ಕುತ್ತ್

೨.೧.೩ ಕೂಡಿಯಾಟ್ಟಂ

೨.೧.೪ ಕೃಷ್ಣನಾಟ್ಟಂ

೨.೧.೫ ರಾಮನಾಟ್ಟಂ

೨.೧.೬ ಕಥಕಳಿ

೨.೨ ತೆಂಕುತಿಟ್ಟು ಯಕ್ಷಗಾನದ ಮೇಲೆ
ಕೃಷ್ಣನಾಟ್ಟಂ, ರಾಮನಾಟ್ಟಂ ಮತ್ತು ಕಥಕಳಿಯ ಪ್ರಭಾವ

ಅಧ್ಯಾಯ ಮೂರು

ಪಾರ್ತಿಸುಬ್ಬನ ಕೃತಿಗಳು : ವಸ್ತು ಪರಿಶೀಲನೆ

೩.೧ ರಾಮಾಯಣ ಕೇಂದ್ರಿತ ಪ್ರಸಂಗಗಳು

೩.೧.೧ ಪುತ್ರಕಾಮೇಷ್ಠಿ – ಸೀತಾಕಲ್ಯಾಣ

೩.೧.೨ ಪಟ್ಟಾಭಿಷೇಕ – ಪಂಚವಟಿ

೩.೧.೩ ಪಂಚವಟಿ – ವಾಲಿ ಸಂಹಾರ

೩.೧.೪ ಉಂಗುರ ಸಂಧಿ

೩.೧.೫ ಸೇತುಬಂಧನ

೩.೧.೬ ಅಂಗದ ಸಂಧಾನ

೩.೧.೭ ಕುಂಭಕರ್ಣಾದಿ ಕಾಳಗ

೩.೧.೮ ಕುಶ ಲವರ ಕಾಳಗ

೩.೨ ಪಾರ್ತಿಸುಬ್ಬನ ಇತರ ಪ್ರಸಂಗಗಳು

೩.೨.೧ ಕೃಷ್ಣ ಚರಿತೆ

೩.೨.೨ ಐರಾವತ

೩.೩ ಯಕ್ಷಗಾನ ಸಂಬಂಧಿಯಾದ ಪ್ರಸಂಗೇತರ ಕೃತಿ

೩.೩.೧ ಸಭಾಲಕ್ಷಣ

ಅಧ್ಯಾಯ ನಾಲ್ಕು

ಪಾರ್ತಿಸುಬ್ಬನ ಯಕ್ಷಗಾನ ಪ್ರಸಂಗಗಳು : ಸಾಹಿತ್ಯ ಪರಿಶೀಲನೆ

೪.೧ ಆಕರ ಪರಿಶೀಲನೆ

೪.೧.೧ ಸಂಸ್ಕೃತ ಕೃತಿಗಳು ಮತ್ತು ತೊರವೆ ರಾಮಾಯಣ

೪.೧.೨ ಕೌಶಿಕ ರಾಮಾಯಣ ಮತ್ತು ಹನೂಮನ್ನಾಟಕ

೪.೧.೩ ಕನ್ನಡ ಜೈಮಿನಿ ಭಾರತ

೪.೧.೪ ದಾಸ ಸಾಹಿತ್ಯ

೪.೧.೫ ಕುಮಾರವ್ಯಾಸ ಭಾರತ

೪.೧.೬ ಇತರೆ ಆಕರಗಳು

೪.೨ ಸಾಹಿತ್ಯ ಪರಿಶೀಲನೆ

೪.೩ ರಸ ವಿವೇಚನೆ

೪.೪ ಪಾರ್ತಿಸುಬ್ಬನ ಪ್ರಸಂಗಗಳ ಶೈಲಿಯ ಸೊಬಗು

೪.೪.೧ ವರ್ಣನೆಗಳು

೪.೪.೨ ಅಲಂಕಾರ

೪.೪.೩ ಸೋಪಜ್ಞತೆ

೪.೪.೪ ಪ್ರಾಸ

೪.೪.೫ ಚಿತ್ರಕ ಶಕ್ತಿ

೪.೪.೬ ಸಂಗ್ರಹಗುಣ

೪.೪.೭ ಬಹುಭಾಷಿಕತೆ

೪.೫ ಪಾರ್ತಿಸುಬ್ಬನ ಭಾಷೆ ಮತ್ತು ದೇಸಿ

೪.೬ ಸಂಗೀತಾಂಶಗಳು

ಅಧ್ಯಾಯ ಐದು

ರಂಗಪಠ್ಯವಾಗಿ ಪಾರ್ತಿಸುಬ್ಬನ ಪ್ರಸಂಗಗಳು

೫.೧ ಯಕ್ಷಗಾನ ಪ್ರದರ್ಶನದ ಇತಿಹಾಸ

೫.೧.೧ ಸ್ವಾತಂತ್ರ್ಯ ಪೂರ್ವಕಾಲ

೫.೧.೨ ಸ್ವಾತಂತ್ರ್ಯೋತ್ತರ ಕಾಲ

೫.೨ ಪ್ರದರ್ಶನ ಕುರಿತ ಪಾರ್ತಿಸುಬ್ಬನ ಚಿಂತನೆಗಳು

೫.೨.೧ ಪ್ರದರ್ಶನದ ಅವಧಿ ಮತ್ತು ಕಥಾನಡಿಗೆ

೫.೩ ಪಾರ್ತಿಸುಬ್ಬನ ರಂಗಕಲ್ಪನೆಯ ಸಂಕಲನ 'ಸಭಾಲಕ್ಷಣ'

೫.೪ ಸಂಗೀತ ಪ್ರಜ್ಞೆ

೫.೫ ಅರ್ಥ ಪ್ರಸವ ಕ್ಷಮತೆ

ಅಧ್ಯಾಯ ಆರು

ಯಕ್ಷಗಾನ ಕವಿಗಳ ಮೇಲೆ ಪಾರ್ತಿಸುಬ್ಬನ ಪ್ರಭಾವ : ತೌಲನಿಕ ವಿವೇಚನೆ

೬.೧ ಮುದ್ದಣ

೬.೨ ಕೀರಿಕ್ಕಾಡು ವಿಷ್ಣು ಮಾಸ್ತರರು

೬.೩ ರಾಮಪುತ್ರ ವಿಷ್ಣು

೬.೪ ಪೆರುವಡಿ ಸಂಕಯ್ಯ ಭಾಗವತರು

೬.೫ ಮಂದಾರ ಕೇಶವ ಭಟ್ಟ

೬.೬ ಜತ್ತಿ ಈಶ್ವರ ಭಟ್ಟ

೬.೭ ಸೀತಾನದಿ ಗಣಪಯ್ಯ

ಸಮಾರೋಪ

ಅಧ್ಯಯನದ ಫಲಿತಗಳು

ಅನುಬಂಧಗಳು

ಪರಾಮರ್ಶನ ಗ್ರಂಥಗಳು

ಪರಾಮರ್ಶನ ಲೇಖನಗಳು

ಉಪನ್ಯಾಸಗಳು

ವಕ್ತೃಗಳು

ಛಾಯಾಚಿತ್ರಗಳು

ಪಾರ್ತಿಸುಬ್ಬನ ಯಕ್ಷಗಾನ ಪ್ರಸಂಗಗಳು : ಪಠ್ಯ ಮತ್ತು ಪ್ರದರ್ಶನ

ಪ್ರಸ್ತಾವನೆ

ಯಕ್ಷಗಾನವು ಕನ್ನಡ ನಾಡಿನ ಪ್ರಸಿದ್ಧ ಕಲಾಪ್ರಕಾರ. ಸಾಹಿತ್ಯ, ಸಂಗೀತ, ನರ್ತನ, ಅಭಿನಯ, ಮಾತುಗಾರಿಕೆ, ಬಣ್ಣಗಾರಿಕೆ, ವೇಷಭೂಷಣಗಳ ಕಲಾವಿನ್ಯಾಸ, ನಾಟಕೀಯತೆ ಹೀಗೆ ಹಲವು ಅಂಶಗಳ ಔಚಿತ್ಯಪೂರ್ಣ ಕೂಡುವಿಕೆಯಿಂದ ರೂಪುಗೊಂಡ ಸಂಕೀರ್ಣ ಕಲೆಯಿದು. ಸಾಮಾಜಿಕ ಶಿಕ್ಷಣವೆಂಬ ಘನವಾದ ಉದ್ದೇಶವನ್ನೂ, ಪುರಾಣ ಕಾವ್ಯಗಳ ಪ್ರಸರಣವನ್ನೂ ಮಾಡುತ್ತಾ ಬಂದಿರುವ ಯಕ್ಷಗಾನ ಇಂದು ವಿದೇಶಗಳಲ್ಲಿಯೂ ಜನಪ್ರಿಯವಾಗಿದೆ. ಮುಖ್ಯವಾಗಿ ಯಕ್ಷಗಾನದಲ್ಲಿ ಮೂಡಲಪಾಯ ಮತ್ತು ಪಡುವಲಪಾಯ ಎಂದು ಎರಡು ವಿಧ. ಮೂಡಲಪಾಯ ಬಯಲುಸೀಮೆಯ ಯಕ್ಷಗಾನ. ಪಡುವಲಪಾಯ ಕರಾವಳಿ ಭಾಗದಲ್ಲಿರುವ ಪ್ರಭೇಧ. ಪಡುವಲಪಾಯದಲ್ಲಿ ತೆಂಕು, ಬಡಗು, ಬಡಾಬಡಗು ಎಂದು ಮೂರು ತಿಟ್ಟುಗಳು. ಇದರಲ್ಲಿ ತೆಂಕುತಿಟ್ಟು ಪಡುಕರಾವಳಿಯ ಜನಜೀವನದ ಜೊತೆಗೆ ಹಾಸುಹೊಕ್ಕಾಗಿರುವ ಯಕ್ಷಗಾನ ಪ್ರಭೇದ. ಆರಂಭದಲ್ಲಿ ಕೇವಲ ಅನಕ್ಷರಸ್ಥರ, ಜನಸಾಮಾನ್ಯರ ಮನರಂಜನೆಯ ಜಾನಪದ ಕಲೆಯಾಗಿದ್ದ 'ಆಟ', ಕ್ರಮೇಣ ವಿದ್ಯಾವಂತರ, ವಿದ್ವಾಂಸರ ಪ್ರವೇಶದಿಂದ 'ಯಕ್ಷಗಾನ'ವಾಗಿ ಶಾಸ್ತ್ರೀಯ ಚೌಕಟ್ಟನ್ನು ಪಡೆದುಕೊಂಡಿತು. ಹೀಗೆ ಯಕ್ಷಗಾನವು ಎಲ್ಲಾ ಸ್ತರದ ಜನಜೀವನದ ವಿವಿಧ ಮುಖಗಳನ್ನು ಆವರಿಸಿಕೊಳ್ಳುತ್ತಾ ಹಲವು ಸಾಮಾಜಿಕ, ವ್ಯಾವಹಾರಿಕ ಜ್ಞಾನವನ್ನು ಮನರಂಜನೆಯ ಮೂಲಕ ಒದಗಿಸಿದೆ. ನೀತಿಶಾಸ್ತ್ರ, ತತ್ವಬೋಧೆ, ಅಧ್ಯಾತ್ಮ ಸಾಧನೆಯ ಅಂಶಗಳನ್ನು ಒಳಗೊಂಡು ಬುದ್ಧಿ ಭಾವಗಳನ್ನು ಪ್ರಚೋದಿಸಿದೆ. ಈಗಾಗಲೇ ಸೂಚಿಸಿದಂತೆ ಸಾಹಿತ್ಯ, ಸಂಗೀತ, ತಾಳ, ಲಯ, ಗತಿ, ಚಿತ್ರ, ನೃತ್ಯ, ಅಭಿನಯ, ವೇಷಭೂಷಣಾದಿ ಅಲಂಕಾರ, ಸಂಭಾಷಣೆ, ರಸವತ್ತಾದ ಶ್ರುತಿಬದ್ಧವಾದ ವಾಗ್ವೈಖರಿಗಳಿಂದ ಇದು ಸಹೃದಯರ ಮನ ಗೆದ್ದಿದೆ. ಆಧ್ಯಾತ್ಮಿಕ, ನೈತಿಕ, ವ್ಯಾವಹಾರಿಕ ಹಾಗೂ ಧಾರ್ಮಿಕ ವಿಕಾಸಕ್ಕೆ ಕಾರಣವಾಗಿ ಯಕ್ಷಗಾನವು ಇಂದು ಬಹುಜನ ಪ್ರೀತಿಗೆ ಕಾರಣವಾಗಿದೆ. ಯಕ್ಷಗಾನವು ಈ ವ್ಯಾಪಕತೆಯನ್ನೂ ಔನ್ನತ್ಯವನ್ನು ಹೊಂದುವಲ್ಲಿ ಅನೇಕ ಮಹನೀಯರ ಕೊಡುಗೆಗಳಿವೆ. ಯಕ್ಷಗಾನವನ್ನು ಜನಪದ ಮನರಂಜನೆಯ ಸೀಮಿತ ಆವರಣದಿಂದ ಸೂಕ್ತ ಬದಲಾವಣೆಗಳೊಂದಿಗೆ ಶಾಸ್ತ್ರೀಯ ಚೌಕಟ್ಟನ್ನು ಒದಗಿಸಿ ಕಲಾಪ್ರಕಾರದ ಶಿಸ್ತನ್ನು ರೂಪುಗೊಳಿಸಿ ತೆಂಕುತಿಟ್ಟು ಯಕ್ಷಗಾನವನ್ನು ರೂಪಿಸಿದಾತ ಪಾರ್ತಿಸುಬ್ಬ. ಈತ ಕೇರಳದ ರಂಗಕಲೆಗಳನ್ನು ಅಭ್ಯಾಸ ಮಾಡಿ, ಸ್ವತ: ತಾನೇ ಯಕ್ಷಗಾನ ಪ್ರಸಂಗಗಳನ್ನು ರಚಿಸಿ, 'ಸಭಾಲಕ್ಷಣ'ವೆಂಬ ಕೃತಿಯ ಮೂಲಕ

ರಂಗ ಕಲ್ಪನೆಯನ್ನು ಒದಗಿಸಿ 'ತೆಂಕುತಿಟ್ಟು ಯಕ್ಷಗಾನದ ನಿರ್ಮಾತೃ' ಎಂಬ ಹೆಗ್ಗಳಿಕೆಗೆ ಪಾತ್ರನಾಗಿದ್ದಾನೆ. ಈ ಅಧ್ಯಯನವು ಪಾರ್ತಿಸುಬ್ಬನು ಕವಿಯಾಗಿ, ರಂಗ ಕಲ್ಪನೆಯುಳ್ಳ ದಿಗ್ದರ್ಶಕನಾಗಿ ಯಕ್ಷಗಾನಕ್ಕೆ ನೀಡಿದ ಕೊಡುಗೆಯನ್ನು ಗುರುತಿಸುವ ಪ್ರಯತ್ನವಾಗಿದೆ.

ಯಕ್ಷಗಾನ ಪ್ರದರ್ಶನಕ್ಕೆ ಮುಖ್ಯ ಆಧಾರವಾಗಿರುವುದು ಪದ್ಯಗಳನ್ನೊಳಗೊಂಡಿರುವ ಯಕ್ಷಗಾನ 'ಪ್ರಸಂಗ ಸಾಹಿತ್ಯ'. ಭಾಗವತರು ಹಾಡುವ ಈ ಪ್ರಸಂಗ ಪದ್ಯಗಳ ಕತೆ ಮತ್ತು ಪದಧ್ವನಿಯ ಎಳೆಯನ್ನು ಹಿಡಿದು ಪಾತ್ರಧಾರಿ ರಂಗಸ್ಥಳದಲ್ಲೇ ಅರ್ಥವನ್ನು ಕಟ್ಟುತ್ತಾನೆ. ಆದ್ದರಿಂದ ಪ್ರಸಂಗ ಸಾಹಿತ್ಯವೇ ಯಕ್ಷಗಾನದ ಅಡಿಪಾಯ. ಈಗಾಗಲೇ ಸಾವಿರಕ್ಕೂ ಅಧಿಕ ಯಕ್ಷಗಾನ ಕವಿಗಳು ಪ್ರಸಂಗಗಳನ್ನು ರಚಿಸಿದ್ದಾರೆ. ಅವರಿಂದ ರಚಿತವಾದ ಪ್ರಸಂಗಗಳ ಸಂಖ್ಯೆ ನಾಲ್ಕು ಸಾವಿರದ ಆರುನೂರರ ಗಡಿ ದಾಟಿದೆ. (ಕರ್ನಾಟಕ ಯಕ್ಷಗಾನ ಕವಿಚರಿತೆ, ೨೦೧೩, ಪು.೫) ಹೆಚ್ಚಿನ ಪ್ರಸಂಗಗಳು ಈವರೆಗೆ ಅದೆಷ್ಟು ಪ್ರಯೋಗಗಳನ್ನು ಕಂಡಿವೆ ಎಂಬುದನ್ನು ಹೇಳಲಾಗದು. ಈ ಪ್ರಸಂಗ ಮತ್ತು ಪ್ರದರ್ಶನಗಳು ಪ್ರೇಕ್ಷಕರ ಜ್ಞಾನ, ತಿಳುವಳಿಕೆ, ಕಥನ ಕ್ರಮ, ಕಾವ್ಯಾಸ್ವಾದನ ಶಕ್ತಿ, ಮಾತಿನ ಶೈಲಿ, ಭಾಷಾ ಪ್ರೌಢಿಮೆ, ಸಂಗೀತ ಇತ್ಯಾದಿಗಳನ್ನು ಗಾಢವಾಗಿ ಪ್ರಭಾವಿಸಿದೆ. ಆದರೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮಾತ್ರ ಯಕ್ಷಗಾನ ಪ್ರಸಂಗ ಸಾಹಿತ್ಯ ಅವಗಣನೆಗೆ ಒಳಗಾಗಿದೆ. ಆರಂಭದ ಕನ್ನಡ ಸಾಹಿತ್ಯ ಚರಿತ್ರೆಕಾರರು ಯಕ್ಷಗಾನ ಪ್ರಸಂಗಗಳನ್ನು ಕಾವ್ಯವೆಂದು ಪರಿಗಣಿಸಲಿಲ್ಲ. ಆದರೆ ಕ್ರಮೇಣ ಯಕ್ಷಗಾನ ಸಾಹಿತ್ಯದ ಕುರಿತೂ ಆಸಕ್ತಿ ಉಂಟಾಗಿ ಅಧ್ಯಯನಗಳು ಆರಂಭಗೊಂಡಿವೆ. ೧೯೫೦ರ ಕಾಲಕ್ಕಾಗುವಾಗಲೇ ಡಾ. ಕೆ. ಎಂ ಕೃಷ್ಣರಾವ್ ಅವರು 'ಯಕ್ಷಗಾನ ಸಾಹಿತ್ಯ' ಎಂಬ ಕೃತಿಯಲ್ಲಿ ಇನ್ನೂರರಷ್ಟು ಪ್ರಸಂಗಗಳನ್ನು ದಾಖಲಿಸಿದ್ದಾರೆ. ಶಿವರಾಮ ಕಾರಂತರು ೧೯೬೩ ರಲ್ಲಿ ಪ್ರಕಟಿಸಿದ 'ಯಕ್ಷಗಾನ ಬಯಲಾಟ'ವೆಂಬ ಕೃತಿಯಲ್ಲಿ ಯಕ್ಷಗಾನ ಕವಿಗಳ ಕುರಿತು ಚರ್ಚಿಸಿದ್ದಾರೆ. ೧೯೭೫ ರಲ್ಲಿ ಕುಬಣೂರು ಬಾಲಕೃಷ್ಣರಾಯರು 'ಯಕ್ಷಗಾನ' ಎಂಬ ಗ್ರಂಥವನ್ನು ರಚಿಸಿದ್ದಾರೆ. ಬೆಂಗಳೂರು ವಿಶ್ವವಿದ್ಯಾನಿಲಯ ಪ್ರಕಟಿಸಿರುವ 'ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ' ಸಂಪುಟ–೬ ರಲ್ಲಿ ಪ್ರಸಂಗಗಳ ಸೂಚಿಯೊಂದು ಇದೆ. ಉಡುಪಿಯ ಯಕ್ಷಗಾನ ಕೇಂದ್ರದವರು ೨೦೦೬ ರಲ್ಲಿ ಡಾ. ಪಾದೇಕಲ್ಲು ವಿಷ್ಣುಭಟ್ಟರ ಸಂಪಾದಕತ್ವದ 'ಯಕ್ಷಗಾನ ಗ್ರಂಥಸೂಚಿ'ಯನ್ನು ಪ್ರಕಟಿಸಿದೆ. ಇದರಲ್ಲಿ ಎರಡು ಸಾವಿರಕ್ಕಿಂತಲೂ ಹೆಚ್ಚಿನ ಯಕ್ಷಗಾನ ಪ್ರಸಂಗಗಳ ಪಟ್ಟಿಯಿದೆ. ಕಬ್ಬಿನಾಲೆ ವಸಂತ ಭಾರದ್ವಾಜರು 'ಕರ್ನಾಟಕ ಯಕ್ಷಗಾನ ಕವಿಚರಿತೆ' ಎಂಬ ಕೃತಿಯಲ್ಲಿ ಒಂಬೈನೂರಕ್ಕೂ ಅಧಿಕ ಪ್ರಸಂಗಕರ್ತರನ್ನು ಗುರುತಿಸಿದ್ದು ನಾಲ್ಕು ಸಾವಿರಕ್ಕೂ ಅಧಿಕ ಪ್ರಸಂಗಗಳ ಹೆಸರುಗಳನ್ನು ದಾಖಲಿಸಿದ್ದಾರೆ.

ಯಕ್ಷಗಾನದ ಕವಿಗಳ ಕಾಲವನ್ನು ನಿರ್ಣಯಿಸುವುದು ಕಷ್ಟಸಾಧ್ಯ. ಯಾಕೆಂದರೆ ಮೂಲ ಹಸ್ತಪ್ರತಿಗಳು ಲಭ್ಯವಿಲ್ಲ. ಕಾಲದಿಂದ ಕಾಲಕ್ಕೆ ರಂಗಕ್ಕೆ ಬೇಕಾದ ಪದ್ಯಗಳನ್ನು ಮಾತ್ರ ಪ್ರತಿ ಮಾಡಿಕೊಳ್ಳುವ, ಬಹಳಷ್ಟು ಭಾಗವತರು ನೆನಪಿನಿಂದಲೇ ಹೇಳುವ ಅಭ್ಯಾಸ ರೂಢಿಸಿಕೊಂಡದ್ದರಿಂದ ರಚನೆಗೊಂಡ ಕಾಲವನ್ನು ನಿರ್ಣಯಿಸುವುದು ಕಷ್ಟಸಾಧ್ಯ. ಹೆಚ್ಚಿನ ಪ್ರಸಂಗಗಳಲ್ಲಿ ಕವಿಯ ಅಂಕಿತ, ರಚನೆಗೊಂಡ ಸಂವತ್ಸರ, ಮಾಸ, ತಿಥಿ, ಇಷ್ಟದೇವತಾ ಸ್ತುತಿ ಇತ್ಯಾದಿಗಳು ನಷ್ಟಗೊಂಡು ಕಾಲದೇಶ ನಿರ್ಣಯ ಸಾಧ್ಯವಾಗುತ್ತಿಲ್ಲ. ಅನೇಕ ಪ್ರಸಂಗಗಳಲ್ಲಿ ಪ್ರತಿಕಾರರನ್ನೇ ಪ್ರಸಂಗಕರ್ತರು ಎಂದು ಭಾವಿಸಿರುವುದೂ ಇದೆ.

ಈಗಾಗಲೇ ಯಕ್ಷಗಾನ ಪ್ರಸಂಗಗಳ ಚರಿತ್ರೆಯನ್ನು ಕುರಿತು 'ಕರ್ನಾಟಕ ಯಕ್ಷಗಾನ ಕವಿಚರಿತೆ' ಕೃತಿಯು ದಾಖಲಿಸಿದಂತೆ ಕರ್ನಾಟಕ ಸಂಗೀತದ ಪಿತಾಮಹರಾದ ಪುರಂದರ ದಾಸರು 'ಅನಸೂಯಾ ಕಥೆ' ಎಂಬ ಯಕ್ಷಗಾನವನ್ನು, ಅವರ ಪುತ್ರ ಮಧ್ವಪತಿದಾಸರು ಅಭಿಮನ್ಯು ಕಾಳಗ, ಇಂದ್ರಜಿತು ಕಾಳಗ, ಉದ್ದಾಳೀಕನ ಕಥೆ, ಐರಾವತ, ಕಂಸವಧೆಗಳೆಂಬ ಯಕ್ಷಗಾನ ಕೃತಿಯನ್ನು ರಚಿಸಿದ್ದಾರೆ ಎಂಬ ಉಲ್ಲೇಖಗಳು ದೊರಕಿವೆ. ೧೫೧೯–೧೫೬೯ರ ನಡುವೆ ಬದುಕಿದ್ದ ಬೆಂಗಳೂರಿನ ನಿರ್ಮಾತೃ ದೊಡ್ಡ ಕೆಂಪೇಗೌಡ ತೆಲುಗಿನಲ್ಲಿ 'ಗಂಗಾಗೌರೀ ವಿಲಾಸ'ಎಂಬ ಯಕ್ಷಗಾನವನ್ನು ರಚಿಸಿದ್ದಾನೆ ಎಂದು ತಿಳಿದು ಬರುತ್ತದೆ. ಶ್ರೀಕೃಷ್ಣದೇವರಾಯನ ಆಸ್ಥಾನದಲ್ಲಿದ್ದ ಕುಂದುಕೂರಿನ ರುದ್ರಯ್ಯ (ಕ್ರಿ.ಶ. ೧೫೫೮)ನು 'ಸುಗ್ರೀವ ವಿಜಯ' ಎಂಬ ತೆಲುಗು ಯಕ್ಷಗಾನ ಕೃತಿಯನ್ನು ಬರೆದಿರುವನೆಂದು ಉಲ್ಲೇಖವಿದೆ. ತೆಲುಗು ಯಕ್ಷಗಾನವು ಹದಿನೈದನೆಯ ಶತಮಾನದ ಉತ್ತರಾರ್ಧದಲ್ಲಿ ರೂಪುಗೊಂಡಿರಬೇಕು ಎಂಬುದು ವಿದ್ವಾಂಸರ ಅಭಿಪ್ರಾಯ. (ಕರ್ನಾಟಕ ಯಕ್ಷಗಾನ ಕವಿಚರಿತೆ, ಪ್ರಸ್ತಾವನೆ, ಪು. ೭) ಬಳ್ಳಾರಿ ಜಿಲ್ಲೆಯ ಕುರುಗೋಡಿನ ಲಕ್ಷ್ಮೀನಾರಾಯಣ ದೇವಸ್ಥಾನದ ಶಿಲಾಶಾಸನ (ಕ್ರಿ.ಶ ೧೫೫೬) ದಲ್ಲಿ ತಾಳಮದ್ದಳೆಯ ಉಲ್ಲೇಖವಿದೆ. ವಿಷ್ಣು ವಾರಂಬಳ್ಳಿ ರಚಿಸಿದ 'ವಿರಾಟ ಪರ್ವ' (ಕ್ರಿ.ಶ ೧೫೬೪) ಪ್ರಸಂಗವು ಯಕ್ಷಗಾನದ ಮೊದಲ ಕೃತಿಯೆಂದು ಶಿವರಾಮ ಕಾರಂತರ ಅಭಿಮತ. ಆದರೆ ಎಂ.ಎ ಹೆಗಡೆಯವರು ಸಂಪಾದಿಸಿದ ಅಜ್ಞಾತಕವಿಯೋರ್ವನ 'ಆದಿಪರ್ವ' ಕೃತಿಯು ಕ್ರಿ.ಶ ೧೩೦೦–೧೩೫೦ರ ಕಾಲದ್ದೆಂದು ಹೇಳಲಾಗಿದೆ (ಕರ್ನಾಟಕ ಯಕ್ಷಗಾನ ಕವಿಚರಿತೆ, ೨೦೧೩, ಪು.೬–೮). ಪಾರ್ತಿಸುಬ್ಬ ಕವಿಯು ಯಕ್ಷಗಾನ ಕವಿಚರಿತೆಯಲ್ಲಿ ಆರಂಭದ ಕವಿಯಲ್ಲ. ಆದರೆ ಆತ ತೆಂಕುತಿಟ್ಟು ಎಂಬ ಯಕ್ಷಗಾನ ಪ್ರಭೇಧವನ್ನು ರೂಪಿಸಿದ ಕವಿ ಅಂತೆಯೇ ತನ್ನ ಪ್ರಸಂಗಗಳ ಮೂಲಕ ಸಮಗ್ರವಾಗಿ ರಾಮಾಯಣವನ್ನು ಯಕ್ಷಗಾನಕ್ಕೆ ತಂದ ಮೊದಲ ಕವಿಯಾಗಿದ್ದಾನೆ.

ಅಧ್ಯಯನದ ಉದ್ದೇಶ ಮತ್ತು ಮಹತ್ತ್ವ

ತೆಂಕುತಿಟ್ಟಿನ ಯಕ್ಷಗಾನ ಪರಿಸರದಲ್ಲಿ ಈವರೆಗಿನ ಉಪಲಬ್ಧ ಪ್ರಸಂಗಗಳನ್ನು ಗಮನಿಸುವುದಾದರೆ ಅವುಗಳಲ್ಲಿ ಪ್ರಾಚೀನವಾದವುಗಳು ಪಾರ್ತಿಸುಬ್ಬನ ಪ್ರಸಂಗಗಳೇ ಆಗಿವೆ. ಈತನ ಕಾಲದ ಕುರಿತು ಭಿನ್ನ ಭಿನ್ನ ಅಭಿಪ್ರಾಯಗಳಿವೆ. ಯಕ್ಷಗಾನ ಕವಿಚರಿತೆಗಾರರು ಸು.ಕ್ರಿ.ಶ. ೧೫೬೦–೧೬೨೦ ಎಂದು ಅಂದಾಜಿಸಿದ್ದಾರೆ. ಈತನು ಕೇರಳದಲ್ಲಿರುವ ಕಥಕಳಿಯನ್ನು ಮತ್ತು ಇತರ ಕನ್ನಡ ಕಾವ್ಯಗಳನ್ನು ಅಭ್ಯಸಿಸಿ ಯಕ್ಷಗಾನಕ್ಕೆ ಒಂದು ಖಚಿತ ರೂಪುರೇಷೆಗಳನ್ನು ನೀಡಲು ಪ್ರಯತ್ನಿಸಿದ್ದನು. ಯಕ್ಷಗಾನ 'ಸಭಾಲಕ್ಷಣ'ವೆಂಬ ಕೃತಿಯನ್ನು ರಚಿಸಿ ತೆಂಕುತಿಟ್ಟು ಯಕ್ಷಗಾನಕ್ಕೆ ಶಾಸ್ತ್ರೀಯ ಚೌಕಟ್ಟನ್ನು ಒದಗಿಸಿದ. ಇದಲ್ಲದೇ ಸಮಗ್ರ ರಾಮಾಯಣವನ್ನು ಎಂಟು ಯಕ್ಷಗಾನ ಪ್ರಸಂಗಗಳ ಮೂಲಕ ಕಟ್ಟಿಕೊಡುವ ಪ್ರಯತ್ನವನ್ನು ಮಾಡಿದ್ದಾನೆ. ಅದಕ್ಕೆ ಆ ಕಾಲದ ಮಾಯಿಪ್ಪಾಡಿ ರಾಜರು 'ಯಕ್ಷಗಾನ ವಾಲ್ಮೀಕಿ' ಎಂಬ ಬಿರುದನ್ನಿತ್ತು ಗೌರವಿಸಿದ್ದಾರೆ. ಇದಲ್ಲದೇ ಕೃಷ್ಣಚರಿತೆ ಪ್ರಸಂಗವನ್ನೂ ಮತ್ತು ಗಜಗೌರೀ ವ್ರತ ಸಂಬಂಧಿ ಕಥೆಯನ್ನು ಹೊಂದಿರುವ ವಿಶಿಷ್ಟ ಪ್ರಸಂಗ ಐರಾವತವನ್ನು ಈತ ರಚಿಸಿದ್ದಾನೆ. ಅಲ್ಲದೇ ಸಂಗೀತದಲ್ಲಿರುವ ಮೂವತ್ತೆರಡು ರಾಗತಾಳಗಳಿಗೆ ಸಂವಾದಿಯಾಗಿ ಯಕ್ಷಗಾನೀಯ ಶೈಲಿಯಲ್ಲೂ ಬತ್ತೀಸರಾಗ ತಾಳ ವಿಧವನ್ನು ತಂದಿದ್ದಾನೆ. ಬಹುಭಾಷಾ ಪ್ರವೀಣನೂ, ರಂಗಭಾಷೆಯನ್ನು ಚೆನ್ನಾಗಿ ಬಲ್ಲವನೂ, ಪ್ರದರ್ಶನ ಯೋಗ್ಯ ಕೃತಿ ರಚನೆಯ ಕಲ್ಪನೆಯುಳ್ಳವನೂ ಆದ ಪಾರ್ತಿಸುಬ್ಬನ ಯಕ್ಷಗಾನ ಪ್ರಸಂಗಗಳು ಸರಳವೂ, ಕಾವ್ಯಾತ್ಮಕವೂ ಆಗಿದೆ. ಹೀಗೆ ತೆಂಕುತಿಟ್ಟು ಯಕ್ಷಗಾನ ಕ್ಷೇತ್ರಕ್ಕೆ ವಿವಿಧ ಆಯಾಮಗಳಿಂದ ಆಚಾರ್ಯ ಪುರುಷನಂತೆ ಕಾಣುವ ಪಾರ್ತಿಸುಬ್ಬನ ಕುರಿತು ಈವರೆಗೆ ಸಮಗ್ರ ಸಂಶೋಧನೆಯೊಂದು ನಡೆದಿಲ್ಲ. ಪ್ರಸ್ತುತ ಅಧ್ಯಯನವು ಈ ಕೊರತೆಯನ್ನು ತುಂಬುವ ಉದ್ದೇಶವನ್ನು ಹೊಂದಿದೆ.

ಭಾರತದಲ್ಲಿ ರೂಢಮೂಲವಾಗಿರುವ ಅನೇಕ ಕಲೆಗಳಲ್ಲಿ ಯಕ್ಷಗಾನವು ವಿಶಿಷ್ಟ ಸುಂದರ ಕಲಾಪ್ರಕಾರ. ಯಕ್ಷಗಾನದ ಕುರಿತು ಚಿಂತನೆಯನ್ನು ಮಾಡಿದ ಹಿರಿಯರು ಯಕ್ಷಗಾನ ಪ್ರಾಚೀನತೆಯನ್ನು ಕುರಿತು ಹಲವು ಊಹೆಗಳನ್ನು ಮಂಡಿಸಿದ್ದಿದೆ. ಕವಿರಾಜಮಾರ್ಗದಲ್ಲಿ ಬಂದಿರುವ 'ನಾಳ್ಪಗರಣ' ಯಕ್ಷಗಾನವೇ ಇರಬೇಕು ಎಂದು ಮುಳಿಯ ತಿಮ್ಮಪ್ಪಯ್ಯನವರು ಅಭಿಪ್ರಾಯಿಸಿದ್ದಾರೆ. ಅದೇ ಕೃತಿಯಲ್ಲಿ ಬರುವ 'ಚತ್ತಾಣ' ಎಂದರೆ ಶ್ರವ್ಯಕಾವ್ಯ, 'ಬೆದಂಡೆ' ಎಂದರೆ ಆಡಿ ತೋರಿಸುವ ದೃಶ್ಯ ಕಾವ್ಯ. ಅಗ್ಗಳನ ಚಂದ್ರಪ್ರಭಾ ಪುರಾಣದಲ್ಲಿ ಬರುವ 'ಎಕ್ಕಲಗಾಣ', ಮಲ್ಲಿನಾಥ ಪುರಾಣದಲ್ಲಿ ಬರುವ 'ಯಕ್ಷಾಂದೋಳ', ನಾಗವರ್ಮ ಉಲ್ಲೇಖಿಸುವ 'ಬಾಜನೆಗಬ್ಬ' ಇವೆಲ್ಲವೂ ಯಕ್ಷಗಾನದ ಮೂಲ ರೂಪಗಳು ಎಂಬ ಚಿಂತನೆಯನ್ನು ಒಪ್ಪುವುದಾದರೆ ಹತ್ತನೇ ಶತಮಾನಕ್ಕಿಂತಲೂ ಪೂರ್ವದಲ್ಲಿ ಯಕ್ಷಗಾನ ಇತ್ತು ಎಂಬ ತೀರ್ಮಾನಕ್ಕೆ ನಾವು ಬರಬಹುದಾಗಿದೆ.

ಅದು ಇಂದಿನ ಯಕ್ಷಗಾನದ ರೂಪದಲ್ಲಿ ಇದ್ದಿರಲಾರದು. ಮಧ್ಯಕಾಲ ಅಂದರೆ ಸುಮಾರು ಹನ್ನೆರಡನೇ ಶತಮಾನದಿಂದ ೧೫-೧೬ನೇ ಶತಮಾನದವರೆಗೆ ಭಾರತದಾದ್ಯಂತ ಭಕ್ತಿ ಚಳವಳಿ ಬಲವಾಗಿದ್ದ ಕಾಲ. ಈ ಭಕ್ತಿ ಚಳವಳಿ ಆಯಾಯ ಭಾಗದ ಸ್ಥಳೀಯ ಜನಸಮುದಾಯದ ನಡುವಿದ್ದ ಮನರಂಜನ ಕಲೆಗಳನ್ನು ತಮ್ಮ ಧಾರ್ಮಿಕ ವಿಚಾರಗಳನ್ನು ಪಸರಿಸಲು ಬಳಸಿಕೊಂಡಿರಬೇಕು. ದಕ್ಷಿಣ ಭಾರತದ ಕಥಕಳಿ, ತೆರುಕೂತ್ತ್, ಗೊಂಬೆಯಾಟ, ವೀಥಿನಾಟಕ ಮೊದಲಾದ ಹಲವಾರು ಯಕ್ಷಗಾನ ಸಮೀಪವರ್ತಿ ಕಲೆಗಳನ್ನೇ ಗಮನಿಸಿದರೆ ಇದು ಸ್ಪಷ್ಟವಾಗುತ್ತದೆ. ಈ ಎಲ್ಲ ಕಲೆಗಳೂ ಧಾರ್ಮಿಕ ಸಂಬಂಧಿ ಕಥನಗಳನ್ನೇ ಜನರಿಗೆ ಅರ್ಥವಾಗುವಂತೆ, ರಂಜಿಸುವಂತೆ ಪ್ರದರ್ಶಿಸುವುದನ್ನು ನಾವು ಕಾಣಬಹುದು. ಜನಪದ ಮೂಲದಲ್ಲಿ ವೇಷ, ಹಾಡು, ಕುಣಿತ, ಮಾತುಗಳ ಸಾಧ್ಯತೆಗಳನ್ನು ಬಳಸಿಕೊಂಡಿದ್ದ ಕಲಾಪ್ರಕಾರಗಳು ಮಧ್ಯಕಾಲದಲ್ಲಿ ಭಕ್ತಿ ಚಳವಳಿಯ ಭಾಗವಾಗಿ ಬೆಳೆದವು. ಆಯಾಯ ಪ್ರದೇಶ ಮತ್ತು ಉದ್ದೇಶಗಳ ಹಿನ್ನೆಲೆಯನ್ನು, ಪ್ರಭಾವವನ್ನು ಬಳಸಿಕೊಂಡು ಪ್ರತ್ಯೇಕ ರೂಪವನ್ನು ಹೊಂದಿದವು ಎಂದು ನಾವು ಭಾವಿಸಬಹುದು. ಯಕ್ಷಗಾನವೇ ಮುಂದೆ ಪ್ರಾದೇಶಿಕ ಪ್ರಭಾವದಿಂದ ದೊಡ್ಡಾಟ, ಸಣ್ಣಾಟ, ಕೃಷ್ಣಪಾರಿಜಾತ, ತೆಂಕು, ಬಡಗು, ಬಡಾಬಡಗು ಎಂದೆಲ್ಲಾ ಬೆಳೆದು ತಮ್ಮದೇ ವೈಶಿಷ್ಟ್ಯವನ್ನು ಪಡೆದದ್ದನ್ನು ನಾವು ಗಮನಿಸಬಹುದಾಗಿದೆ.

ಯಕ್ಷಗಾನ ಸಾಹಿತ್ಯವನ್ನು ಲಿಖಿತ ಮತ್ತು ಅಲಿಖಿತ ಎಂದು ಎರಡು ಭಾಗ ಮಾಡಬಹುದು. ಲಿಖಿತವೆಂದರೆ ಭಾಗವತಿಕೆಗೆ ಒದಗಿಬರುವ ಪ್ರಸಂಗ ಸಾಹಿತ್ಯ. ಅಲಿಖಿತವೆಂದರೆ ಪ್ರಸಂಗ ಸಾಹಿತ್ಯವನ್ನು ಆಧರಿಸಿ ಕಟ್ಟುವ, ಬೆಳೆಸುವ ಮಾತುಗಾರಿಕೆ ಅರ್ಥಾತ್ ಅರ್ಥಗಾರಿಕೆ. 'ಪ್ರಸಂಗ' ಎಂಬುದು ಯಕ್ಷಗಾನ ಪ್ರದರ್ಶನದ ಕಥಾವಸ್ತುವನ್ನು ಒಳಗೊಂಡ ಮೂಲ ಪಠ್ಯ. ಈ ಪದವನ್ನು ಮೊದಲು ಬಳಸಿದವ ಪಾರ್ತಿಸುಬ್ಬ. ಆತ 'ಐರಾವತ'ದಲ್ಲಿ

ಭಾರತಾಮೃತಶರಧಿಯೆಂಬ ಕಥೆಯೊಳಗೆ ವಿ
ಸ್ತಾರವಾಗಿರುವ ಐರಾವತ **ಪ್ರಸಂಗ**ವನು
ಧಾರಿಣಿಯೊಳರಿವಂತೆ ವರ್ಣಿಸುವೆ ಕಣ್ವಪುರಕೃಷ್ಣನ ಕಟಾಕ್ಷದಿಂದ

(ಪಾರ್ತಿಸುಬ್ಬನ ಯಕ್ಷಗಾನಗಳು, ೨೦೦೯, ಪು.ಸಂ ೫೧೭)

ಎಂಬಲ್ಲಿ ಪ್ರಸಂಗ ಎಂಬ ಪದವನ್ನು ಬಳಸಿದ್ದಾನೆ. ಇನ್ನೊಂದೆಡೆ ಪಾರ್ತಿಸುಬ್ಬ ತನ್ನ 'ಉಂಗುರ ಸಂಧಿ'ಯಲ್ಲಿ 'ಇಂತೆಂದು ಒಬ್ಬರನ್ನೊಬ್ಬರು **ಪ್ರಸಂಗಿ**ಸಲಾಗಿ ಜಾಂಬವರು ತಮ್ಮೊಳಗೆ ಆಲೋಚನೆ ಮಾಡಿ ಹನುಮಂತನಂ ಕರೆದು ಏನೆಂದರು ಅಂದರೆ' ಎಂಬ ಮಾತು ಇದೆ. ಇಲ್ಲಿ 'ಪ್ರಸಂಗ' ಎಂಬುದು 'ಮಾತನಾಡು' ಎಂಬ ಅರ್ಥದಲ್ಲಿ ಬಂದಿದೆ. ಮಲಯಾಳಂನಲ್ಲಿ 'ಪ್ರಾಸಂಗಿಕನ್' ಎಂದರೆ ಭಾಷಣಕಾರ

ಎಂದರ್ಥ. 'ಕಥಾಪ್ರಸಂಗಂ' ಎಂದರೆ ಹರಿಕಥೆ ಎಂದರ್ಥ. ತಾಳಮದ್ದಳೆಗೂ ಉತ್ತರಕನ್ನಡ ಭಾಗದಲ್ಲಿ 'ಪ್ರಸಂಗ' ಎನ್ನುವುದಿದೆ. ಸಂಸ್ಕೃತದಲ್ಲೂ ಕಾಳಿದಾಸಾದಿ ಕವಿಗಳು ದಿಗ್ವಿಜಯ ಪ್ರಸಂಗ, ಯಾತ್ರಾಪ್ರಸಂಗ, ಸುರತಪ್ರಸಂಗ, ದ್ಯೂತಪ್ರಸಂಗ ಇತ್ಯಾದಿ ಪದಗಳನ್ನು ಬಳಕೆ ಮಾಡಿದ್ದಾರೆ.

'ಪ್ರಸಂಗ' ಎಂದರೆ ಕಥಾಸನ್ನಿವೇಶ, ಒಂದು ಘಟನೆ, ಪುರಾಣದ ಒಂದು ಸನ್ನಿವೇಶವನ್ನು ಪ್ರಸ್ತುತಪಡಿಸುವುದು ಎಂಬರ್ಥಗಳಿವೆ. ಯಕ್ಷಗಾನದಲ್ಲಿ ಅರ್ಥಗಾರಿಕೆಗೆ ಆಧಾರವಾಗಿರುವ ಭಾಗವತರ ಹಾಡುಗಾರಿಕೆಯ ಪಠ್ಯವನ್ನು 'ಪ್ರಸಂಗ' ಎನ್ನುತ್ತಾರೆ. ಡಾ. ಜಿ.ಎಸ್ ಭಟ್ಟರು ಕೆರೆಮನೆ ಶಂಭು ಹೆಗಡೆಯವರ ಕುರಿತಾದ ಸಂಪ್ರಬಂಧದಲ್ಲಿ "ಪ್ರಸಿದ್ಧ ಪುರಾಣಗಳ ಯಾವುದಾದರೊಂದು ಸಂದರ್ಭವನ್ನೊಳಗೊಂಡ ಕತಾನಕವುಳ್ಳ, ಯಕ್ಷಗಾನದ್ದೇ ಆದ ರಾಗತಾಳಗಳ ಛಂದೋರೂಪದಲ್ಲಿ ನಿರೂಪಣೆಗೊಂಡ, ಸುಮಾರಾಗಿ ಒಂದು ರಾತ್ರಿಯ ಅವಧಿಯಲ್ಲಿ ಆಡಿ ಮುಗಿಸಬಲ್ಲ ರಂಗಗುಣದ ಸಾಧ್ಯತೆಯುಳ್ಳ ಭಾಷಾ ಮಾಧ್ಯಮದ ಕೃತಿ" (ತಾಳಮದ್ದಳೆ ಪರಂಪರೆ ಮತ್ತು ಹೊಸಮಾರ್ಗ, ೧೯೯೨, ಪು.ಸಂ ೮) ಎಂದು ಪ್ರಸಂಗವನ್ನು ವ್ಯಾಖ್ಯಾನಿಸಿದ್ದಾರೆ. ಈ ಪ್ರಸಂಗ ಸಾಹಿತ್ಯವು ಶ್ರವ್ಯ ಮತ್ತು ದೃಶ್ಯ ಎರಡೂ ನೆಲೆಗಳನ್ನು ಹೊಂದಿದೆ. ಈ ಎರಡರ ಗುಣವೂ ಪ್ರಸಂಗದಲ್ಲಿ ಅಡಕವಾಗಿರುತ್ತದೆ.

ರಾಘವ ನಂಬಿಯಾರರು 'ಆಶುವೈಖರಿ' ಕೃತಿಯಲ್ಲಿ ಪ್ರಸಂಗವನ್ನು ಕುರಿತು ಹೀಗೆನ್ನುತ್ತಾರೆ; "ಪ್ರಸಂಗ ಮೂಲತ: ಒಂದು ಗೀತ ರೂಪಕ. ಆದರೆ ಅದರ ಉದ್ದೇಶ ಸರಸ ಸಂಭಾಷಣೆಯಿಂದ ಕೂಡಿದ ಸೊಗಸಾದ ರಂಗಪ್ರದರ್ಶನ ಏರ್ಪಡಿಸುವುದು. ಕರ್ನಾಟಕದ ಕೆಲವು ಕಡೆಗಳಲ್ಲಿ ಲಿಖಿತವಾಗಿ ಕಾಣಿಸುವ ಕರಾವಳಿ ಹಾಗೂ ಮಲೆನಾಡಿನ ಭಾಗಗಳಲ್ಲಿ ಆಶು ವಚನಗಾರಿಕೆಯಲ್ಲಿ ಕಾಣಿಸುವ ಸಂಭಾಷಣೆಯಿಂದ ಯಕ್ಷಗಾನದ ರಂಗಕೃತಿ ಗದ್ಯ-ಪದ್ಯ ಮಿಶ್ರಿತವಾದ ದೃಶ್ಯ ಕಾವ್ಯಕ್ಕೆ ಸೇರಬೇಕು" (ಆಶುವೈಖರಿ, ೨೦೧೨, ಪು.ಸಂ ೧೯೬) ಎಂದು ಅಭಿಪ್ರಾಯಪಟ್ಟಿದ್ದಾರೆ.

ಟಿ. ಕೃಷ್ಣ ಭಟ್ಟರು ಪ್ರಸಂಗ ಸಾಹಿತ್ಯದ ಕುರಿತು ಮಂಡಿಸುವ ಅಭಿಪ್ರಾಯ ಹೀಗಿದೆ; "ಯಕ್ಷಗಾನ ಕಲೆ ಪ್ರಾಯೋಗಿಕವಾಗಿ ತಾಳಮದ್ದಳೆ, ಆಟಗಳ ರೂಪದಲ್ಲಿ ರಾತ್ರಿ ಜಾಗರಣೆಯ ಸುಮಾರು ಎಂಟು ಗಂಟೆ ಅವಧಿಯ ಕಾರ್ಯಕ್ರಮದ ವಿವಿಧ ರಸಾತ್ಮಕ ಕಥಾವಸ್ತುವನ್ನು ಒಳಗೊಂಡಿರುತ್ತದೆ. ಇಂತಹ ಒಂದೊಂದು ಪರಿಪೂರ್ಣ ಕಥಾತ್ಮಕ ಪದಗಳ ಕೃತಿಯನ್ನು ಪ್ರಸಂಗ ಎನ್ನುವರು". (ಆಶು ವೈಭವ, ೧೯೮೯, ಪು.ಸಂ ೧೩೨) ಎಂದಿದ್ದಾರೆ.

ಒಟ್ಟಿನಲ್ಲಿ ಯಕ್ಷಗಾನದ ಮೂಲ ಪಠ್ಯ ಮತ್ತು ಪ್ರದರ್ಶನದ ಭಾಗದಲ್ಲಿ ಬೆಳೆಯುವ ಪಠ್ಯವಾಗಿ ಪದ್ಯ ಗದ್ಯಗಳ ಸಮರಸದ ಸಮ್ಮಿಲನವಾಗಿ ಪ್ರಸಂಗ ಸಾಹಿತ್ಯವನ್ನು ಪರಿಗಣಿಸಬೇಕಿದೆ. ಯಕ್ಷಗಾನ ಪ್ರಸಂಗಗಳ ಪ್ರಮುಖ ಲಕ್ಷಣಗಳನ್ನು ಹೀಗೆ ವಿವರಿಸಬಹುದು.

- ಪುರಾಣ, ಮಹಾಭಾರತ, ರಾಮಾಯಣ, ಭಾಗವತ, ಜಾನಪದ, ಸಾಮಾಜಿಕ, ಚಾರಿತ್ರಿಕ ಕಾಲ್ಪನಿಕ ಹೀಗೆ ಯಾವುದಾದರೂ ಒಂದು ನೆಲೆಯ ಕಥಾಘಟನೆಯ ಪದ್ಯರೂಪವೇ ಯಕ್ಷಗಾನ ಪ್ರಸಂಗ.
- ಪ್ರಸಂಗ ಪದ್ಯಗಳು ಛಂದಸ್ಸು ಅಥವಾ ಮಟ್ಟು ಆಧರಿಸಿ ರೂಪುಗೊಂಡಿವೆ. ಅವುಗಳು ತಾಳ ಲಯ ಬದ್ಧವಾಗಿವೆ.
- ರಸಾಭಿವ್ಯಕ್ತಿಗೆ ಅನುಕೂಲವಾಗುವಂತೆ ಪ್ರಸಂಗದ ನಡೆ ಇರುತ್ತದೆ.
- ಪ್ರಸಂಗದೊಳಗೆ ಪ್ರದರ್ಶನಯೋಗ್ಯವಾದ ಕಾಲಬದ್ಧತೆಯಿದೆ. ಅದು ಮಹಾಕಾವ್ಯವಲ್ಲ. ಸರಳತೆ ಅದರ ಜೀವಾಳ. ಪಾಂಡಿತ್ಯ ಪ್ರದರ್ಶನಕ್ಕೆ ವಿಪುಲ ಅವಕಾಶ ಬಯಲಾಟಗಳಲ್ಲಿಲ್ಲ, ತಾಳಮದ್ದಳೆಗಳಲ್ಲಿದೆ.
- ಸತ್ಯ ಮತ್ತು ಧರ್ಮಕ್ಕೆ ಅಂತಿಮ ಜಯ ಎಂಬ ಮೌಲ್ಯ ಪ್ರತಿಪಾದನೆ, ಮೌಲ್ಯ ಸಂಘರ್ಷದ ಚಿತ್ರಣ, ಮನರಂಜನೆ ಇವು ಪ್ರಸಂಗಗಳ ಮುಖ್ಯ ಉದ್ದೇಶ.

ಪೌರಾಣಿಕ ಪ್ರಸಂಗಗಳು, ಐತಿಹಾಸಿಕ ಪ್ರಸಂಗಗಳು, ಜಾನಪದೀಯ ಪ್ರಸಂಗಗಳು, ಕಾಲ್ಪನಿಕ ಪ್ರಸಂಗಗಳು, ಸಾಂದರ್ಭಿಕ ಪ್ರಸಂಗಗಳು ಎಂದು ವಸ್ತುವಿಗನುಗುಣವಾಗಿ ವಿವಿಧ ವಿಭಾಗಗಳನ್ನು ಗುರುತಿಸಬಹುದಾಗಿದೆ.

೧೫೮೦-೧೬೨೦ರ ಕಾಲಾವಧಿಯಲ್ಲಿದ್ದ ಕುಂಬಳೆಯ ಪಾರ್ತಿಸುಬ್ಬ ತೆಂಕುತಿಟ್ಟು ಯಕ್ಷಗಾನದ ಆರಂಭದ ಮಹತ್ವದ ಪ್ರಸಂಗಕರ್ತ. ಯಕ್ಷಗಾನ ವಾಲ್ಮೀಕಿಯೆಂದೇ ಪ್ರಸಿದ್ಧನಾದವನು. ಪುತ್ರಕಾಮೇಷ್ಟಿಯಿಂದ ತೊಡಗಿ ಕುಶಲವರ ಕಾಳಗದವರೆಗೆ ಇರುವ ಕಥೆಯನ್ನು ಒಳಗೊಂಡ ೮ ರಾಮಾಯಣ ಪ್ರಸಂಗಗಳನ್ನು ಬರೆದ ಮಹಾಕವಿ ಈತ. ಇದಲ್ಲದೇ ಕೃಷ್ಣಚರಿತೆ ಮತ್ತು ಐರಾವತವೆಂಬ ಎರಡು ಪ್ರಸಂಗಗಳನ್ನೂ ರಚಿಸಿದ್ದಾನೆ. 'ಸಭಾಲಕ್ಷಣ'ವೆಂಬ ಪೂರ್ವರಂಗದ ಕುರಿತಾದ ಕೃತಿಯನ್ನೂ ರಚಿಸಿದ್ದಾನೆ. ಆವರೆಗೆ ಇದ್ದ ಜನಪದ ಮೂಲದ ಯಕ್ಷಗಾನಕ್ಕೆ ಕೇರಳದ ರಾಮನಾಟ್ಟಂನ ಮಾದರಿಯಲ್ಲಿ ಒಂದು ಶಾಸ್ತ್ರೀಯ ಚೌಕಟ್ಟನ್ನು ಒದಗಿಸುವ 'ಸಭಾಲಕ್ಷಣ' ಯಕ್ಷಗಾನದ ಬೆಳವಣಿಗೆಯ ದೃಷ್ಟಿಯಿಂದ ಐತಿಹಾಸಿಕ ಮಹತ್ವದ ಕೃತಿಯಾಗಿದೆ.

ಪಾರ್ತಿಸುಬ್ಬನಲ್ಲದೇ ೧೮೦೦ರ ಕಾಲದವನಾದ ಉಡುಪಿಯ ದೇವಿದಾಸ ಕವಿಯ ಪ್ರಸಂಗಗಳು ಯಕ್ಷಗಾನ ಕ್ಷೇತ್ರದಲ್ಲಿ ಬಹುಪ್ರಸಿದ್ಧವಾದವುಗಳು. ತೆಂಕು ಬಡಗುಗಳಲ್ಲಿ ಪ್ರಸಿದ್ಧವಾದ 'ದೇವಿ ಮಹಾತ್ಮೆ'ಯ ಕುರಿತ ಪ್ರಸಂಗವನ್ನು ಮೊದಲು ಬರೆದವನು ದೇವಿದಾಸ. ಅನಂತರ ಅನೇಕ ಭಾಗವತರು ದೇವಿ ಮಹಾತ್ಮೆ

ಪ್ರಸಂಗವನ್ನು ಬರೆದದ್ದಿದೆ. ಜನಪ್ರಿಯವಾದ 'ಕೃಷ್ಣಸಂಧಾನ' ಪ್ರಸಂಗವೂ ಈತನದ್ದೇ. ೭ ಪ್ರಸಂಗಗಳನ್ನು ಈತ ರಚಿಸಿದ್ದಾನೆ. ತೆಂಕು ತಿಟ್ಟಿನ ಕಥಾರಂಭದಲ್ಲಿ ಹಾಡುವ 'ಅಂಬುರುಹದಳನೇತ್ರೆ ಶ್ರೀದುರ್ಗಾಂಬಿಕೆಯ ಫಲಗೊಂಡು' ಎಂಬ ಪದ್ಯ ಹಾಗೂ ಬಡಗುತಿಟ್ಟಿನಲ್ಲಿ ಹಾಡುವ ನಾಂದಿಪದ್ಯ 'ಇಂದಿರೆಗೆ ತಲೆಬಾಗಿ' ಎಂಬವುಗಳು ಇವನ ರಚನೆಗಳಾಗಿವೆ.

ಮುಂದೆ ಯಕ್ಷಗಾನ ಪ್ರಸಂಗ ಸಾಹಿತ್ಯದಲ್ಲಿ ಸಾವಿರಕ್ಕೂ ಅಧಿಕ ಕವಿಗಳು ಪ್ರಸಂಗ ರಚನೆಯನ್ನು ಮಾಡಿದ್ದಾರೆ. ಪ್ರಕಟಗೊಂಡದ್ದಕ್ಕಿಂತ ಅಪ್ರಕಟಿತ ಪ್ರಸಂಗಗಳೇ ಬಹುಪಾಲು. ವಸಂತ ಭಾರದ್ವಾಜರು 'ಕರ್ನಾಟಕ ಯಕ್ಷಗಾನ ಕವಿಚರಿತೆ'ಯಲ್ಲಿ ೯೦೩ ಕವಿಗಳ ಕುರಿತು ಮಾಹಿತಿ ನೀಡಿದ್ದಾರೆ. ಕನ್ನಡವಲ್ಲದೇ ತುಳು, ಹವ್ಯಕ, ಕೊಂಕಣಿ, ಹಿಂದಿ, ಇಂಗ್ಲಿಷ್, ಮಲಯಾಳಂ ಭಾಷೆಗಳಲ್ಲೂ ಪ್ರಸಂಗಗಳು ರಚನೆಯಾಗಿವೆ. ಹಸ್ತಪ್ರತಿಗಳಲ್ಲಿರುವ ಇಂತಹ ಪ್ರಸಂಗಗಳ ಸಂಗ್ರಹ, ಸಂಪಾದನೆ, ಪ್ರಕಟಣೆಗಳು ಆಗಬೇಕಿದೆ. ಪಾರ್ತಿಸುಬ್ಬ, ದೇವಿದಾಸ ಕವಿಗಳಲ್ಲದೆ, ಮುದ್ದಣ, ಹಟ್ಟಿಯಂಗಡಿ ರಾಮಭಟ್ಟ, ಹಲಸಿನ ಹಳ್ಳಿ ನರಸಿಂಹ ಶಾಸ್ತ್ರಿ, ಕೀರಿಕ್ಕಾಡು ವಿಷ್ಣು ಮಾಸ್ತರ್, ಅಮೃತ ಸೋಮೇಶ್ವರ, ಅಗರಿ ಶ್ರೀನಿವಾಸ ಭಾಗವತರು, ಹೊಸ್ತೋಟ ಮಂಜುನಾಥ ಭಾಗವತರು, ಗೇರುಸೊಪ್ಪೆ ಶಾಂತಪ್ಪಯ್ಯ, ಸೀತಾನದಿ ಗಣಪಯ್ಯ ಶೆಟ್ಟಿ ಮೊದಲಾದ ಹಲವರು ಯಕ್ಷಗಾನ ಪ್ರಸಂಗಗಳ ರಚನೆ ಮಾಡಿದ್ದಾರೆ. ಯಕ್ಷಗಾನ ಕವಿಗಳ ಸಾಲಿನಲ್ಲಿ ಆರಂಭಿಕರಲ್ಲಿ ಒಬ್ಬನಾದ ಪಾರ್ತಿಸುಬ್ಬನ ಯಕ್ಷಗಾನ ಪ್ರಸಂಗಗಳು ಇಂದಿಗೂ ಯಕ್ಷಗಾನ ಬಯಲಾಟ ಮತ್ತು ತಾಳಮದ್ದಳೆಗಳಲ್ಲಿ ಜನಪ್ರಿಯವಾದವು. ಅವನ ಪ್ರಸಂಗಗಳ ಪಠ್ಯವನ್ನು ಮತ್ತು ಅದರ ಪ್ರಯೋಗದ ವಿಶ್ಲೇಷಣೆಯನ್ನು ನಡೆಸುವುದು ಈ ಅಧ್ಯಯನದ ಉದ್ದೇಶವಾಗಿದೆ.

ಪಾರ್ತಿಸುಬ್ಬನು ರಚಿಸಿರುವ ಪ್ರಸಂಗಗಳನ್ನು ಬಹುಮುಖವಾಗಿ ಅಧ್ಯಯನ ಮಾಡುವ ಮುಖ್ಯ ಉದ್ದೇಶವನ್ನು ಈ ಮಹಾಪ್ರಬಂಧವು ಹೊಂದಿದೆ. ಅವನ ಪ್ರಸಂಗಗಳನ್ನು ರೂಪಿಸಿರುವ ಕೇರಳದ ರಂಗಪ್ರಕಾರಗಳ ಪ್ರೇರಣೆಯನ್ನು ಗುರುತಿಸಲಾಗಿದೆ. ಪಾರ್ತಿಸುಬ್ಬನ ಬಗೆಗೆ ನಡೆದಿರುವ ಮೊದಲ ಹಂತದ ಅಧ್ಯಯನಗಳನ್ನು ಪರಿಶೀಲಿಸಿ, ಈಗಾಗಲೇ ನಡೆದಿರುವ ಚರ್ಚೆಗಳನ್ನು ಕ್ರೋಢೀಕರಿಸಲಾಗಿದೆ. ಪಾರ್ತಿಸುಬ್ಬನ ಎಲ್ಲಾ ಪ್ರಸಂಗಗಳನ್ನು ಸಮಗ್ರವಾಗಿ ಮೊದಲ ಬಾರಿಗೆ ವಿಶ್ಲೇಷಿಸುವ ಉದ್ದೇಶವನ್ನು ಈ ಮಹಾಪ್ರಬಂಧವು ಹೊಂದಿದೆ. ಪ್ರಸಂಗಗಳ ಆಕರ ಶೋಧ, ಸಾಹಿತ್ತಿಕ ಪಠ್ಯವಾಗಿ ಅವುಗಳನ್ನು ಪರಿಗಣಿಸಿ ವರ್ಣನೆಗಳು, ಪ್ರಾಸ, ಅಲಂಕಾರ ಹೀಗೆ ಪ್ರಸಂಗಗಳ ಒಟ್ಟು ಶೈಲಿಯನ್ನು ವಿಶ್ಲೇಷಿಸುವ ಗುರಿಯನ್ನು ಇಟ್ಟುಕೊಳ್ಳಲಾಗಿದೆ. ಪಾರ್ತಿಸುಬ್ಬನ ಪ್ರಸಂಗಗಳನ್ನು ಸಾಹಿತ್ಯಕ ಪಠ್ಯವಾಗಿ ಮಾತ್ರ ನೋಡದೇ 'ರಂಗ ಪಠ್ಯ'ವಾಗಿಯೂ ನೋಡಿ ಅಧ್ಯಯನದ ಪರಿಧಿಯನ್ನು ವಿಸ್ತರಿಸುವ ಉದ್ದೇಶವನ್ನು ಇಟ್ಟುಕೊಳ್ಳಲಾಗಿದೆ. ತೆಂಕುತಿಟ್ಟು ಯಕ್ಷಗಾನದ

ಪ್ರವರ್ತಕನಾದ ಪಾರ್ತಿಸುಬ್ಬನು ತನ್ನ ಅನಂತರದ ಯಕ್ಷಗಾನ ಕವಿಗಳ ಮೇಲೆ ಬೀರಿರುವ ಪ್ರಭಾವ ಗಣನೀಯವಾದುದು. ಇಂತಹ ಪ್ರಭಾವ ಪ್ರೇರಣೆಗಳು ಮತ್ತು ಅವು ಒಟ್ಟು ಯಕ್ಷಗಾನ ಪರಂಪರೆಯನ್ನು ಕಟ್ಟಿ ಬೆಳೆಸಿದ ರೀತಿಗಳನ್ನು ಗುರುತಿಸುವ ಆಶಯವನ್ನು ಕೂಡ ಈ ಅಧ್ಯಯನವು ಹೊಂದಿದೆ.

ಅಧ್ಯಯನದ ವ್ಯಾಪ್ತಿ ಮತ್ತು ವಿಧಾನ

ಪಾರ್ತಿಸುಬ್ಬನು ಯಕ್ಷಗಾನ ಪ್ರಸಂಗ ಸಾಹಿತ್ಯಕ್ಕೆ ನೀಡಿದ ಕೊಡುಗೆ ಅಪೂರ್ವವಾದುದು. ಈತನು ಮೇಳದಲ್ಲಿ ಭಾಗವತನಾಗಿ ತಿರುಗಾಡುತ್ತಿದ್ದನೆಂದು ಮುಳಿಯ ತಿಮ್ಮಪ್ಪಯ್ಯನವರು ಹೇಳುತ್ತಾರೆ. ಆಗ ಸ್ವತ: ಪದ್ಯಗಳನ್ನು ರಚಿಸಿಕೊಳ್ಳಬೇಕಾದ ಒತ್ತಡ ಪಾರ್ತಿಸುಬ್ಬನ ಮೇಲಿದ್ದಿರಬೇಕು. ಕೇರಳದ ರಾಮನಾಟ್ಟಂ, ಕಥಕಳಿಯ ನಿಕಟ ಸಂಪರ್ಕವಿದ್ದ ಪಾರ್ತಿಸುಬ್ಬ ಕೊಟ್ಟಾರಕ್ಕರ ಮಹಾರಾಜನಿಂದ ರಚಿತವಾದ 'ರಾಮನಾಟ್ಟಂ' ಕೃತಿಯ ಪದ್ಯಗಳನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದಾನೆಂದು ಉಲ್ಲೇಖಗಳಿವೆ. (ಕುಕ್ಕಿಲ ಸಂಪುಟ, ೧೯೯೮, ಪು.೧೪೯-೧೫೬) ಇದನ್ನು ಪುಷ್ಟೀಕರಿಸುವಂತೆ ಪಾರ್ತಿಸುಬ್ಬ ರಾಮಾಯಣದ ವಸ್ತು ಆಧಾರಿತ ಹಲವು ಪ್ರಸಂಗಗಳನ್ನು ಬರೆದಿದ್ದಾನೆ.

ಪಾರ್ತಿಸುಬ್ಬನ ಪ್ರಸಂಗ ಕೃತಿಗಳು

೧. ಪುತ್ರಕಾಮೇಷ್ಠಿ-ಸೀತಾಕಲ್ಯಾಣ
೨. ಪಟ್ಟಾಭಿಷೇಕ-ಪಂಚವಟಿ
೩. ಪಂಚವಟಿ-ವಾಲಿ ಸಂಹಾರ
೪. ಉಂಗುರ ಸಂಧಿ
೫. ಸೇತುಬಂಧನ
೬. ಅಂಗದ ಸಂಧಾನ
೭. ಕುಂಭಕರ್ಣಾದಿ ಕಾಳಗ
೮. ಕುಶಲವರ ಕಾಳಗ
೯. ಕೃಷ್ಣಚರಿತೆ
೧೦. ಐರಾವತ

ಪಾರ್ತಿಸುಬ್ಬ 'ತೆಂಕುತಿಟ್ಟು ಯಕ್ಷಗಾನದ ವಾಲ್ಮೀಕಿ' ಎಂಬ ಹೆಗ್ಗಳಿಕೆಗೆ ಪಾತ್ರನಾದ ಕವಿ. ಪಾರ್ತಿಸುಬ್ಬನ ಯಕ್ಷಗಾನ ಪ್ರಸಂಗಗಳು ಸರಳವೂ, ಅರ್ಥಗರ್ಭಿತವೂ, ಕಾವ್ಯಾತ್ಮಕವೂ ಆಗಿ ರಸಸ್ಯಂದಿಯಾಗಿದೆ. ಯಕ್ಷಗಾನ ಪ್ರಸಂಗ ಪರಂಪರೆಯಲ್ಲಿ ಉಪಲಬ್ಧವಾಗಿರುವ ಪ್ರಾಚೀನ ಪ್ರಸಂಗಗಳಲ್ಲಿ ಪಾರ್ತಿಸುಬ್ಬನ ಎಂಟು ರಾಮಾಯಣ ಪ್ರಸಂಗಗಳು ಮತ್ತು ಒಂದು ಮಹಾಭಾರತದ ಪ್ರಸಂಗ 'ಐರಾವತ' ಮತ್ತೊಂದು ಭಾಗವತದ ಪ್ರಸಂಗ 'ಕೃಷ್ಣಚರಿತೆ' ಮಹತ್ತ್ವಪೂರ್ಣವಾದವುಗಳು. ಇಂದಿಗೂ ಯಕ್ಷಗಾನ

ರಂಗದಲ್ಲಿ ಹೆಚ್ಚು ಪ್ರಚಲಿತದಲ್ಲಿರುವ ಈ ಪ್ರಸಂಗಗಳು ತಮ್ಮ ಪ್ರಾಚೀನತೆ, ಕಾವ್ಯ ಗುಣ ಮತ್ತು ರಂಗಯೋಗ್ಯ ಗುಣಗಳಿಂದ ಪ್ರಾಮುಖ್ಯವನ್ನು ಹೊಂದಿವೆ.

ಪಾರ್ತಿಸುಬ್ಬ ಕವಿಯ ಕಾಲದೇಶಗಳ ಕುರಿತು ಸಾಕಷ್ಟು ವಿವಾದಗಳು, ಸಮರ್ಥನೆಗಳು, ಚರ್ಚೆಗಳೂ ನಡೆದಿವೆ. ಶಿವರಾಮ ಕಾರಂತ, ಕುಕ್ಕಿಲ ಕೃಷ್ಣ ಭಟ್ಟ, ಮುಳಿಯ ತಿಮ್ಮಪ್ಪಯ್ಯ, ಗೋವಿಂದ ಪೈ, ಅಮೃತ ಸೋಮೇಶ್ವರ, ವೆಂಕಟರಾಜ ಪುಣಿಂಚತ್ತಾಯ, ಕಯ್ಯಾರ ಕಿಂಞಣ್ಣ ರೈ ಮೊದಲಾದ ವಿದ್ವಾಂಸರು ಈ ಚರ್ಚೆಯನ್ನು ಬೆಳೆಸಿರುವುದು ಕುತೂಹಲಕಾರಿಯಾದ ಅಂಶ. ಈ ಚರ್ಚೆಗಳನ್ನು ವಿಶ್ಲೇಷಣೆಗೊಳಪಡಿಸಿ ಪಾರ್ತಿಸುಬ್ಬನ ಕಾಲ ದೇಶ ಚರ್ಚೆಯ ನಿರ್ಣಯಗಳನ್ನು ಅಧಿಕೃತಗೊಳಿಸುವ ಉದ್ದೇಶದೊಂದಿಗೆ ಪಾರ್ತಿಸುಬ್ಬನ ಯಕ್ಷಗಾನ ಪ್ರಸಂಗಗಳನ್ನು ಪಠ್ಯವಾಗಿ ಹಾಗೂ ಪ್ರದರ್ಶನದ ನೆಲೆಯಿಂದ ಅಧ್ಯಯನಕ್ಕೊಳಪಡಿಸುವುದು ಈ ಸಂಶೋಧನೆಯ ಮುಖ್ಯ ಲಕ್ಷ್ಯ. ಮುಖ್ಯವಾಗಿ ಕೇರಳದ ಕಾಸರಗೋಡು ಜಿಲ್ಲೆಯ ಚಂದ್ರಗಿರಿಯಿಂದ ಈಚೆಗೆ ಉಡುಪಿಯವರೆಗೆ ಪ್ರಚಲಿತವಿರುವ ತೆಂಕುತಿಟ್ಟು ಯಕ್ಷಗಾನವನ್ನು ಪ್ರಧಾನ ಭೂಮಿಕೆಯಾಗಿಟ್ಟು ಕೊಂಡು ಈ ತಿಟ್ಟಿನ ರೂಪೀಕರಣದಲ್ಲಿ ಪಾರ್ತಿಸುಬ್ಬನ ಚಿಂತನೆಗಳ ಪ್ರಾಮುಖ್ಯ ಏನು? ಆತನ ಪ್ರಸಂಗಗಳ ಸಾಹಿತ್ಯ ಮೌಲ್ಯ ಹಾಗೂ ಪ್ರದರ್ಶನದ ಕಲ್ಪನೆ ಹೇಗಿತ್ತು ಎಂಬುದನ್ನು ಅರಿಯುವುದು ಈ ಅಧ್ಯಯನದ ಉದ್ದೇಶವೂ, ವ್ಯಾಪ್ತಿಯೂ ಆಗಿದೆ.

ಈ ಅಧ್ಯಯನವು ಮುಖ್ಯವಾಗಿ ಗ್ರಂಥಾಧ್ಯಯನದ ಮಾದರಿಯದ್ದಾದರೂ ಪಾರ್ತಿಸುಬ್ಬನ ಯಕ್ಷಗಾನ ಪ್ರಸಂಗಗಳ ಪ್ರದರ್ಶನ ಸಾಧ್ಯತೆಯ ಕುರಿತ ಚಿಂತನೆಯನ್ನೂ ಒಳಗೊಂಡಿರುವುದರಿಂದ ಯಕ್ಷಗಾನ ಭಾಗವತರು, ಕಲಾವಿದರುಗಳ ಸಂದರ್ಶನ, ಬಯಲಾಟ ಮತ್ತು ತಾಳಮದ್ದಳೆಗಳ ಪ್ರದರ್ಶನದ ದಾಖಲಾತಿಯನ್ನು ಮಾಡಲಾಗಿದೆ. ಆದ್ದರಿಂದ ಗ್ರಂಥಾಧ್ಯಯನ ಹಾಗೂ ಕ್ಷೇತ್ರಕಾರ್ಯ ಎರಡೂ ಅಧ್ಯಯನ ವಿಧಾನಗಳನ್ನು ಇಲ್ಲಿ ಬಳಸಿಕೊಳ್ಳಲಾಗಿದೆ. ಮುಖ್ಯವಾಗಿ ವಿಶ್ಲೇಷಣಾತ್ಮಕ, ವಿವರಣಾತ್ಮಕ ಹಾಗೂ ವಿಮರ್ಶಾತ್ಮಕ ನೆಲೆಗಳ ಮೂಲಕ ಪಾರ್ತಿಸುಬ್ಬನ ಪ್ರಸಂಗ ಸಾಹಿತ್ಯವನ್ನು ಇಲ್ಲಿ ಅಧ್ಯಯನಕ್ಕೊಳಪಡಿಸಲಾಗಿದೆ.

ಯಕ್ಷಗಾನ ಪ್ರಸಂಗಗಳಿಗೆ ಸಂಬಂಧಿಸಿದಂತೆ 'ಪಠ್ಯ' ಮತ್ತು 'ಪ್ರದರ್ಶನ' ಎಂಬ ಎರಡು ಪರಿಕಲ್ಪನೆಗಳನ್ನು ಸ್ಪಷ್ಟಪಡಿಸಿಕೊಳ್ಳುವ ಅಗತ್ಯವಿದೆ. ಯಕ್ಷಗಾನ ಕವಿಗಳು ಬರೆದಿರುವ ಪ್ರಸಂಗಗಳನ್ನು ಕಾವ್ಯ ಪಠ್ಯಗಳಾಗಿ ವಿವೇಚಿಸುವುದು ಒಂದು ವಿಧಾನವಾದರೆ, ಅವುಗಳನ್ನು ಪ್ರದರ್ಶನ ಪಠ್ಯಗಳನ್ನಾಗಿ ವಿವೇಚಿಸುವುದು ಮತ್ತೊಂದು ವಿಧಾನವಾಗಿದೆ. ತೌಲನಿಕವಾಗಿ ನೋಡಿದರೆ ಪ್ರದರ್ಶನ ಪಠ್ಯವು ಪ್ರಸಂಗ ಪಠ್ಯಕ್ಕಿಂತ ಹೆಚ್ಚು ಸಂಕೀರ್ಣವಾದುದು. ಯಕ್ಷಗಾನ ತಾಳಮದ್ದಳೆ ಮತ್ತು ಬಯಲಾಟ ಹೀಗೆ ಪ್ರದರ್ಶನದ ಎರಡು ಆಯಾಮಗಳಿವೆ. ಪ್ರದರ್ಶನ ಈ ಎರಡು ಬಗೆಗಳಲ್ಲಿಯೂ ಪ್ರಸಂಗದ ಪದ್ಯಗಳು ಬಳಕೆಯಾಗುತ್ತವೆ.

ಭಾಗವತರು ಪ್ರಸಂಗದ ಪದ್ಯಗಳನ್ನು ಸೂಕ್ತವಾದ ರೀತಿಯಲ್ಲಿ ಹಾಡುತ್ತಾರೆ. ಹೀಗೆ ಬಳಕೆಯಾಗುವ ಪದ್ಯಗಳು ಪ್ರದರ್ಶನದ ಕಾವ್ಯಪಠ್ಯವಾಗಿದೆ. ತಾಳಮದ್ದಳೆ ಮತ್ತು ಆಟ/ಬಯಲಾಟಗಳ ಸ್ವರೂಪ ಹೆಚ್ಚು ಸಂಕೀರ್ಣವಾಗಿದೆ. ರಂಗಸ್ಥಳದ ಸ್ವರೂಪದಲ್ಲಿ ವ್ಯತ್ಯಾಸಗಳಿವೆ. ಹಿಮ್ಮೇಳಕ್ಕಿಂತ ಹೆಚ್ಚಾಗಿ ಮುಮ್ಮೇಳದಲ್ಲಿ ವೇಷಭೂಷಣಗಳನ್ನು ಧರಿಸಿರುವ ಪಾತ್ರಧಾರಿಗಳ ವಿಸ್ತಾರವಾದ ಕುಣಿತ, ಅಭಿನಯ, ಮಾತುಗಾರಿಕೆ ಹೀಗೆ ಪ್ರದರ್ಶನದಲ್ಲಿ ಪರಿಕರಗಳು ಹೆಚ್ಚಿರುತ್ತವೆ. ರಂಗಕಲೆಗಳಾಗಿರುವ ತಾಳಮದ್ದಳೆ ಮತ್ತು ಬಯಲಾಟವು ಇವು ಪ್ರಸಂಗದ ಜೊತೆ ಪಡೆದಿರುವ ಸಂಬಂಧದ ಹಿನ್ನೆಲೆಯಲ್ಲಿ ಪಾರ್ತಿಸುಬ್ಬನ ಪ್ರಸಂಗಗಳನ್ನು ವಿಶ್ಲೇಷಿಸುವ ವಿಧಾನವನ್ನು ಪ್ರಬಂಧದಲ್ಲಿ ಅನುಸರಿಸಲಾಗಿದೆ.

ಪಾರ್ತಿಸುಬ್ಬನ ಪ್ರಸಂಗಗಳು ಕಾವ್ಯ ಪಠ್ಯವಾಗಿಯೂ ಓದಿಗೆ ಒದಗುವಂತೆ ತಾಳಮದ್ದಳೆ ಮತ್ತು ಬಯಲಾಟದಲ್ಲೂ ಪ್ರದರ್ಶನ ಪಠ್ಯವಾಗಿ ಬಳಕೆಯಾಗಿವೆ. ಹೀಗೆ ಬಳಕೆಯಾಗುವಾಗ ಪದ್ಯಗಳ ಆಯ್ಕೆ ಮತ್ತು ಸಂಖ್ಯಾಪ್ರಮಾಣದಲ್ಲಿ ವ್ಯತ್ಯಾಸಗಳಿರುವುದು ಕಂಡುಬರುತ್ತದೆ. ಕಾವ್ಯ ಪಠ್ಯವೊಂದು ಪ್ರಸಂಗ ಪಠ್ಯವಾಗುವ ಪ್ರಕ್ರಿಯೆಯ ವಿಧಾನವನ್ನು ಪಾರ್ತಿಸುಬ್ಬನ ಪ್ರಸಂಗಗಳನ್ನು ರಂಗಪಠ್ಯವನ್ನಾಗಿ ಅಧ್ಯಯನ ಮಾಡುವ ಅಧ್ಯಾಯದಲ್ಲಿ ಅನುಸರಿಸಲಾಗಿದೆ. ಪಾರ್ತಿಸುಬ್ಬನ ಪ್ರಸಂಗಗಳ ರಂಗಪಠ್ಯವನ್ನು ರೂಪಿಸಿದ ಅಂಶಗಳನ್ನು ತಾಳಮದ್ದಳೆ ಮತ್ತು ಬಯಲಾಟ ಪ್ರದರ್ಶನದ ಸಂದರ್ಭವನ್ನು ಗಮನಿಸಿ ವಿವೇಚನೆ ನಡೆಸಲಾಗಿದೆ.

ಈವರೆಗೆ ನಡೆದ ಅಧ್ಯಯನಗಳ ಸಮೀಕ್ಷೆ

ಯಕ್ಷಗಾನ ಪ್ರಸಂಗ ಸಾಹಿತ್ಯವನ್ನು ಸಾಹಿತ್ಯ ಅಧ್ಯಯನದ ಸಂದರ್ಭದಲ್ಲಿ ಲಘುವಾಗಿ ಪರಿಗಣಿಸುತ್ತಾ ಬರಲಾಗಿದೆ. ಪ್ರಸಂಗ ಕೃತಿಗಳನ್ನು ಶಿಷ್ಟಸಾಹಿತ್ಯ ಪರಂಪರೆಯಲ್ಲಿ ನಮ್ಮ ಕನ್ನಡದ ವಿದ್ವಾಂಸರು ಮೊದ ಮೊದಲಿಗೆ ಮಾತ್ರವಲ್ಲ ಇತ್ತೀಚೆಗಿನವರೆಗೂ ಗಂಭೀರವಾಗಿ ಪರಿಗಣಿಸುತ್ತಿರಲಿಲ್ಲ. ಈಗ ಪರಿಸ್ಥಿತಿ ಸ್ವಲ್ಪ ಮಟ್ಟಿಗೆ ಬದಲಾಗಿದೆ. “ವಿಶ್ವವಿದ್ಯಾನಿಲಯಗಳು ಪ್ರಕಟಿಸುವ ಸಾಹಿತ್ಯ ಚರಿತ್ರೆಯ ಗ್ರಂಥಗಳಲ್ಲೂ ಪ್ರಸಂಗ ಸಾಹಿತ್ಯಕ್ಕೆ ಮಾನ್ಯತೆ ದೊರಕುವಷ್ಟು ಬದಲಾವಣೆಯಾಗಿದೆ. ಉದಾ: ‘ಬೆಂಗಳೂರು ವಿಶ್ವವಿದ್ಯಾನಿಲಯದ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ’ ಸಂಪುಟದಲ್ಲಿ ಯಕ್ಷಗಾನ ಕವಿಚರಿತೆ ದಾಖಲಾಗಿದೆ. ವಿಶ್ವವಿದ್ಯಾನಿಲಯವೊಂದು ಈ ಅಂಗೀಕಾರ ನೀಡಿರುವುದು ಯಕ್ಷಗಾನ ಪ್ರಸಂಗಗಳ ಸಾಹಿತ್ಯಕ ಗುಣಮಟ್ಟಕ್ಕೆ ಸಾಕ್ಷಿಯಾಗಿದೆ.” (ಪ್ರಸಂಗ ವಿಶ್ಲೇಷಣೆ, ೨೦೦೭, ಪು.ಸಂ ೩) ಎಂದು ಪಾದೇಕಲ್ಲು ವಿಷ್ಣು ಭಟ್ಟರು ಅಭಿಪ್ರಾಯಪಟ್ಟಿದ್ದಾರೆ. ಯಕ್ಷಗಾನ ಪ್ರಸಂಗಗಳ ಸಂಖ್ಯೆಯನ್ನು ಗಮನಿಸಿದರೆ ಅದರ ಬಗೆಗೆ ನಡೆದಿರುವ

ಅಧ್ಯಯನಗಳು ತುಂಬಾ ಕಡಿಮೆಯೇ. ಹಾಗಿದ್ದರೂ ಇತ್ತೀಚೆಗೆ ಅಧ್ಯಯನಾಸಕ್ತಿಯಿಂದ ಕೃತಿಗಳೂ, ಸಂಶೋಧನ ಪ್ರಬಂಧಗಳು ಪ್ರಕಟಗೊಳ್ಳುತ್ತಿದೆ.

ಸಂಖ್ಯೆಯ ದೃಷ್ಟಿಯಿಂದ ಕಡಿಮೆಯಿದ್ದರೂ ಈಗಾಗಲೇ ಯಕ್ಷಗಾನದ ಕುರಿತು ವೈವಿಧ್ಯಪೂರ್ಣವಾದ ಕೃತಿಗಳು ಬೇರೆ ಬೇರೆ ಕಡೆ ಪ್ರಕಟಗೊಂಡಿವೆ. ಅವೆಲ್ಲವನ್ನೂ ಸಮೀಕ್ಷಿಸುವುದು ಸಾಧ್ಯವಾಗುವ ಮಾತಲ್ಲ. ಪ್ರಸಂಗ ಸಾಹಿತ್ಯದ ಕುರಿತೂ ಕೆಲವು ಕೃತಿಗಳು ಬಂದಿವೆ. ಆದರೆ ಪಾರ್ತಿಸುಬ್ಬನ ಯಕ್ಷಗಾನ ಪ್ರಸಂಗಗಳನ್ನೇ ಆಧರಿಸಿ ಅದರ ಪಠ್ಯ ಮತ್ತು ಪ್ರದರ್ಶನದ ನೆಲೆಯ ಸಂಶೋಧನೆ ನಡೆದಿಲ್ಲ. ಪಾರ್ತಿಸುಬ್ಬನ ಕಾಲ ದೇಶದ ಕುರಿತ ಕೃತಿಗಳು, ಯಕ್ಷಗಾನ ಅಥವಾ ಪ್ರಸಂಗ ಸಾಹಿತ್ಯದ ಕುರಿತ ಕೃತಿಗಳಲ್ಲಿ ಆನುಷಂಗಿಕವಾಗಿ ಈ ವಿಷಯದ ಪ್ರಸ್ತಾಪ ಬಂದಿದೆ. ಹೀಗೆ ಅಲ್ಲಲ್ಲಿ ಬಂದಿರುವ ಪಾರ್ತಿಸುಬ್ಬನ ಕುರಿತಾದ ಹಾಗೂ ಈ ಅಧ್ಯಯನಕ್ಕೆ ಪೂರಕವಾಗಬಲ್ಲ ಕೃತಿಗಳ ಸಮೀಕ್ಷೆಯನ್ನಷ್ಟೇ ಇಲ್ಲಿ ನಡೆಸಿದ್ದೇನೆ. ಈ ಸಮೀಕ್ಷೆಯನ್ನು ಮುಖ್ಯವಾಗಿ ನಾಲ್ಕು ನೆಲೆಗಳಲ್ಲಿ ಗುರುತಿಸಿ ಆಯಾ ಭಾಗದ ಕೃತಿಗಳನ್ನು ಸಮೀಕ್ಷಿಸಲಾಗಿದೆ.

೧. **ಯಕ್ಷಗಾನಕ್ಕೆ ಸಂಬಂಧಿಸಿದ ಕೃತಿಗಳು ಮತ್ತು ಬಿಡಿ ಲೇಖನಗಳು**

೨. **ಸಂಶೋಧನೆ ಮತ್ತು ಅಧ್ಯಯನ ಗ್ರಂಥಗಳು**

೩. **ಪಾರ್ತಿಸುಬ್ಬನ ಕುರಿತ ಆರಂಭಿಕ ಅಧ್ಯಯನಗಳು**

೪. **ಪ್ರಸಂಗ ಸಾಹಿತ್ಯ ಮತ್ತು ಪ್ರದರ್ಶನದ ಕುರಿತ ಸಂಶೋಧನ ಮಹಾಪ್ರಬಂಧಗಳು**

ಮಹಾಪ್ರಬಂಧದ ಆರಂಭದ ಅಧ್ಯಾಯದಲ್ಲಿ ಈಗಾಗಲೇ ಬಂದಿರುವ ಕೃತಿಗಳನ್ನು ಈ ನಾಲ್ಕು ನೆಲೆಗಳಲ್ಲಿ ಸಮೀಕ್ಷೆ ಮಾಡಲಾಗಿದೆ. ತೆಂಕುತಿಟ್ಟು ಯಕ್ಷಗಾನ, ಯಕ್ಷಗಾನದ ಪ್ರಸಂಗ ಪಠ್ಯ ಮತ್ತು ಪ್ರದರ್ಶನ, ಕವಿ ಪಾರ್ತಿಸುಬ್ಬ, ಅವನ ಪ್ರಸಂಗಗಳು, ಅವುಗಳ ಪ್ರದರ್ಶನದ ಸಾಧ್ಯತೆಗಳ ಕುರಿತು ಈವರೆಗೆ ಬಂದಿರುವ ಅಧ್ಯಯನ ಕೃತಿ ಮತ್ತು ಬಿಡಿ ಲೇಖನಗಳನ್ನು ಅವಲೋಕಿಸಿದಾಗ ಈ ಕೆಳಗಿನ ವೈಶಿಷ್ಟ್ಯಗಳನ್ನು ಗಮನಿಸಲಾಗಿದೆ.

೧. ಯಕ್ಷಗಾನಕ್ಕೆ ಸಂಬಂಧಿಸಿದಂತೆ ಸಮಗ್ರ ಅಧ್ಯಯನ ಗ್ರಂಥಗಳು ಕೆಲವು ಮಾತ್ರ ಪ್ರಕಟಗೊಂಡಿವೆಯಾದರೂ ಯಕ್ಷಗಾನ ಸಂಬಂಧಿ ವಿವಿಧ ಆಯಾಮಗಳನ್ನು ಪರಿಚಯಿಸುವ ಹಾಗೂ ಬಿಡಿ ಅಧ್ಯಯನ ಗ್ರಂಥಗಳು ಹೆಚ್ಚಿನ ಸಂಖ್ಯೆಯಲ್ಲಿ ಪ್ರಕಟಗೊಂಡಿದೆ.

೨. ಯಕ್ಷಗಾನದ ಹಿಮ್ಮೇಳ, ವಾಚಿಕ, ವೇಷಭೂಷಣ, ತಾಳಮದ್ದಳೆ, ಪ್ರಸಂಗ ಸಾಹಿತ್ಯ ಹೀಗೆ ಭಿನ್ನ ಭಿನ್ನ ಆಯಾಮಗಳಿಂದ ಅಧ್ಯಯನಗಳು ಸಾಕಷ್ಟು ಪ್ರಮಾಣದಲ್ಲಿ ನಡೆದಿವೆ.

೩. ಯಕ್ಷಗಾನ ಪ್ರಸಂಗ ಕೃತಿಗಳು ಬಹುಸಂಖ್ಯೆಯಲ್ಲಿ ಪ್ರಕಟಗೊಳ್ಳುತ್ತಿದ್ದರೂ ಪ್ರಸಂಗ ಸಾಹಿತ್ಯದ

ವಿಶ್ಲೇಷಣೆ, ವಿಮರ್ಶೆ, ಅಧ್ಯಯನಗಳು ಹೆಚ್ಚು ನಡೆದಿಲ್ಲ.

೪. ಯಕ್ಷಗಾನ ಪ್ರಸಂಗ ಕೃತಿಗಳನ್ನು ರಂಗ ಪಠ್ಯವಾಗಿ ಅಧ್ಯಯನಕ್ಕೊಳಪಡಿಸಿದ ಕೃತಿಗಳು ಬೆರಳೆಣಿಕೆಯಷ್ಟು ಮಾತ್ರ.

೫. ಪಾರ್ತಿಸುಬ್ಬನ ಕುರಿತು ನಡೆದಿರುವ ಅಧ್ಯಯನಗಳು, ಚರ್ಚೆಗಳು ಆತನ ಕಾಲ ದೇಶ ವಿಚಾರಗಳ ಕುರಿತೇ ಹೆಚ್ಚು ಗಮನಹರಿಸಿವೆ. ಅವುಗಳನ್ನು ಸ್ಥಿರೀಕರಿಸುವ ಉದ್ದೇಶಕ್ಕಾಗಿ ಆತನ ಪ್ರಸಂಗಗಳ ಅಧ್ಯಯನ ನಡೆದದ್ದೇ ಹೆಚ್ಚು.

೬. ಪಾರ್ತಿಸುಬ್ಬನ ಪ್ರಸಂಗಗಳ ಕುರಿತು ಸಾಂದರ್ಭಿಕ ಟಿಪ್ಪಣಿಗಳು, ಲೇಖನಗಳು ಮಾತ್ರ ಪ್ರಕಟಗೊಂಡಿದೆ. ಅದನ್ನೊಂದು ಸಾಹಿತ್ಯಕೃತಿಯಾಗಿ ಭಾರತೀಯ ಕಾವ್ಯ ಮೀಮಾಂಸೆಯ ಹಾಗೂ ಆಧುನಿಕ ವಿಮರ್ಶೆಯ ಚೌಕಟ್ಟಿನಲ್ಲಿಟ್ಟು ಅರ್ಥೈಸುವ ಪ್ರಯತ್ನ ನಡೆದಿಲ್ಲ.

೭. ಪಾರ್ತಿಸುಬ್ಬನ ಪ್ರಸಂಗಗಳ ಕುರಿತು ಲೇಖನಗಳು ಬಿಡಿ ಬಿಡಿಯಾಗಿ ಪ್ರಕಟಗೊಂಡವುಗಳೇ ಹೆಚ್ಚು. ಬಹುತೇಕ ಲೇಖನಗಳು ಅಭಿನಂದನ ಗ್ರಂಥಗಳಲ್ಲೇ ಪ್ರಕಟಗೊಂಡಿರುವುದನ್ನು ಗಮನಿಸಬಹುದು.

೮. ಪಾರ್ತಿಸುಬ್ಬನ ಪ್ರಸಂಗಗಳ ಪ್ರದರ್ಶನಾಧಾರಿತ ವಿವೇಚನೆ ನಡೆದದ್ದು ಕಂಡು ಬರುವುದಿಲ್ಲ.

೯. ಪಾರ್ತಿಸುಬ್ಬನ ಯಕ್ಷಗಾನ ಪ್ರಸಂಗಗಳು ಬಯಲಾಟ ಮತ್ತು ತಾಳಮದ್ದಳೆಗಳೆರಡರಲ್ಲೂ ಜನಪ್ರಿಯವಾಗಿದೆ. ಸಾಮಾನ್ಯವಾಗಿ ಬಯಲಾಟ ಪ್ರಸಂಗಗಳು ಬೇರೆ, ತಾಳಮದ್ದಳೆಯ ಪ್ರಸಂಗಗಳು ಬೇರೆ ಎಂಬ ವಿಭಾಗೀಕರಣ ಇದೆ. ಆದರೆ ಕೆಲವು ಪ್ರಸಂಗಗಳು ಎರಡರಲ್ಲಿಯೂ ಪ್ರಯೋಗಗೊಳ್ಳುತ್ತವೆ. ಬಯಲಾಟ ಮತ್ತು ತಾಳಮದ್ದಳೆ ಎರಡರಲ್ಲೂ ಸಲ್ಲುವ ಗುಣ ಪಾರ್ತಿಸುಬ್ಬನ ಪ್ರಸಂಗಗಳಿಗಿದೆ. ಈ ಅಂಶಗಳ ಕುರಿತು ಅಧ್ಯಯನಗಳು ನಡೆದಿಲ್ಲ.

೧೦. ಪಾರ್ತಿಸುಬ್ಬನದಲ್ಲದ ಪದ್ಯಗಳು ಆತನ ಪ್ರಸಂಗಗಳ ಪ್ರದರ್ಶನದಲ್ಲಿ ಬಳಕೆಯಾಗುತ್ತಿವೆ. ಪ್ರಸಂಗಗಳ ಅನೇಕ ಪದ್ಯಗಳನ್ನು ಭಾಗವತರು ಪ್ರದರ್ಶನ ಸಂದರ್ಭದಲ್ಲಿ ಕೈಬಿಡುವುದಿದೆ. ಅವುಗಳು ಯಾವುವು ಮತ್ತು ಯಾಕೆ ಎಂಬುದು ಅಧ್ಯಯನಕ್ಕೆ ಒಳಪಡಬೇಕಿರುವ ಅಂಶ.

೧೧. ಪಾರ್ತಿಸುಬ್ಬನ ಮೇಲೆ ರಾಮನಾಟ್ಟಂನ ಪದ್ಯಗಳ ಪ್ರಭಾವ, ತೊರವೆ ರಾಮಾಯಣದ ಪ್ರಭಾವ ಆಗಿದೆ ಎಂಬ ಉಲ್ಲೇಖಗಳು ದೊರಕುತ್ತವೆ. ಈ ಕುರಿತು ಸಂಶೋಧನೆ ನಡೆಯಬೇಕಿದೆ. ಅಂತೆಯೇ ಪಾರ್ತಿಸುಬ್ಬನ ಪ್ರಸಂಗಗಳು ಅವನ ನಂತರದ ಯಕ್ಷಗಾನ ಕವಿಗಳ ಮೇಲೆ ಬೀರಿದ ಪ್ರಭಾವ ಮಹತ್ತರವಾದುದು ಈ ಬಗೆಗೂ ವಿಶೇಷ ಅಧ್ಯಯನಗಳು ನಡೆದಿಲ್ಲ.

೧೨. ಪ್ರಸಂಗ ಸಾಹಿತ್ಯ, ಪಠ್ಯ ಮತ್ತು ಪ್ರದರ್ಶನ, ಭಾಗವತಿಕೆ, ಕವಿ–ಕಾವ್ಯ ಮೊದಲಾದ ನೆಲೆಗಳಿಂದ ಪಿಎಚ್‌ಡಿ ಮಹಾಪ್ರಬಂಧಗಳು ಬಂದಿವೆ. ಪಾರ್ತಿಸುಬ್ಬನ ಕುರಿತು ಆತನ ಪ್ರಸಂಗಗಳ ಕುರಿತು, ಆ ಪ್ರಸಂಗಗಳ ಪ್ರದರ್ಶನದ ಕುರಿತಾದ ಮಹಾಪ್ರಬಂಧ ಈವರೆಗೆ ಬಂದಿಲ್ಲ.

ಅವಲೋಕನದ ಸಂದರ್ಭದಲ್ಲಿ ಗಮನಿಸಿದ ಪ್ರಮುಖ ಅಂಶವೆಂದರೆ ಪಾರ್ತಿಸುಬ್ಬ ಕವಿಯ ವೈಯಕ್ತಿಕ ವಿವರಗಳ ಬಗೆಗೆ ಸಾಕಷ್ಟು ಚರ್ಚೆಗಳು ನಡೆದಿದೆ. ಆತನ ಪ್ರಸಂಗಗಳನ್ನು ಸಾಹಿತ್ಯ ಪಠ್ಯವಾಗಿ ಮತ್ತು ರಂಗಪಠ್ಯವಾಗಿ ಅಧ್ಯಯನಕ್ಕೊಳಪಡಿಸಿದ್ದು ಕಡಿಮೆ. ಯಕ್ಷಗಾನದ ಸೋದರ ಕಲೆಯಾದ ಕಥಕಳಿಯ ಪ್ರಸಂಗ ಪಠ್ಯದ ಜೊತೆಗಿನ ತೌಲನಿಕ ನೋಟ, ಪಾರ್ತಿಸುಬ್ಬನ ಪ್ರಸಂಗಗಳ ಪ್ರಾದೇಶಿಕತೆ, ಭಾಷಿಕ ವೈಶಿಷ್ಟ್ಯ, ಛಂದಸ್ಸು ಹಾಗೂ ಪ್ರದರ್ಶನಕ್ಕೆ ಅದು ಒದಗಿ ಬರುವ ನೆಲೆಗಳನ್ನು ಕುರಿತ ಸಮಗ್ರ ಅಧ್ಯಯನ ನಡೆದಿಲ್ಲ. ಈ ಹಿನ್ನೆಲೆಯಿಂದ ಪಾರ್ತಿಸುಬ್ಬನ ಪ್ರಸಂಗಗಳ ಕುರಿತು ನಾನು ಸಂಶೋಧನೆಯನ್ನು ಕೈಗೊಂಡಿದ್ದೇನೆ.

ಯಕ್ಷಗಾನದ ಇತಿಹಾಸ, ಲಕ್ಷಣ ಮತ್ತು ಸ್ವರೂಪ ವಿವೇಚನೆಗೆ ಸಂಬಂಧಿಸಿದಂತೆ ಅನೇಕ ಕೃತಿಗಳು ಈಗಾಗಲೇ ಪ್ರಕಟವಾಗಿವೆ. ನಿರ್ದಿಷ್ಟವಾಗಿ ಪಾರ್ತಿಸುಬ್ಬನ ಕಾಲನಿರ್ಣಯ, ಬದುಕು ಬರಹಗಳ ವಿವೇಚನೆಯ ಬಗೆಗೂ ಕೆಲವು ಲೇಖನಗಳು, ಕೃತಿಗಳು ಬೆಳಕು ಕಂಡಿವೆ. ಪಾರ್ತಿಸುಬ್ಬನ ಪ್ರಸಂಗಗಳನ್ನು ಸೂಕ್ಷ್ಮವಾಗಿ ಅವಲೋಕಿಸುವ ಉದ್ದೇಶ ಹೊಂದಿರುವ ಈ ಅಧ್ಯಯನದ ಸಂದರ್ಭದಲ್ಲಿ ಯಕ್ಷಗಾನದ ಪ್ರಾಚೀನತೆ, ಮೊದಲ ಘಟ್ಟದ ಸ್ವರೂಪ, ಅನಂತರದ ಬೆಳವಣಿಗೆ ಮೊದಲಾದ ಅಂಶಗಳನ್ನು ವಿವೇಚಿಸುವುದಕ್ಕೆ ಬೇಕಾದ ಪೂರಕ ಮಾಹಿತಿಗಳಿಗೆ ಪ್ರಕಟಿತ ಲೇಖನಗಳು ಮತ್ತು ಕೃತಿಗಳ ಸಹಾಯ ಪಡೆದಿದ್ದೇನೆ. ಇದು ಯಕ್ಷಗಾನ ಸಾಹಿತ್ಯದ ಸಾಮಾನ್ಯ ವಿವೇಚನೆಗೆ ಸಂಬಂಧಿಸಿದ ಮಾಹಿತಿಗಳ ಆಕರ ಮೂಲ. ಪಾರ್ತಿಸುಬ್ಬನ ಬದುಕು ಬರಹಗಳನ್ನು ಕೇಂದ್ರವಾಗಿರಿಸಿಕೊಂಡ ಲೇಖನಗಳು ಮತ್ತು ಕೃತಿಗಳು ಪ್ರಸ್ತುತ ಅಧ್ಯಯನದ ಪ್ರಧಾನ ಆಕರಗಳಾಗಿವೆ. ಈ ಆಕರಗಳಲ್ಲಿ ಲಭ್ಯವಿರುವ ಮಾಹಿತಿಗಳನ್ನು ಬಳಸಿಕೊಂಡದ್ದು ಮಾತ್ರವಲ್ಲ ಅವುಗಳನ್ನು ಸೂಕ್ತ ಚರ್ಚೆಗೆ ಒಳಪಡಿಸಿ ಪಾರ್ತಿಸುಬ್ಬ ಮತ್ತು ಅವನ ಕೃತಿಗಳ ಕುರಿತಂತೆ ಇರುವ ಅರಿವು ಮತ್ತು ತಿಳುವಳಿಕೆಯನ್ನು ವಿಸ್ತರಿಸಲು ಪ್ರಯತ್ನಿಸಿದ್ದೇನೆ.

ಅಧ್ಯಾಯ ಒಂದರಲ್ಲಿ ಪಾರ್ತಿಸುಬ್ಬನ ಬದುಕು, ವೃತ್ತಿ, ಕಾಲ ದೇಶಾದಿಗಳ ಚರ್ಚೆಯನ್ನು ಮಾಡಿದ್ದೇನೆ. ಯಕ್ಷಗಾನ ಕ್ಷೇತ್ರದಲ್ಲಿ ಕವಿಯೊಬ್ಬನ ಕಾಲ ದೇಶಗಳ ಕುರಿತು ದೀರ್ಘವಾದ ಚರ್ಚೆ ನಡೆದಿರುವುದು ಪಾರ್ತಿಸುಬ್ಬನ ಬಗೆಗೆ. ಪಾರ್ತಿಸುಬ್ಬನು ಯಕ್ಷಗಾನ ಪ್ರಸಂಗಕರ್ತರಲ್ಲಿ ಪ್ರಾಚೀನತೆಯ ದೃಷ್ಟಿಯಿಂದಲೂ ಗುಣಮಟ್ಟದ ದೃಷ್ಟಿಯಿಂದಲೂ ಮಹತ್ವದ ಕವಿ. ಈತನ ಕಾಲ ದೇಶಾದಿಗಳ ಬಗೆಗೆ ದೀರ್ಘವಾದ ಚರ್ಚೆ ನಡೆದಿದೆ. ಈ ಚರ್ಚೆ ಪಾರ್ತಿಸುಬ್ಬನ ಕಾಲನಿರ್ಣಯದ ದೃಷ್ಟಿಯಿಂದ ಮಾತ್ರ

ಮುಖ್ಯವಲ್ಲದೆ ಯಕ್ಷಗಾನದ ಪ್ರಾಚೀನತೆ, ಆ ಕಾಲದ ಯಕ್ಷಗಾನದ ಸ್ವರೂಪ ಇತ್ಯಾದಿಗಳನ್ನು ಕುರಿತ ನಿರ್ಣಯಕ್ಕೂ ಸಹಕಾರಿಯಾಗಿದೆ. ಕನ್ನಡ ನಾಡಿನ ಅನೇಕ ವಿದ್ವಾಂಸರು ಈತನ ಕಾಲದೇಶದ ಕುರಿತು ಗಂಭೀರವಾಗಿ, ಕೆಲವೆಡೆ ವಾಗ್ವಾದದ ರೂಪದಲ್ಲೇ ಚರ್ಚೆ ನಡೆಸಿರುವುದು ಕಂಡುಬರುತ್ತದೆ.

ಆರಂಭದಲ್ಲಿ ಮುಳಿಯ ತಿಮ್ಮಪ್ಪಯ್ಯ ಹಾಗೂ ಮಂಜೇಶ್ವರ ಗೋವಿಂದ ಪೈಗಳು ಪಾರ್ತಿಸುಬ್ಬನ ಕುರಿತು ಸಿಕ್ಕಿದ ಆಧಾರಗಳನ್ನು ಗಮನಿಸಿಕೊಂಡು ಪಾರ್ತಿಸುಬ್ಬ ಕುಂಬಳೆಯವನೆಂದು ಪ್ರತಿಪಾದಿಸಿದರು. ಆದರೆ ಶಿವರಾಮ ಕಾರಂತರು ತಮ್ಮ ಸಂಶೋಧನೆಯ ಮೂಲಕ "ಅಜಪುರದ ಸುಬ್ಬನೇ ರಾಮಾಯಣ ಪ್ರಸಂಗಗಳ ಕವಿ" ಎಂದರು. (ಶಿವರಾಮ ಕಾರಂತ., ೧೯೫೭; ಪು.೨೦೧) ಬಳಿಕ ಅನೇಕ ಸಂಶೋಧಕರು ಈ ಚರ್ಚೆಯಲ್ಲಿ ಭಾಗವಹಿಸಿದರು. ಕೆ. ಪಿ ವೆಂಕಪ್ಪ ಶೆಟ್ಟಿ, ಕಯ್ಯಾರ ಕಿಂಞಣ್ಣ ರೈ, ಬೈಕಾಡಿ ವೆಂಕಟಕೃಷ್ಣರಾವ್, ನೀರ್ಪಾಜೆ ಭೀಮ ಭಟ್, ಅಮೃತ ಸೋಮೇಶ್ವರ, ರಾಮಚಂದ್ರ ಉಚ್ಚಿಲ, ಸಿರಿಬಾಗಿಲು ವೆಂಕಪ್ಪಯ್ಯ, ಪುಂಡೂರು ವೆಂಕಟರಾಜ ಪುಣಿಂಚತ್ತಾಯ, ಪ್ರಭಾಕರ ಜೋಶಿ ಮೊದಲಾದ ಅನೇಕರು ಈ ವಿಚಾರವಾಗಿ ಚರ್ಚಿಸಿದ್ದಾರೆ. ಅವುಗಳನ್ನು ಅಧ್ಯಯನಕ್ಕೊಳಪಡಿಸಿ ಇತರೆ ಬಾಹ್ಯ ಆಧಾರಗಳನ್ನು ಅನುಲಕ್ಷಿಸಿ ಪಾರ್ತಿಸುಬ್ಬನ ಕಾಲದ ಚರ್ಚೆಯನ್ನು ಇಲ್ಲಿ ವಿಸ್ತರಿಸಿದ್ದೇನೆ.

ತಾಳ್ತಜೆ ಕೃಷ್ಣ ಭಟ್ಟರು ಇವರು ರಚಿಸಿದ ಕಡುಗಲಿ ಮಹಾಕವಿ ಪಾರ್ತಿಸುಬ್ಬ ಎಂಬ ಕಾದಂಬರಿ ಮಾದರಿಯ ಧಾರಾವಾಹಿ 'ಯಕ್ಷಪ್ರಭಾ' ಪತ್ರಿಕೆಯಲ್ಲಿ ೧೯೯೯ ಜೂನ್ ತಿಂಗಳಿನಿಂದ ೨೦೦೦ನೇ ಇಸವಿಯ ನವಂಬರ್ ತಿಂಗಳ ಸಂಚಿಕೆಯವರೆಗೆ ಪ್ರಕಟಗೊಂಡಿತ್ತು. ಬೇರೆಲ್ಲೂ ಚರ್ಚಿತಗೊಳ್ಳದ, ಅರ್ಧದಲ್ಲೇ ನಿಂತು ಹೋದ ಈ ಐತಿಹಾಸಿಕ ಕಾದಂಬರಿಯ ೧೬ ಕಂತುಗಳನ್ನು ಸಂಗ್ರಹಿಸಿ ಈ ಭಾಗದಲ್ಲಿ ಅಲ್ಲಿ ಬಂದಿರುವ ಅಂಶಗಳನ್ನು ಪೂರಕ ಪಠ್ಯವಾಗಿ ಗ್ರಹಿಸಿ ವಿಶ್ಲೇಷಣೆಗೊಳಪಡಿಸಲಾಗಿದೆ. ಪಾರ್ತಿಸುಬ್ಬನ ಕುಟುಂಬ, ವೃತ್ತಿ, ಆತನ ಮೇಲಾದ ಪ್ರಭಾವಗಳ ಕುರಿತು ಈ ಕೃತಿ ಹಲವು ಅಂಶಗಳನ್ನು ಒಳಗೊಂಡಿದೆ.

ಪಾರ್ತಿಸುಬ್ಬನ ಕುರಿತ ಚರ್ಚೆಯನ್ನು ಬೆಳೆಸಿದ ವಿದ್ವಾಂಸರ ಅಭಿಪ್ರಾಯಗಳನ್ನು ಅನುಲಕ್ಷಿಸಿ ಈ ಕೆಳಗಿನ ತೀರ್ಮಾನಕ್ಕೆ ಬರಬಹುದಾಗಿದೆ. ಪಾರ್ತಿಸುಬ್ಬನ ಕಾಲವನ್ನು ಇದಮಿತ್ಥಂ ಎಂದು ಖಚಿತಗೊಳಿಸುವುದಕ್ಕೆ ಇಲ್ಲಿನ ಚರ್ಚೆ ವಿಫಲವಾಗಿದೆ. ಕಾರಂತರು ಸೂಚಿಸಿದಂತೆ ಪಾರ್ತಿಸುಬ್ಬ ಬ್ರಹ್ಮಾವರದ ಅಜಪುರದವನಲ್ಲ ಎಂಬುದು ಆತ ಕುಂಬಳೆಯ ಕಣಿಪುರದವನೆಂಬುದು ಬಹುತೇಕ ವಿದ್ವಾಂಸರು ಒಪ್ಪಿದ ವಿಚಾರ. ಕಾವ್ಯದ ಆಂತರಿಕ ವಿವರಗಳು ಅದನ್ನು ಪುಷ್ಟೀಕರಿಸುತ್ತವೆ. ತನ್ನ ಎಲ್ಲಾ ಪ್ರಸಂಗಗಳಲ್ಲೂ ಆತ ಕಣಿಪುರದ ಕೃಷ್ಣನನ್ನು ಸ್ಮರಿಸಿರುವುದು ಹಾಗೂ ಕೇರಳದ ರಾಮನಾಟ್ಟಂನ (ಕಥಕಳಿ) ಪ್ರಭಾವ ಈತನ ರಚನೆಗಳಲ್ಲಿ ದಟ್ಟವಾಗಿ ಇರುವುದನ್ನು ಕುಕ್ಕಿಲ ಕೃಷ್ಣಭಟ್ಟರು ಹಾಗೂ ಇತರ ವಿದ್ವಾಂಸರು ಗುರುತಿಸಿದ್ದಾರೆ. ಈ

ಆಧಾರಗಳನ್ನು ಗಮನಿಸಿ ಪಾರ್ತಿಸುಬ್ಬ ಕುಂಬಳೆಯವನೆಂದು ಹೇಳಬಹುದಾಗಿದೆ. ಆತ ಸ್ಥಾನಿಕ ಬ್ರಾಹ್ಮಣನೆಂದೂ, ಕಣಿಪುರ ಗೋಪಾಲಕೃಷ್ಣ ದೇವಸ್ಥಾನದಲ್ಲಿ ಪಾಟಾಳಿ ವೃತ್ತಿಯನ್ನು ಮಾಡುತ್ತಿದ್ದನೆಂದೂ ಮುಳಿಯದವರೂ, ಕುಕ್ಕಿಲರೂ, ಗೋವಿಂದ ಪೈಗಳೂ ಮೌಖಿಕ ಮತ್ತು ಇತರ ದಾಖಲೆಗಳನ್ನು ನೀಡಿ ಸಮರ್ಥಿಸಿದ್ದಾರೆ. ಇದನ್ನು ಒಪ್ಪಿಕೊಳ್ಳಬಹುದಾಗಿದೆ. ಆತನ ಪ್ರಸಂಗಗಳ ನಡುವೆ ಸಿಗುವ ಸ್ಥಾನಿಕ ಬ್ರಾಹ್ಮಣ ತುಳುವಿನ ಅಂಶವೂ ಇದನ್ನು ಪುಷ್ಟೀಕರಿಸುತ್ತದೆ.

ಪಾರ್ತಿಸುಬ್ಬನು ತನ್ನ ಪ್ರಸಂಗಗಳಲ್ಲಿ ಕಣ್ವಪುರದ ಕೃಷ್ಣನನ್ನು ಆಗಾಗ ಸ್ಮರಿಸಿಕೊಂಡಿರುವುದರಿಂದ ಆತನ ಜನ್ಮಭೂಮಿ ಕುಂಬಳೆ ಆಗಿತ್ತೆಂದು ಸ್ಪಷ್ಟ. ಆದರೆ ಆತನ ಜನನ, ಜೀವನ ಮತ್ತು ಕೊನೆಯ ದಿನಗಳ ಬಗೆಗೆ ಖಚಿತ ನಿರ್ಣಯಕ್ಕೆ ಬರಲು ಸೂಕ್ತ ಪುರಾವೆಗಳು ದೊರೆಯದಿರುವುದರಿಂದ ಆತನ ಜೀವನ ಚರಿತ್ರೆಯನ್ನು ಕಟ್ಟುವುದು ಕಷ್ಟವಾಗಿದೆ. ಕೆಲವು ಪುರಾವೆಗಳನ್ನು ಅನುಲಕ್ಷಿಸಿ ಆರಂಭದಲ್ಲಿ ಕುಕ್ಕಿಲ ಕೃಷ್ಣಭಟ್ಟರು ಆತ ಕ್ರಿ. ಶ ೧೭೬೦-೧೮೨೦ ಎಂದಿದ್ದರೆ, ಮುಳಿಯ ತಿಮ್ಮಪ್ಪಯ್ಯನವರು ಕ್ರಿ.ಶ. ೧೮೨೦ ಆತನ ಮರಣ ಕಾಲವೆಂದು ತಿಳಿಸಿದ್ದಾರೆ. ಆದರೆ ಬಳಿಕ ಕುಕ್ಕಿಲರಿಗೆ ದೊರೆತ ಪಾರ್ತಿಸುಬ್ಬನ ಯಕ್ಷಗಾನಗಳ ಹಸ್ತಪ್ರತಿಗಳು ಮತ್ತು ಇತರೆ ಮಾಹಿತಿಗಳನ್ನು ಲಕ್ಷಿಸಿ ಅವರು ಆಧಾರಸಹಿತವಾಗಿ ಮಂಡಿಸಿರುವ ಕಾಲನಿರ್ಣಯ ಸು.ಕ್ರಿ.ಶ. ೧೫೯೦-೧೬೨೦. ಅನಂತರದ ಎಲ್ಲ ಸಂಶೋಧಕರು ಈ ನಿಲುವನ್ನು ಒಪ್ಪಿಕೊಂಡಿರುತ್ತಾರೆ.

ಪಾರ್ತಿಸುಬ್ಬನ ಹುಟ್ಟೂರು ಕುಂಬಳೆಯೆಂಬುದು, ಆತ ಕಣಿಪುರದ ಕೃಷ್ಣನ ಭಕ್ತನೆಂಬುದು ಸಾಮಾನ್ಯವಾಗಿ ಒಪ್ಪಿತವಾದ ವಿಷಯ. ಆತ ತುಳು ಮಾತನಾಡುವ ಸ್ಥಾನಿಕ ಬ್ರಾಹ್ಮಣನಾಗಿದ್ದ ಎಂಬುದನ್ನೂ ಬಹುತೇಕ ಸಂಶೋಧಕರು ಒಪ್ಪಿಕೊಂಡಿದ್ದಾರೆ. ಆದರೆ ಆತನ ಕಾಲದ ಕುರಿತ ನಿರ್ಣಯವನ್ನು ಖಚಿತವಾಗಿ ಹೇಳುವಲ್ಲಿ ಸಾಕ್ಷ್ಯಾಧಾರಗಳು ಸಾಕಾಗುವುದಿಲ್ಲ. ಆದರೆ ಕೇರಳದ ರಾಮನಾಟ್ಟಂ ಕಲಾಪ್ರಕಾರವನ್ನು ರೂಪಿಸಿದ ಕೊಟ್ಟಾರಕರ ಮಹಾರಾಜರ ಕಾಲವನ್ನು ೧೬೫೩-೧೬೯೪ ಎಂದು ಕೇರಳ ಸಾಹಿತ್ಯಚರಿತ್ರೆಕಾರರು ಹೇಳುತ್ತಾರೆ (ಕಥಕಳಿ ಮಂಜರಿ, ೧೯೫೬, ಪು.೮). ರಾಮನಾಟ್ಟಂನ ದಟ್ಟ ಪ್ರಭಾವವನ್ನು ಪಾರ್ತಿಸುಬ್ಬನಲ್ಲಿ ನಾವು ಗುರುತಿಸುವುದರಿಂದ ಈ ಕಾಲಾನಂತರದಲ್ಲೇ ಪಾರ್ತಿಸುಬ್ಬ ಬದುಕಿದ್ದಿರಬೇಕು. ಅಲ್ಲದೇ ಪಾರ್ತಿಸುಬ್ಬನ ರಚನೆಗಳಲ್ಲಿ ಪುರಂದರದಾಸರ, ಶ್ರೀಪಾದರಾಯರ ಕೀರ್ತನೆಗಳ ಪ್ರಭಾವ ಇರುವುದನ್ನು ಕಾಣಬಹುದು. ಅಂಗದ ಸಂಧಾನದಲ್ಲಿ 'ಏನ್ಯಾ ರಾವಣ ನೀನ್ಯಾ ಸೀತೆಯ/ ಕಾಣದ ಹಾಂಗೆ ಕದ್ದು ತಂದೆಯೇನ್ಯಾ' (ಪಾರ್ತಿಸುಬ್ಬನ ಯಕ್ಷಗಾನಗಳು, ೧೯೭೫, ಪು. ೩೧೭) ಎಂಬಲ್ಲಿ ಪುರಂದರದಾಸರ ಕೀರ್ತನೆಯ ದಟ್ಟ ಪ್ರಭಾವವನ್ನು ಕಾಣಬಹುದಾಗಿದೆ. ಈ ಅಂಶಗಳನ್ನು ಗಮನಿಸಿದರೆ ಪಾರ್ತಿಸುಬ್ಬನ ಕಾಲವನ್ನು ಹದಿನೇಳನೇ ಶತಮಾನಕ್ಕಿಂತ ಹಿಂದಕ್ಕೆ ಕೊಂಡೊಯ್ಯುವುದಕ್ಕೆ ಸಾಧ್ಯವಾಗುವುದಿಲ್ಲ.

ತಾಳ್ತಜೆ ಕೃಷ್ಣ ಭಟ್ಟರ ಐತಿಹಾಸಿಕ ಕಾದಂಬರಿ 'ಕಡುಗಲಿ ಮಹಾಕವಿ ಪಾರ್ತಿಸುಬ್ಬ'ದ ವಿವರಗಳು ಈತ ಕುಂಬಳೆ ಅರಸ ಜಯಸಿಂಹನ ಕಾಲದಲ್ಲಿ ಬದುಕಿದ್ದನೆಂದೂ, ಚಂದ್ರಗಿರಿ ಹೋರಾಟದಲ್ಲಿ ಭಾಗಿಯಾಗಿದ್ದನೆಂಬುದನ್ನು ಉಲ್ಲೇಖಿಸುತ್ತದೆ. ಅಂತೆಯೇ ಪಾರ್ತಿಸುಬ್ಬ ಪುಳ್ಳೂರು ಬಾಚನ ಸಮಕಾಲೀನನಾಗಿದ್ದನೆಂಬ ವಿವರವೂ ಇದೆ. ಕುಂಬಳೆಯ ಅರಸ ಜಯಸಿಂಹನ ಕಾಲ ಹನ್ನೆರಡು ಹದಿಮೂರನೇ ಶತಮಾನವಾಗಿದ್ದು, ಪುಳ್ಳೂರು ಬಾಚನ ಐತಿಹ್ಯ ಮಾತ್ರ ನಮಗೆ ಲಭ್ಯವಿದ್ದು ಈತ ಹದಿನೇಳು ಹದಿನೆಂಟನೇ ಶತಮಾನದಲ್ಲಿ ಬದುಕಿದ್ದ ಸಾಂಸ್ಕೃತಿಕ ವೀರ ಎಂದು ತಿಳಿದುಬರುತ್ತದೆ. ಕ್ರಿ.ಶ ಹತ್ತನೇ ಶತಮಾನದಲ್ಲಿ ಕುಂಬಳೆ ರಾಜ್ಯವು ನೆಲೆಗೊಂಡು ಸ್ವತಂತ್ರವಾಗಿ ಆಳುತ್ತಿದ್ದಿತೆಂದೂ ಆ ಕಾಲದ ಒಬ್ಬ ಅರಸನು ಜಯಸಿಂಹನೆಂದು ತಳಂಗರೆಯ ಶಾಸನವು ಉಲ್ಲೇಖಿಸಿದೆ. ಹನ್ನೊಂದನೆಯ ಶತಮಾನದಲ್ಲಿ ಇನ್ನೊಬ್ಬ ಜಯಸಿಂಹನೂ, ಹದಿನಾಲ್ಕನೇ ಶತಮಾನದಲ್ಲಿ ಮತ್ತೊಬ್ಬ ಜಯಸಿಂಹನೂ ಕುಂಬಳೆ ಮನೆತನದಲ್ಲಿ ಆಳುತ್ತಿದ್ದರೆಂದೂ ಆಧಾರಗಳಿಂದ ತಿಳಿದುಬರುತ್ತದೆ. ಆ ಬಳಿಕ ಯಾರಾದರೂ ಹದಿನಾರು ಹದಿನೇಳನೇ ಶತಮಾನದಲ್ಲಿ ಜಯಸಿಂಹನೆಂಬ ಬೇರೆ ರಾಜ ಕುಂಬಳೆಯನ್ನು ಆಳುತ್ತಿದ್ದನೇ ಎಂಬುದಕ್ಕೆ ಯಾವುದೇ ವಿವರಗಳು ಲಭಿಸುವುದಿಲ್ಲ. ಈ ಕುರಿತು ಇನ್ನಷ್ಟು ಚಾರಿತ್ರಿಕ ಅವಲೋಕನಕ್ಕೆ ಅವಕಾಶವಿದೆ.

ಅಧ್ಯಾಯ ಎರಡರಲ್ಲಿ ಪಾರ್ತಿಸುಬ್ಬ ಮತ್ತು ತೆಂಕುತಿಟ್ಟು ಯಕ್ಷಗಾನ : ರಾಮನಾಟ್ಟಂ – ಕಥಕಳಿ ಪ್ರಭಾವ ವಿವೇಚನೆಯನ್ನು ಮಾಡಲಾಗಿದೆ. ಯಕ್ಷಗಾನದಲ್ಲಿ ಪ್ರಾದೇಶಿಕವಾಗಿ ಹಲವು ಬಗೆಯ ಪ್ರಯೋಗ ಪದ್ಧತಿಗಳಿವೆ. ಅವುಗಳಲ್ಲಿ ಮುಖ್ಯವಾಗಿ ಕರಾವಳಿ ಕರ್ನಾಟಕದಲ್ಲಿ 'ತೆಂಕುತಿಟ್ಟು' ಮತ್ತು 'ಬಡಗುತಿಟ್ಟು' ಎಂಬ ಎರಡು ತಿಟ್ಟುಗಳನ್ನು ನಾವು ಗಮನಿಸಬಹುದಾಗಿದೆ. ಉತ್ತರಕನ್ನಡದ ಕಡೆಗೆ 'ಬಡಾ ಬಡಗು' ಎಂಬ ತಿಟ್ಟನ್ನೂ ಕೆಲವು ಅಧ್ಯಯನಕಾರರು ಗುರುತಿಸಿದ್ದಾರೆ. ಇವುಗಳಲ್ಲಿ ತೆಂಕುತಿಟ್ಟು ಯಕ್ಷಗಾನದ ಹಿಮ್ಮೇಳ, ಪೂರ್ವರಂಗ, ಪ್ರಸಂಗ ಸಾಹಿತ್ಯ, ಬಣ್ಣ, ವೇಷಗಾರಿಕೆ ಹಾಗೂ ಪ್ರದರ್ಶನದಲ್ಲಿ ಅಮೂಲಾಗ್ರ ಬದಲಾವಣೆಯನ್ನು ತಂದು ರಂಗಕ್ಕೆ ಕಲಾತ್ಮಕತೆ ಹಾಗೂ ಶಾಸ್ತ್ರೀಯ ಶಿಸ್ತನ್ನು ತಂದುಕೊಟ್ಟ ಆಚಾರ್ಯ ಪುರುಷ ಪಾರ್ತಿಸುಬ್ಬ.

ಪಾರ್ತಿಸುಬ್ಬ ಯಕ್ಷಗಾನ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಪರಿಶೀಲಿಸಿ ಈತನನ್ನು 'ಯಕ್ಷಗಾನದ ನಾಡೋಜ'ನೆಂದು ಮುಳಿಯ ತಿಮ್ಮಪ್ಪಯ್ಯನವರು ಕರೆದಿದ್ದಾರೆ. ತೆಂಕುತಿಟ್ಟು ಯಕ್ಷಗಾನಕ್ಕೆ ಕಾಯಕಲ್ಪ ನೀಡಲು ಅವನಿಗೆ ಮುಖ್ಯ ಪ್ರೇರಣೆಯಾಗಿ ದೊರೆತುದು ಕೇರಳದ ಕಥಕಳಿ ಪ್ರಯೋಗ. ಪಾರ್ತಿಸುಬ್ಬ ಕೇರಳ ರಾಜ್ಯಕ್ಕೆ ಹೋಗಿ ಅಲ್ಲಿನ ಕಥಕಳಿಯನ್ನು ನೋಡಿ ಅಲ್ಲಿನ ಒಳ್ಳೆಯ ಅಂಶಗಳನ್ನು ಸ್ವೀಕರಿಸಿ ತೆಂಕುತಿಟ್ಟು ಯಕ್ಷಗಾನವನ್ನು ರೂಪಿಸಿದ್ದಾನೆ. ಬಾಲಕೇರಳವರ್ಮನೆಂಬ ಕೊಟ್ಟಾರಕರ ಮಹಾರಾಜ ರೂಪಿಸಿದ 'ರಾಮನಾಟ್ಟಂ' ಕಲಾಪ್ರಕಾರ ಹಾಗೂ ಆತ ಬರೆದ ರಾಮನಾಟ್ಟಂನ ರಾಮಾಯಣ ಪ್ರಬಂಧಗಳು

ಪಾರ್ತಿಸುಬ್ಬನ ಮೇಲೆ ಗಾಢ ಪ್ರಭಾವವನ್ನು ಬೀರಿದೆ ಎಂಬುದನ್ನು ಕುಕ್ಕಿಲ ಕೃಷ್ಣ ಭಟ್ಟರು ಸಾಧಾರವಾಗಿ ನಿರೂಪಿಸಿದ್ದಾರೆ. (ಕುಕ್ಕಿಲ ಸಂಪುಟ, ೧೯೮೮ ಪು. ೧೪೭-೧೫೭). ಪಾರ್ತಿಸುಬ್ಬನನ್ನು ತೆಂಕುತಿಟ್ಟು ಯಕ್ಷಗಾನಕ್ಕೆ ವ್ಯವಸ್ಥಿತ ರೂಪು ಕೊಟ್ಟ ಮಹನೀಯನೆಂದು ಅನೇಕ ವಿದ್ವಾಂಸರು ಅಭಿಪ್ರಾಯಿಸಿದ್ದಾರೆ. ಹಾಗೆ ರೂಪುಕೊಡುವಲ್ಲಿ ಆತನ ಮೇಲೆ ಕೇರಳದ ಕಲಾಪ್ರಕಾರಗಳ ಪ್ರಭಾವ ದಟ್ಟವಾಗಿದೆ ಎಂಬುದನ್ನು ಸಾಮಾನ್ಯವಾಗಿ ಎಲ್ಲರೂ ಒಪ್ಪಿಕೊಂಡಿದ್ದಾರೆ.

ಕೇರಳದ ಕಲಾಪ್ರಕಾರಗಳಾದ ಚಾಕ್ಯಾರ್ ಕುತ್ತು, ನಂಜ್ಯಾರ್ ಕುತ್ತು, ಕೂಡಿಯಾಟ್ಟಂ, ಕೃಷ್ಣನಾಟ್ಟಂ, ರಾಮನಾಟ್ಟಂ ಮತ್ತು ಕಥಕಳಿಗೂ ತೆಂಕುತಿಟ್ಟು ಯಕ್ಷಗಾನದ ಸ್ವರೂಪಕ್ಕೂ ನಿಕಟ ಸಾಮ್ಯತೆ ಇರುವುದನ್ನು ಈ ಅಧ್ಯಯನ ಗುರುತಿಸಿದೆ. ಅದರ ನೇರ ಅಥವಾ ಪರೋಕ್ಷ ಪ್ರಭಾವ ಪಾರ್ತಿಸುಬ್ಬನ ಮೇಲಾಗಿರುವುದು ಕಂಡುಬರುತ್ತದೆ. ಕೇರಳದಲ್ಲಿ ಬಹುಕಾಲ ಇದ್ದ ಪಾರ್ತಿಸುಬ್ಬ ಈ ಕಲಾಪ್ರಕಾರಗಳನ್ನು ನೋಡಿ ಅವುಗಳಿಂದ ಪ್ರೇರಣೆಯನ್ನು ಪಡೆದಿದ್ದಾನೆ.

ಪಾರ್ತಿಸುಬ್ಬ ತೆಂಕುತಿಟ್ಟು ಯಕ್ಷಗಾನದ ನಿರ್ಮಾತೃ. ಹಾಗೆಂದು ಈತನ ಪೂರ್ವದಲ್ಲಿ ಯಕ್ಷಗಾನ ಇರಲಿಲ್ಲವೆಂದು ಅರ್ಥವಲ್ಲ. ಇದು ಮೂಲದಲ್ಲಿ ಜನಪದರ ನಡುವೆ ಪ್ರಚಲಿತದಲ್ಲಿತ್ತು. ಯಕ್ಷಗಾನ, ತೆಲುಗಿನ ವೀಥಿ ನಾಟಕ, ಕೂಚುಪುಡಿ, ಭಾಗವತ ಮೇಳ, ತಮಿಳು ನಾಡಿನ ತೆರುಕೂತ್ತು, ಮಲಯಾಳದ ಕೂಡಿಯಾಟ್ಟಂ, ಮೋಹಿನಿಯಾಟ್ಟಂ, ರಾಮನಾಟ್ಟಂ, ಚಾಕ್ಯಾರ್ ಕೂತ್ತ್, ಶ್ರೀಲಂಕಾದ ಯಕ್ಕಪಾಹಾ, ನಾಡಗಂ, ಸೋಕಾರಿಗಳ್ ಇವೆಲ್ಲದರ ನಡುವೆ ಸಾಮ್ಯತೆ ಇದೆ ಎಂಬುದು ಈಗಾಗಲೇ ಸಂಶೋಧಕರಿಂದ ಗುರುತಿಸಲ್ಪಟ್ಟಿದೆ. ಇದನ್ನೇ ಪುರುಷೋತ್ತಮ ಬಿಳಿಮಲೆಯವರು "ಯಕ್ಷಗಾನವನ್ನು ಸ್ವತಂತ್ರಕಲೆ ಎಂಬುದರ ಬದಲು ಪ್ರಾಗ್ದ್ರಾವಿಡ ಕಲೆಯೊಂದರ ಬೆಳವಣಿಗೆಯ ರೂಪವಷ್ಟೇ" (ಯಕ್ಷಗಾನ ಪತ್ರಿಕೆ, ೧೯೮೧, ಸಂ.೧.ಸಂಚಿಕೆ ೪. ಪು.೨೦) ಎಂದು ಹೇಳಿದ್ದಾರೆ. ಮೂಲದ್ರಾವಿಡ ಭಾಷೆಯೊಂದು ಕವಲೊಡೆದು ಇಂದು ತಮಿಳು, ತುಳು, ಕನ್ನಡ, ತೆಲುಗು, ಮಲಯಾಳ ಮೊದಲಾದ ಸ್ವತಂತ್ರ ಭಾಷೆಗಳು ಬೆಳೆದು ಬಂದಂತೆ ಪ್ರಾಗ್ದ್ರಾವಿಡ ಕಲೆ ಬೇರೆ ಬೇರೆ ರೂಪವನ್ನು ಹೊಂದಿ ಇಂದು ಪ್ರತ್ಯೇಕ ಕಲಾಪ್ರಕಾರಗಳಾಗಿ ಬೆಳೆದು ನಿಂತಿದೆ ಎಂಬ ನಿಲುವನ್ನು ಒಪ್ಪಿಕೊಂಡು ಈ ಮಹಾಪ್ರಬಂಧದ ಅಧ್ಯಯನ ಸಾಗಿದೆ. ಪಾರ್ತಿಸುಬ್ಬ ಕೇರಳದಲ್ಲಿ ಹಲವು ವರ್ಷ ಇದ್ದನೆಂದೂ ಅಲ್ಲಿನ ಕಲಾಪ್ರಕಾರಗಳನ್ನು ಅಧ್ಯಯನ ಮಾಡಿದ್ದನೆಂಬ ವಿವರಗಳನ್ನು ಆತನ ಕಾಲದ ಕುರಿತ ಚರ್ಚೆಯಲ್ಲಿ ಆಧಾರ ಸಹಿತವಾಗಿ ಗಮನಿಸಲಾಗಿದೆ. ಮುಖ್ಯವಾಗಿ ಕೃಷ್ಣನಾಟ್ಟಂ, ರಾಮನಾಟ್ಟಂ ಹಾಗೂ ಕಥಕಳಿಯ ಪ್ರಭಾವಗಳನ್ನು ಸ್ವೀಕರಿಸಿದ್ದಾನೆ. ಮುಖ್ಯವಾಗಿ ರಾಮನಾಟ್ಟಂನ ಹಲವು ಅಂಶಗಳನ್ನು ಆತ ತೆಂಕುತಿಟ್ಟು ಯಕ್ಷಗಾನದ ರೂಪೀಕರಣದ ಸಂದರ್ಭದಲ್ಲಿ ಆದರ್ಶವಾಗಿಟ್ಟುಕೊಂಡಿದ್ದಾನೆ.

ಕೃಷ್ಣನಾಟ್ಟಂನಲ್ಲಿ ಕೃಷ್ಣನ, ರಾಮನಾಟ್ಟಂನಲ್ಲಿ ರಾಮನ ಕಥೆಯನ್ನು ಒಳಗೊಂಡ ಪ್ರಬಂಧಗಳನ್ನು ಕಾಣಬಹುದು. ಎರಡೂ ಕಲಾಪ್ರಕಾರಗಳಲ್ಲೂ ಒಂದೇ ಕಥೆಯನ್ನು ಆಧರಿಸಿದ ಎಂಟು ಪ್ರಸಂಗಗಳು ರಚನೆಗೊಂಡಿರುವುದನ್ನು ಗಮನಿಸಿದ ಪಾರ್ತಿಸುಬ್ಬ ರಾಮಾಯಣಕ್ಕೆ ಸಂಬಂಧಿಸಿದ ಎಂಟು ಪ್ರಸಂಗಗಳನ್ನು ರಚಿಸಿರುವುದನ್ನು ಕಾಣಬಹುದು. ಸಂಪೂರ್ಣವಾಗಿ ರಾಮಾಯಣವನ್ನು ಪ್ರಸಂಗರೂಪದಲ್ಲಿ ಹೇಳುವ ಉದ್ದೇಶಕ್ಕೆ ರಾಮನಾಟ್ಟಂ ಪ್ರಬಂಧಗಳೇ ಕಾರಣ ಎಂಬುದು ಸ್ಪಷ್ಟ. ರಾಮನಾಟ್ಟಂಗೆ ಕೃಷ್ಣನಾಟ್ಟಂನ ಎಂಟು ಪ್ರಬಂಧಗಳೇ ಪ್ರೇರಣೆ ಎಂಬುದನ್ನು ಮಲಯಾಳಂ ಕಲೆಗಳ ಚರಿತ್ರೆ ದಾಖಲಿಸಿದೆ.

ಇದಲ್ಲದೆ ಹಲವು ಕಲಾಂಶಗಳನ್ನು ಕೇರಳದ ಕಲಾಪ್ರಕಾರಗಳಿಂದ ಪಾರ್ತಿಸುಬ್ಬ ಯಕ್ಷಗಾನಕ್ಕೆ ತಂದಿದ್ದಾನೆ. ಕೃಷ್ಣನಾಟ್ಟಂನಲ್ಲಿ ಇಲ್ಲದ ಚೆಂಡೆಯನ್ನು ರಾಮನಾಟ್ಟಂನ ಹಿಮ್ಮೇಳದಲ್ಲಿ ಬಳಸಿಕೊಳ್ಳಲಾಯಿತು. ಕೃಷ್ಣನಾಟ್ಟಂನಲ್ಲಿ ಹಾಡೇ ಪ್ರಧಾನವಾಗಿ ಅಭಿನಯಕ್ಕೆ ಅವಕಾಶ ಕಡಿಮೆಯಿತ್ತು. ಆದರೆ ರಾಮನಾಟ್ಟಂನಲ್ಲಿ ಹಾಡಿನ ಜೊತೆಗೆ ಮುಖಾಭಿನಯ ಮತ್ತು ಹಸ್ತಾಭಿನಯಗಳಿಗೆ ಪ್ರಾಮುಖ್ಯತೆ ಸಿಕ್ಕಿತು. ಕೊಟ್ಟಾರಕ್ಕರ ತಂಬುರಾನ್ ಕೇರಳದ ಬೇರೆ ಬೇರೆ ಕಲಾಪ್ರಕಾರಗಳನ್ನು ಗಮನಿಸಿ, ಸ್ವೀಕರಿಸಿ ರಾಮನಾಟ್ಟಂನ್ನು ರೂಪಿಸಿದ.

ರಾಮನಾಟ್ಟಂನಲ್ಲಿ ಅಲ್ಪ ಪ್ರಮಾಣದ ಮಾತುಗಾರಿಕೆ ಇತ್ತು ಎಂಬ ಅಂಶ ಉಲ್ಲೇಖನೀಯ. ರಾಮನಾಟ್ಟಂನಲ್ಲಿ ರಾಮಾಯಣ ಕಥೆಯ ಬದಲಾಗಿ, ಮಹಾಭಾರತ, ಪುರಾಣ ಕಥೆಗಳನ್ನು ಅಭಿನಯಿಸಲು ತೊಡಗಿದಾಗ ರಾಮನಾಟ್ಟಂ ಎಂಬ ಹೆಸರು ಅದಕ್ಕೆ ಸಲ್ಲದೇ ಹೋಯಿತು. ಕಥೆ ಹೇಳುವ ಕಳಿ ಅಂದರೆ ಆಟ ಎನ್ನುವ ಅರ್ಥದಲ್ಲಿ ಕಥಕಳಿ ಎಂಬ ಹೆಸರು ಬಂತು. 'ಕೇವಲ ಪ್ರಸಂಗದ ಕಾರಣದಿಂದ ಮಾತ್ರವಲ್ಲ ಮುಂದಿನ ಕೆಲವು ಕಲಾ ವಿದ್ವಾಂಸರು ರಾಮನಾಟ್ಟಂನ ಸ್ವರೂಪದಲ್ಲಿ ಹೆಚ್ಚು ಶಾಸ್ತ್ರೀಯ ಚೌಕಟ್ಟನ್ನು ಒದಗಿಸುವ ಪ್ರಯತ್ನವನ್ನು ಮಾಡಿದರು.' ಆಗ ರಾಮನಾಟ್ಟಂನಲ್ಲಿ ಹಿಂದೆ ಬಳಕೆಯಲ್ಲಿದ್ದ ಮಾತುಗಾರಿಕೆಯನ್ನು ಕೈಬಿಟ್ಟು ಆ ಮಾತಿನ ಅಭಿವ್ಯಕ್ತಿಯನ್ನು ಆಂಗಿಕಾಭಿನಯ (ಮುದ್ರೆ)ದ ಮೂಲಕ ತುಂಬುವಂತೆ ಮಾಡಿದರು (ಮೆನೋನ್ ಕೆ.ವಿ., ೧೯೭೫, ಪು. ೧೧) ಎಂದು ಅಭಿಪ್ರಾಯಪಟ್ಟಿದ್ದಾರೆ.

ರಾಮನಾಟ್ಟಂನ ರಾಮಕಥಾ ಪ್ರಬಂಧ, ರಂಗ ಸ್ವರೂಪಗಳನ್ನು ತೆಂಕುತಿಟ್ಟು ಯಕ್ಷಗಾನದ ಮಾದರಿಯಾಗಿ ಪಾರ್ತಿಸುಬ್ಬ ಸ್ವೀಕರಿಸಿದಂತೆ ತೋರುತ್ತದೆ. ಕುಕ್ಕಿಲ ಕೃಷ್ಣ ಭಟ್ಟರು ಕಥಕಳಿಯ ಪ್ರಭಾವ ಎಂದು ಹೇಳಿದ್ದರು. ಆದರೆ ಅದು ಕಥಕಳಿ ರೂಪುಗೊಳ್ಳುವ ಪೂರ್ವದ ರಾಮನಾಟ್ಟಂನ್ನೂ ಕುರಿತು ಹೇಳಿದ ಮಾತು ಎನಿಸುತ್ತದೆ. ಪಾರ್ತಿಸುಬ್ಬನ ಪ್ರಸಂಗಗಳಲ್ಲಿ ಕಥಕಳಿಯ ಗಾಢ ಪ್ರಭಾವವಿದೆಯೆಂದು ಅವರು ಉಲ್ಲೇಖಿಸುವ ಕಥಕಳಿಯ ಪ್ರಸಂಗ ಪದ್ಯಗಳು ರಾಮನಾಟ್ಟಂನ ಪದ್ಯಗಳೇ ಆಗಿವೆ.

ಕಥಕಳಿಯ ಪೂರ್ವರೂಪವಾದ ರಾಮನಾಟ್ಟಂನ ಸಂಕ್ಷಿಪ್ತ ವಾಚಿಕವನ್ನು ವಿಸ್ತರಿಸಿ, ರಾಮನಾಟ್ಟಂನ ಪ್ರಸಂಗ ಪಠ್ಯವನ್ನೇ ಆದರ್ಶವಾಗಿಟ್ಟುಕೊಂಡು ತೆಂಕುತಿಟ್ಟು ಯಕ್ಷಗಾನಕ್ಕೆ ಶಾಸ್ತ್ರೀಯ ರಂಗಕಲೆಯ ರೂಪವನ್ನು ಕೊಡಲು ಪಾರ್ತಿಸುಬ್ಬ ಪ್ರಯತ್ನಿಸಿದ. ಅದೇ ಕಾಲಕ್ಕೆ ರಾಮನಾಟ್ಟಂನ ಪರಿಷ್ಕೃತ ರೂಪವಾದ ಕಥಕಳಿ ಪ್ರದರ್ಶನಗಳು ಆರಂಭಗೊಂಡಿದ್ದವು. ಪಾರ್ತಿಸುಬ್ಬ ಆ ಪ್ರದರ್ಶನಗಳನ್ನೂ ಗಮನಿಸಿ ಅಲ್ಲಿನ ವೇಷಭೂಷಣ, ಬಣ್ಣಗಾರಿಕೆ ಇತ್ಯಾದಿಗಳನ್ನು ಯಕ್ಷಗಾನಕ್ಕೆ ತಂದಿದ್ದಾನೆ ಎಂಬುದನ್ನು ಈ ಅಧ್ಯಾಯ ಮುಖ್ಯವಾಗಿ ಚರ್ಚಿಸಿದೆ.

ಪಾರ್ತಿಸುಬ್ಬನ ಕೃತಿಗಳು : ವಸ್ತು ಪರಿಶೀಲನ ಎಂಬ **ಮೂರನೇ ಅಧ್ಯಾಯ**ದಲ್ಲಿ ಪಾರ್ತಿಸುಬ್ಬನ ಕೃತಿಗಳ ವಸ್ತು ನಿರ್ವಹಣೆಯ ರೀತಿ, ರಂಗಕ್ಕೆ ಅನುಯೋಜ್ಯವಾದ ರೀತಿಯ ಕಥಾ ನಡಿಗೆ ಇತ್ಯಾದಿಗಳನ್ನು ಗಮನದಲ್ಲಿಟ್ಟುಕೊಂಡು ವಿಶ್ಲೇಷಣೆಯನ್ನು ನಡೆಸಿದ್ದೇನೆ. ಪಾರ್ತಿಸುಬ್ಬನ ಯಕ್ಷಗಾನ ಕೃತಿಗಳ ಮೂಲ ಕಥಾನಡಿಗೆಯ ಸತ್ವವನ್ನು ಗಮನದಲ್ಲಿಟ್ಟುಕೊಂಡು ಇಲ್ಲಿನ ಪರಿಶೀಲನೆಯನ್ನು ಕೈಗೊಂಡಿದ್ದೇನೆ.

ಪಾರ್ತಿಸುಬ್ಬನಿಗೆ ಸಮಗ್ರ ರಾಮಾಯಣವನ್ನು ಯಕ್ಷಗಾನಕ್ಕೆ ತರಬೇಕೆಂಬ ಉದ್ದೇಶ ಸ್ಪಷ್ಟವಾಗಿದ್ದಂತೆ ತೋರುತ್ತದೆ. ಪ್ರದರ್ಶನದ ದೃಷ್ಟಿಯಿಂದ ಅದನ್ನು ಒಂದೇ ಪ್ರಸಂಗವಾಗಿಸುವುದು ಅಸಾಧ್ಯವಾದುದರಿಂದ ಬಿಡಿ ಬಿಡಿ ಪ್ರಸಂಗಗಳಾಗಿ ಅವುಗಳನ್ನು ರಚಿಸಿದ್ದಾನೆ. ಇವು ಪ್ರದರ್ಶನ ದೃಷ್ಟಿಯ ಖಂಡಗಳೇ ಹೊರತು ಪಠ್ಯದ ನೆಲೆಯದ್ದಲ್ಲ. ರಾಮಾಯಣ ಕಥಾಕೇಂದ್ರಿತ ಎಂಟು ಯಕ್ಷಗಾನ ಪ್ರಸಂಗಗಳನ್ನು ರಾಮಾಯಣ ಮಹಾಕಾವ್ಯದ ಎಸಳುಗಳಂತೆ ಪರಿಭಾವಿಸಬಹುದಾಗಿದೆ. ಪುತ್ರಕಾಮೇಷ್ಠಿಯಿಂದ ತೊಡಗಿ ಕುಶಲವರ ಕಾಳಗದವರೆಗಿನ ಕಥಾವಿಸ್ತಾರವು ಈತನ ಎಂಟು ಪ್ರಸಂಗಗಳನ್ನು ಜೋಡಿಸಿದಾಗ ಸಿಗುತ್ತದೆ.

ಅರ್ಥಸ್ಫುರಣೆಗೆ ಯೋಗ್ಯವಾಗುವ ಸಾಹಿತ್ಯ, ವೈವಿಧ್ಯಮಯ ರಸಾವಿಷ್ಕಾರಕ್ಕೆ ಬೇಕಾಗುವ ಕಥಾನಡಿಗೆ, ಪ್ರದರ್ಶನಕ್ಕೆ ಅನುಯೋಜ್ಯವಾಗುವ ಪಾತ್ರಕಲ್ಪನೆ, ಸನ್ನಿವೇಶ ನಿರ್ಮಾಣ, ಹಾಡಿಗೆ ಒಗ್ಗುವ ಗಮಕವಿನ್ಯಾಸಗಳು, ಛಂದಸ್ಸು, ಭಾಷಾ ಬಳಕೆಯ ನೈಪುಣ್ಯಗಳಿಂದ ಪಾರ್ತಿಸುಬ್ಬನ ಪ್ರಸಂಗಗಳು ವಿಶಿಷ್ಟವಾಗಿವೆ.

ಪಾರ್ತಿಸುಬ್ಬ ರಚಿಸಿದ ಯಕ್ಷಗಾನ ಪ್ರಸಂಗಗಳು ಒಟ್ಟು ಹತ್ತು. 'ಸಭಾಲಕ್ಷಣ'ವೆಂಬ ಯಕ್ಷಗಾನದ ಕುರಿತ ಲಕ್ಷಣಗ್ರಂಥವನ್ನೂ ಅವನು ರಚಿಸಿದ್ದಾನೆ. ಆತ ರಚಿಸಿರುವ ಯಕ್ಷಗಾನ ಪ್ರಸಂಗಗಳು : ೧.ಪುತ್ರಕಾಮೇಷ್ಠಿ–ಸೀತಾಕಲ್ಯಾಣ ೨. ಪಟ್ಟಾಭಿಷೇಕ– ಪಂಚವಟಿ ೩. ಪಂಚವಟಿ– ವಾಲಿಸಂಹಾರ ೪. ಉಂಗುರ ಸಂಧಿ ೫. ಸೇತುಬಂಧನ ೬. ಅಂಗದ ಸಂಧಾನ ೭. ಕುಂಭಕರ್ಣಾದಿ ಕಾಳಗ ೮. ಕುಶಲವರ ಕಾಳಗ ೯. ಕೃಷ್ಣ ಚರಿತೆ ೧೦. ಐರಾವತ.

ಪಾರ್ತಿಸುಬ್ಬನ ಪ್ರಸಂಗಗಳು ಓಲೆಗರಿ ಮತ್ತು ಕಾಗದದ ಹಸ್ತಪ್ರತಿ ರೂಪದಲ್ಲಿ ಹಾಗೂ ಬಿಡಿ ಬಿಡಿಯಾಗಿ ಪ್ರಕಟಗೊಂಡ ಅಚ್ಚಿನ ಪ್ರತಿಗಳು ಸಿಕ್ಕಿವೆ. ಬೇರೆ ಬೇರೆ ಪ್ರಸಂಗಗಳ ೧೫ ಓಲೆಗರಿ ಪ್ರತಿಗಳು, ೧೮

ಕಾಗದದ ಹಸ್ತಪ್ರತಿಗಳು ೧೯ ಅಚ್ಚಿನ ಪ್ರತಿಗಳು ದೊರಕಿವೆ. ಇವುಗಳನ್ನು ಸಂಗ್ರಹಿಸಿ, ಪಾಠಭೇದಗಳನ್ನು ಪರಿಶೋಧಿಸಿ ಕುಕ್ಕಿಲರು ಪಾರ್ತಿಸುಬ್ಬನ ಪ್ರಸಂಗಗಳ ಗ್ರಂಥಸಂಪಾದನೆಯನ್ನು ಮಾಡಿದ್ದಾರೆ. ಹೆಚ್ಚಿನ ಪ್ರಸಂಗಗಳು ಆಗ ಅಚ್ಚಾಗಿದ್ದವು. ಅವುಗಳಲ್ಲಿ ಸಮಗ್ರವಾಗಿ ಅಚ್ಚಾಗದೆ ಇದ್ದ ಪ್ರಸಂಗ ಕೃಷ್ಣಚರಿತೆ. ಉಡುಪಿ ಮಧ್ವಸಿದ್ಧಾಂತ ಗ್ರಂಥಾಲಯದವರು ೧೯೩೦ರಲ್ಲಿ ಪೂತನಾ ಮೋಕ್ಷದವರೆಗಿನ ಕತೆಯನ್ನು ಶ್ರೀಕೃಷ್ಣ ಬಾಲಲೀಲೆ ಎಂಬ ಹೆಸರಿನಿಂದ ಮುದ್ರಿಸಿದ್ದಾರೆ. ಅದರಲ್ಲಿ ಬಾಲಲೀಲೆಯ ಅನ್ಯಕರ್ತೃಕವಾದ ಎರಡು ಪದ್ಯಗಳು ಪ್ರಕ್ಷಿಪ್ತವಾಗಿ ಸೇರಿಕೊಂಡು ಇಡೀ ಪ್ರಸಂಗವೇ ಅನ್ಯಕರ್ತೃಕವೆಂಬ ಅನುಮಾನಕ್ಕೂ ಕಾರಣವಾಗಿತ್ತು. (ಪಾದೇಕಲ್ಲು ವಿಷ್ಣು ಭಟ್ಟ, ೨೦೦೭, ಪು.ಸಂ ೭೭) ಕುಕ್ಕಿಲರು ಸಿಕ್ಕಿದ ಓಲೆಪ್ರತಿಗಳನ್ನು ಆಧಾರವಾಗಿಟ್ಟುಕೊಂಡು ಈ ಪ್ರಸಂಗವನ್ನೂ ಸಂಪಾದಿಸಿದ್ದು ಹಸ್ತಪ್ರತಿಗಳ ಆಧಾರದಲ್ಲಿ ಆತನ ಪ್ರಸಂಗದ ಹೆಸರು 'ಕೃಷ್ಣಚರಿತೆ' ಎಂದು ಗುರುತಿಸಿದ್ದಾರೆ.

ಪ್ರಸ್ತುತ ಕುಕ್ಕಿಲ ಕೃಷ್ಣ ಭಟ್ಟರು ಸಂಪಾದಿಸಿದ 'ಪಾರ್ತಿಸುಬ್ಬನ ಪ್ರಸಂಗಗಳು' ಎಂಬ ಕೃತಿಯನ್ನು ಮುಖ್ಯ ಆಕರವಾಗಿಟ್ಟುಕೊಂಡು ಪಾರ್ತಿಸುಬ್ಬನ ಪ್ರಸಂಗಗಳ ವಿಶ್ಲೇಷಣೆಯನ್ನು ಈ ಅಧ್ಯಾಯದಲ್ಲಿ ನಡೆಸಲಾಗಿದೆ. ಮುಖ್ಯವಾಗಿ ಕಥೆಯನ್ನು ಸಂಕ್ಷಿಪ್ತವಾಗಿ ಸಂಗ್ರಹಿಸಿ, ಅದರ ರಸಘಟ್ಟಗಳನ್ನು ಅಲ್ಲಲ್ಲೇ ಗುರುತಿಸಿ, ಅಗತ್ಯಬಿದ್ದಲ್ಲಿ ಪದ್ಯಗಳನ್ನು ಉದ್ಧರಿಸಿ ಈ ವಿಶ್ಲೇಷಣೆಯನ್ನು ಕೈಗೊಳ್ಳಲಾಗಿದೆ. ಸಾಹಿತ್ಯ ಮತ್ತು ಪ್ರದರ್ಶನದ ಚರ್ಚೆಯನ್ನು ಮುಂದಿನ ಅಧ್ಯಾಯಗಳಲ್ಲಿ ಕೈಗೊಂಡಿರುವುದರಿಂದ ಇಲ್ಲಿ ಆ ವಿವರಗಳನ್ನು ಚರ್ಚಿಸಿಲ್ಲ.

ಅಧ್ಯಾಯ ನಾಲ್ಕರಲ್ಲಿ ಸಾಹಿತ್ಯ ಪಠ್ಯವಾಗಿ ಪಾರ್ತಿಸುಬ್ಬನ ಪ್ರಸಂಗಗಳ ವಿಶ್ಲೇಷಣೆಯನ್ನು ಕೈಗೊಳ್ಳಲಾಗಿದೆ. ಯಕ್ಷಗಾನ ಪ್ರಸಂಗ ಸಾಹಿತ್ಯವು ಸಾಹಿತ್ಯ ಪ್ರಕಾರಗಳಾದ ಕಾವ್ಯ ಮತ್ತು ನಾಟಕ ಎರಡರ ಸತ್ವವನ್ನೂ ಮೈಗೂಡಿಸಿಕೊಂಡ ವಿಶಿಷ್ಟ ಪ್ರಕಾರ. ಪ್ರದರ್ಶನದ ಉದ್ದೇಶಕ್ಕೆ ಅನುಗುಣವಾಗಿಯೇ ಪ್ರಸಂಗಗಳು ದುಡಿಯಬೇಕಾಗಿರುವುದರಿಂದ ಸಾಮಾನ್ಯವಾಗಿ ಪ್ರದರ್ಶನ ಯೋಗ್ಯ ಕಥನವನ್ನು ಹೊಂದಿರುವ ರಾಮಾಯಣ, ಮಹಾಭಾರತ, ಭಾಗವತ, ಪುರಾಣ ವಸ್ತುವನ್ನೊಳಗೊಂಡ ಪ್ರಸಂಗಗಳೇ ಹೆಚ್ಚು ಬಂದಿವೆ. ಪಾರ್ತಿಸುಬ್ಬನ ಪ್ರಸಂಗಗಳಿಗೆ ಹೀಗೆ ಆಕರವಾದ ಕೃತಿಗಳು ಯಾವುವು? ಹಾಗೂ ಕವಿ ತನ್ನ ಪ್ರಸಂಗ ರಚನೆಯಲ್ಲಿ ಈ ಆಕರಗಳ ಪ್ರಭಾವ ಪ್ರೇರಣೆಗಳನ್ನು ಎಷ್ಟು ಸ್ವೀಕರಿಸಿದ್ದಾನೆ? ತನ್ನ ಸ್ವಾತಂತ್ರ್ಯವನ್ನು, ಅನನ್ಯತೆಯನ್ನು ಹೇಗೆ ಅಭಿವ್ಯಕ್ತಿಸಿದ್ದಾನೆ? ಆತನ ಪ್ರಸಂಗಗಳ ಸಾಹಿತ್ಯ, ಛಂದಸ್ಸು, ಸಂಗೀತಾಂಶಗಳು ಪ್ರಕಟಗೊಂಡ ಬಗೆ ಹೇಗೆ ಎಂಬಿತ್ಯಾದಿ ವಿಶ್ಲೇಷಣೆಯನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಪಾರ್ತಿಸುಬ್ಬನ ಯಕ್ಷಗಾನದ ಪ್ರಸಂಗ ರಚನೆಗೆ ವಸ್ತು, ಕಥನ ಮಾದರಿ, ಶೈಲಿ, ಭಾಷೆ, ಛಂದಸ್ಸು ಮೊದಲಾದ ಹಲವು ನೆಲೆಗಳಿಗೆ ಆಕರಗಳಾಗಿ ಒದಗಿದ ಕನ್ನಡ ಕಾವ್ಯಗಳೆಂದರೆ ಕುಮಾರವ್ಯಾಸ ಭಾರತ,

ತೊರವೆ ರಾಮಾಯಣ, ಕೌಶಿಕ ರಾಮಾಯಣ ಮತ್ತು ಲಕ್ಷ್ಮೀಶನ ಕನ್ನಡ ಜೈಮಿನಿ ಭಾರತ. ಈತನ ರಾಮಾಯಣ ಪ್ರಸಂಗಗಳಿಗೆ ಮುಖ್ಯವಾದ ಆಕರ ಕೇರಳದ ರಾಮನಾಟ್ಟಂನ ಪ್ರಬಂಧಗಳು ಮತ್ತು ಕುಮಾರವಾಲ್ಮೀಕಿಯ ತೊರವೆ ರಾಮಾಯಣ.

ಪಾರ್ತಿಸುಬ್ಬನ ರಾಮಾಯಣ ಪ್ರಸಂಗಗಳ ಕಥೆ ಒಂದು ಸಮ್ಮಿಶ್ರ ರಾಮಾಯಣ. ಪರಂಪರೆಯಿಂದ ಕೇಳಿದ ಕಥೆ, ವಾಲ್ಮೀಕಿ ರಾಮಾಯಣ, ರಾಮನಾಟ್ಟಂನ ರಾಮಾಯಣ ಪ್ರಸಂಗಗಳು, ತೊರವೆ ರಾಮಾಯಣ, ಕೌಶಿಕ ರಾಮಾಯಣ, ಜೈಮಿನಿ ಭಾರತ, ಹನೂಮದ್ರಾಮಾಯಣ, ಜಾನಪದ ಮೂಲದ ರಾಮಾಯಣ ಕಥೆ ಹೀಗೆ ಬಹುಮೂಲಗಳ ಪ್ರೇರಣೆ, ಪ್ರಭಾವಗಳನ್ನು ಅರಗಿಸಿಕೊಂಡ ಹೊಸ ರಾಮಾಯಣ. ರಂಗಕ್ಕೂ ಅನ್ವಯವಾಗುವ ಮಾದರಿಯದ್ದು.

ಆಕರ ಪರಿಶೀಲನೆಗೆ ಸಂಬಂಧಪಟ್ಟಂತೆ ಖಚಿತವಾಗಿ ಕವಿ ಇದೇ ಮೂಲಗಳಿಂದ ಕತೆ, ಘಟನೆ, ಆಶಯ, ಅಭಿವ್ಯಕ್ತಿ ಕ್ರಮಗಳನ್ನು ಸ್ವೀಕರಿಸಿದ್ದಾನೆ ಎಂದು ಹೇಳುವುದು ಕಷ್ಟ. ಅದಕ್ಕೆ ಕಾರಣಗಳು ಹಲವು. ಪ್ರಭಾಕರ ಜೋಶಿಯವರು ಇದನ್ನು ಸರಿಯಾಗಿಯೇ ಗುರುತಿಸಿದ್ದಾರೆ; "ಒಂದು ಕೃತಿಯೊಂದರ ಕಾಲದಲ್ಲಿ, ಒಂದು ವಿಷಯವು ವ್ಯಾಪಕವಾಗಿ ಪ್ರಚಾರದಲ್ಲಿದ್ದು ಅದು ವಿಭಿನ್ನ ರಚನೆಗಳಲ್ಲಿ ಸ್ವತಂತ್ರವಾಗಿಯೇ ಪ್ರಭಾವ ಬೀರುವ ಸಾಧ್ಯತೆಯಿದೆ. ಅಂತೆಯೇ ಕವಿಯು ಯಾವುದನ್ನು ಎಲ್ಲಿಂದ ಗ್ರಹಿಸಿದನೆಂದು ನಿರ್ಣಯಿಸಲು ಸಾಧ್ಯವಾಗದಷ್ಟು ಮೂಲಗಳು ಅದಕ್ಕೆ ಗೋಚರಿಸುವುದು. ತೊರವೆ ರಾಮಾಯಣ, ಹನೂಮದ್ರಾಮಯಣ, ಕೌಶಿಕ ರಾಮಾಯಣ, ಕಥಕಳಿ ಪ್ರಸಂಗ ಇವುಗಳಲ್ಲೆಲ್ಲಾ ಒಂದು ವಿಚಾರವು ಇದ್ದಾಗ ಯಕ್ಷಗಾನ ಕವಿ ಅದನ್ನು ಎಲ್ಲಿಂದ ಗ್ರಹಿಸಿದ ಎಂದು ನಿರ್ಧರಿಸುವುದು ಕಷ್ಟ" (ವಾಲ್ಮೀಕಿ ರಾಮಾಯಣ ಮತ್ತು ಪರಂಪರೆ, ಪು. ೫೮–೫೯) ಎಂದು ಹೇಳಿದ್ದಾರೆ. ಆದರೂ ಯಾವ ಯಾವ ಮೂಲಗಳ ಪ್ರೇರಣೆಯನ್ನು ಪಾರ್ತಿಸುಬ್ಬ ಪಡೆದಿರಬಹುದೆಂಬ ಶೋಧನೆಯನ್ನು ಮಾಡುವ ಪ್ರಯತ್ನ ಇಲ್ಲಿನದು. ಆಕರ ವಿಶ್ಲೇಷಣೆಯೊಂದಿಗೆ ಈತನ ಪ್ರಸಂಗಗಳ ರಸಪ್ರತಿಪಾದನೆ ಮತ್ತು ಸಂಗೀತ, ಛಂದಸ್ಸಿನ ಕುರಿತೂ ಈ ಅಧ್ಯಾಯದಲ್ಲಿ ಚರ್ಚಿಸಿದ್ದೇನೆ.

ರಂಗಪಠ್ಯವಾಗಿ ಪಾರ್ತಿಸುಬ್ಬನ ಪ್ರಸಂಗಗಳು ಎಂಬ **ಅಧ್ಯಾಯ ಐದರಲ್ಲಿ** ಪಾರ್ತಿಸುಬ್ಬನ ಪ್ರಸಂಗಗಳ ಪ್ರದರ್ಶನ ಕೇಂದ್ರಿತ ಆಲೋಚನೆಗಳನ್ನು ಚರ್ಚಿಸಿದೆ. ಆರಂಭದಲ್ಲಿ ಯಕ್ಷಗಾನ ಪ್ರದರ್ಶನ ಇತಿಹಾಸ ಬೆಳೆದು ಬಂದ ಬಗೆಯನ್ನು ಪ್ರಾಸ್ತಾವಿಕವಾಗಿ ನೀಡಲಾಗಿದೆ. ಈ ಹಿನ್ನೆಲೆಯನ್ನಿಟ್ಟುಕೊಂಡು ಯಕ್ಷಗಾನದ ಪ್ರದರ್ಶನಕ್ಕೆ ಪಾರ್ತಿಸುಬ್ಬನ ಕಾಲದ ಮತ್ತು ಆತನ ದೃಷ್ಟಿಕೋನ ಹೇಗಿತ್ತು ಎಂಬುದನ್ನು ಪ್ರಸಂಗ ರಚನಾ ವಿನ್ಯಾಸದ ಮತ್ತು ಉಲ್ಲೇಖಗಳ ಹಿನ್ನೆಲೆಯಿಂದ ಅಭ್ಯಾಸವನ್ನು ನಡೆಸಲಾಗಿದೆ. ಪಾರ್ತಿಸುಬ್ಬನ ಪ್ರಸಂಗಗಳ ರಚನಾ ಸ್ವರೂಪ ಪ್ರದರ್ಶನದ ನಡೆಗೆ ಹೇಗೆ ಅನುಯೋಜ್ಯವಾಗಿದೆ ಮತ್ತು ಪದ್ಯಗಳಲ್ಲಿನ

ಅರ್ಥಪ್ರಸವ ಕ್ಷಮತೆ ತಾಳಮದ್ದಳೆಗಳಿಗೆ ಹೇಗೆ ಅನುಕೂಲಕರವಾಗಿದೆ ಎಂಬುದನ್ನು ಈ ಅಧ್ಯಾಯದಲ್ಲಿ ಚರ್ಚಿಸಲಾಗಿದೆ. ಪ್ರಸಂಗ ಪಠ್ಯವೊಂದು ರಂಗಪಠ್ಯವಾಗುವ ನೆಲೆಯನ್ನು ಈ ಅಧ್ಯಾಯದಲ್ಲಿ ಸೂಕ್ಷ್ಮ ವಿವೇಚನೆಗೆ ಒಳಪಡಿಸಲಾಗಿದೆ.

ಅಧ್ಯಾಯ ಆರರಲ್ಲಿ ಪಾರ್ತಿಸುಬ್ಬನ ಪ್ರಸಂಗಗಳ ಜೊತೆಗೆ ಇತರ ಯಕ್ಷಗಾನ ಪ್ರಸಂಗಗಳ ತೌಲನಿಕ ವಿವೇಚನೆಯನ್ನು ಮಾಡಲಾಗಿದೆ. ಇದರಲ್ಲಿ ಮುಖ್ಯವಾಗಿ ಎರಡು ನೆಲೆಗಳಿಂದ ವಿವೇಚನೆ ನಡೆಸಲಾಗಿದೆ. ಒಂದು ಪಾರ್ತಿಸುಬ್ಬನ ಪ್ರಸಂಗಗಳು ಮತ್ತು ಸಮಾನ ಕಥಾನಕವಿರುವ ಇತರ ಪ್ರಸಂಗಗಳ ತೌಲನಿಕ ಅಧ್ಯಯನ ಮತ್ತೊಂದು ಪಾರ್ತಿಸುಬ್ಬ ಮತ್ತು ಇತರ ಪ್ರಸಂಗಕರ್ತರ ರಚನಾ ವಿನ್ಯಾಸವನ್ನು ಗಮನಿಸಿ ಪಾರ್ತಿಸುಬ್ಬನ ಅನನ್ಯತೆ ಮತ್ತು ಮುಂದಿನ ಪ್ರಸಂಗಕರ್ತರ ಮೇಲೆ ಆತನ ಪ್ರಭಾವಗಳನ್ನು ಗುರುತಿಸಲಾಗಿದೆ. ಕವಿ ಮುದ್ದಣ, ಕೀರಿಕ್ಕಾಡು ವಿಷ್ಣು ಮಾಸ್ತರರು, ಬಡಕಬೈಲು ಸಂಕಯ್ಯ ಭಾಗವತ, ಸೀತಾನದಿ ಗಣಪಯ್ಯ, ಮಂದಾರ ಕೇಶವ ಭಟ್ಟ, ಜತ್ತಿ ಈಶ್ವರ ಭಟ್ಟ, ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತರು ಬರೆದ ಪ್ರಸಂಗಗಳೊಂದಿಗೆ ತೌಲನಿಕ ಅಧ್ಯಯನವನ್ನು ಇಲ್ಲಿ ನಡೆಸಲಾಗಿದೆ. ಪಾರ್ತಿಸುಬ್ಬ ಬರೆದ ಪ್ರಸಂಗಗಳನ್ನೇ ವಸ್ತುವಾಗಿರಿಸಿಕೊಂಡ ಪ್ರಸಂಗಗಳನ್ನು ರಚಿಸಿದ ಕವಿಗಳು, ಪಾರ್ತಿಸುಬ್ಬನ ಪ್ರಸಂಗಗಳನ್ನೇ ಅನ್ಯ ಭಾಷೆಯಲ್ಲಿ ಅನುವಾದಿಸಿದ ಕವಿಗಳನ್ನು ಇಲ್ಲಿ ಪ್ರಮುಖವಾಗಿ ಗಮನಿಸಿ ಅಧ್ಯಯನ ಮಾಡಲಾಗಿದೆ.

ಸಮಾರೋಪದಲ್ಲಿ ಮಹಾಪ್ರಬಂಧದ ಫಲಿತಗಳ ಮುಖ್ಯಾಂಶಗಳನ್ನು ದಾಖಲಿಸಿದ್ದೇನೆ.

- ಪಾರ್ತಿಸುಬ್ಬನು ಕುಂಬಳೆಯವನೆಂದು, ಆತ ಕಣಿಪುರದ ಕೃಷ್ಣ ಮತ್ತು ಮಧೂರಿನ ಗಣಪತಿ ಭಕ್ತನೆಂಬುವುದನ್ನು ಈಗಾಗಲೇ ನಡೆದಿರುವ ಚರ್ಚೆಯನ್ನು ಕ್ರೋಢೀಕರಿಸಿ, ವಿಶ್ಲೇಷಿಸಿ ತೀರ್ಮಾನಕ್ಕೆ ಬರಲಾಗಿದೆ. ಕಾರಂತರೆಂದಂತೆ ಆತ ಬ್ರಹ್ಮಾವರದವನೆಂಬ, ಅಜಪುರ ಅವನ ಹುಟ್ಟೂರು ಎಂಬ ವಾದವನ್ನು ಪುಷ್ಟೀಕರಿಸಲು ಸಾಕಷ್ಟು ಸಾಕ್ಷ್ಯಗಳಿಲ್ಲ ಎಂಬ ತೀರ್ಮಾನವನ್ನು ಒಪ್ಪಲಾಗಿದೆ.
- ಪಾರ್ತಿಸುಬ್ಬನ ಕಾಲದ ಕುರಿತ ಚರ್ಚೆಯಲ್ಲಿ ಕ್ರಿ.ಶ ೧೫೫೦ ರಿಂದ–೧೮೨೦ರ ನಡುವೆ ಬೇರೆ ಬೇರೆ ಕಾಲವನ್ನು ಸಾಹಿತ್ಯ ಚರಿತ್ರೆಕಾರರು ಮಂಡಿಸಿದ್ದಾರೆ. ಇದರಲ್ಲಿ ಕುಕ್ಕಿಲ ಕೃಷ್ಣ ಭಟ್ಟರು ಸೂಚಿಸಿದ ಕಾಲ ಸು.ಕ್ರಿ.ಶ ೧೫೫೦–೧೬೨೦ನ್ನು ಕೊನೆಗೆ ಎಲ್ಲರೂ ಒಪ್ಪಿಕೊಂಡಿದ್ದಾರೆ. ಈ ಅಂಶವನ್ನು ಗಮನದಲ್ಲಿಟ್ಟುಕೊಂಡು, ಈ ಅಧ್ಯಯನದ ಸಂದರ್ಭದಲ್ಲಿ ಒದಗಿದ ರಾಮನಾಟ್ಟಂ, ದಾಸ ಸಾಹಿತ್ಯದ ಪ್ರಭಾವಗಳ ಸಾಕ್ಷ್ಯಗಳನ್ನು ಪರಿಗಣಿಸಿ, ಪಾರ್ತಿಸುಬ್ಬನ ಕಾಲವನ್ನು ಹದಿನೇಳನೇ ಶತಮಾನಕ್ಕಿಂತ ಹಿಂದಕ್ಕೆ ಕೊಂಡೊಯ್ಯುವುದು ಸಾಧ್ಯವಿಲ್ಲ ಎಂಬ ತೀರ್ಮಾನಕ್ಕೆ ಬರಲಾಗಿದೆ. 'ಕಡುಗಲಿ ಪಾರ್ತಿಸುಬ್ಬ' ಐತಿಹಾಸಿಕ ಕಾದಂಬರಿಯ ವಿವರಗಳೂ ಇದನ್ನು ಪುಷ್ಟೀಕರಿಸಿರುವುದನ್ನು ಇಲ್ಲಿ ವಿವರಿಸಲಾಗಿದೆ. ಪಾರ್ತಿಸುಬ್ಬನ

ಕಾಲದ ಕುರಿತ ಚರ್ಚೆಯನ್ನು ವಿಸ್ತಾರವಾಗಿ ನಡೆಸಿ, ಇತರೆ ಪೂರಕ ದಾಖಲೆಗಳನ್ನು ಸಂಗ್ರಹಿಸಿ ಈ ತೀರ್ಮಾನಕ್ಕೆ ಬರಲಾಗಿದೆ.

- ಪಾರ್ತಿಸುಬ್ಬನ ಬಗೆಗೆ 'ಯಕ್ಷಪ್ರಭಾ' ಪತ್ರಿಕೆಯಲ್ಲಿ ಪ್ರಕಟಗೊಂಡ ತಾಳ್ತಜೆ ಕೃಷ್ಣ ಭಟ್ಟರ ಅಪೂರ್ಣ ಐತಿಹಾಸಿಕ ಕಾದಂಬರಿಯನ್ನು ಸಂಗ್ರಹಿಸಿ, ಮೊದಲ ಬಾರಿಗೆ ಆಕರವಾಗಿ ವಿಶ್ಲೇಷಿಸುವುದು ಈ ಪ್ರಬಂಧದಲ್ಲಿ ಸಾಧ್ಯವಾಗಿದೆ. ಈ ಕಾದಂಬರಿಯು ಆತನ ವೈಯಕ್ತಿಕ ಬದುಕಿಗೆ ಸಂಬಂಧಿಸಿದಂತೆ ಮಹತ್ತ್ವದ ಮಾಹಿತಿಗಳನ್ನು ಒದಗಿಸಿದೆ. ಆತ ಸ್ಥಾನಿಕ ಬ್ರಾಹ್ಮಣನೆಂಬುದನ್ನೂ, ತಂದೆಯ ಜೊತೆಗೆ ಆತನೂ ಕೇರಳದಲ್ಲಿ ಬಹುಕಾಲ ಇದ್ದನೆಂಬುದನ್ನೂ ಈ ಕಾದಂಬರಿ ಪುಷ್ಟೀಕರಿಸಿದೆ.
- ಪಾರ್ತಿಸುಬ್ಬನ ತಂದೆ ವೆಂಕಪ್ಪ ಭಟ್ಟರು (ಐತಿಹಾಸಿಕ ಕಾದಂಬರಿಯಲ್ಲಿ ಉಲ್ಲೇಖಿತವಾದಂತೆ) ಕೇರಳದ ಚೆರುಕುನ್ನುವಿನ ಭಗವತೀ ಕ್ಷೇತ್ರದಲ್ಲಿ ಅರ್ಚಕರಾಗಿದ್ದರು. ಈತನ ತಾಯಿ ಪಾರ್ವತಿ. ಆತನೇ ಪ್ರಸಂಗದಲ್ಲಿ ತಾನು 'ಪಾರ್ವತೀ ನಂದನ' ಎಂದು ಹೇಳಿಕೊಂಡಿದ್ದಾನೆ.
- ಪಾರ್ತಿಸುಬ್ಬ ಕಣಿಪುರದ ಗೋಪಾಲಕೃಷ್ಣನ ಭಕ್ತನೂ, ದೇವತಾ ಕಾರ್ಯದ ಚಾಕರಿಯವನೂ ಆಗಿದ್ದ. ಕೆಲವು ಕಾಲ ಈತ ತಂದೆಯ ಜೊತೆಗೆ ಚೆರುಕುನ್ನಿನಲ್ಲಿ ಇದ್ದನೆಂದೂ, ಅಲ್ಲಿ
ಈತ ಕೇರಳ ಕಲಾಪ್ರಕಾರಗಳ ಪರಿಚಯ ಮಾಡಿಕೊಂಡನೆಂದು ತಿಳಿದುಬರುತ್ತದೆ,
- ಪಾರ್ತಿಸುಬ್ಬ ತನ್ನ ಬದುಕಿನ ಕೊನೆಯ ಕಾಲವನ್ನು ಶೃಂಗೇರಿಯಲ್ಲಿ ಕಳೆದಿರುವನು. ಅದಕ್ಕೆ ಆತನ ಲವಕುಶರ ಕಾಳಗದಲ್ಲಿ 'ಶಂಕರಾಚಾರ್ಯರಿಗೆ ಶರಣೆಂದ ಬಳಿಕ' ಎಂಬ ಪದ್ಯ ಸಾಕ್ಷಿಯಾಗಿದೆ. ಕುಂಬಳೆಯ ಅರಸರು ಆತನಿಗೆ 'ಯಕ್ಷಗಾನ ವಾಲ್ಮೀಕಿ' ಎಂಬ ಬಿರುದನ್ನು ನೀಡಿದ್ದರು.
- ತೆಂಕುತಿಟ್ಟು ಯಕ್ಷಗಾನವನ್ನು ರೂಪಿಸುವಲ್ಲಿ ಪಾರ್ತಿಸುಬ್ಬನಿಗೆ ಕೇರಳದ ಕಲಾಪ್ರಕಾರಗಳು ಪ್ರೇರಣೆಯನ್ನು ಒದಗಿಸಿವೆ ಎಂಬುದನ್ನು ಸಾಧಾರವಾಗಿ ವಿವೇಚಿಸಲಾಗಿದೆ. ರಾಮನಾಟ್ಟಂನ ಪ್ರಭಾವ ಪಾರ್ತಿಸುಬ್ಬನ ರಾಮಾಯಣ ಯಕ್ಷಗಾನ ಪ್ರಸಂಗಗಳ ಮೇಲೆ ಆಗಿರುವುದನ್ನು ಈ ಅಧ್ಯಯನ ಖಚಿತಪಡಿಸಿದೆ. ಕುಕ್ಕಿಲರು ರಾಮನಾಟ್ಟಂ – ಕಥಕಳಿಯ ಪ್ರಭಾವ ಎಂದಿದ್ದಾರೆ, ಆದರೆ ಅದು ಕಥಕಳಿ ಪೂರ್ವರೂಪ ರಾಮನಾಟ್ಟಂನ ಪ್ರಭಾವ ಎಂಬುದನ್ನು ಈ ಅಧ್ಯಯನ ಗುರುತಿಸಿದೆ.
- ಕಥಕಳಿಯ ಪೂರ್ವರೂಪವಾದ ರಾಮನಾಟ್ಟಂನ ಸಂಕ್ಷಿಪ್ತ ವಾಚಿಕವನ್ನು ವಿಸ್ತರಿಸಿ, ರಾಮನಾಟ್ಟಂನ ಪ್ರಸಂಗ ಪಠ್ಯವನ್ನೇ ಆದರ್ಶವಾಗಿಟ್ಟುಕೊಂಡು ತೆಂಕುತಿಟ್ಟು ಯಕ್ಷಗಾನಕ್ಕೆ ಶಾಸ್ತ್ರೀಯ ರಂಗಕಲೆಯ ರೂಪವನ್ನು ಕೊಡಲು ಪಾರ್ತಿಸುಬ್ಬ ಪ್ರಯತ್ನಿಸಿದ. ಅದೇ ಕಾಲಕ್ಕೆ ರಾಮನಾಟ್ಟಂನ ಪರಿಷ್ಕೃತ ರೂಪವಾದ ಕಥಕಳಿ ಪ್ರದರ್ಶನಗಳು ಆರಂಭಗೊಂಡಿದ್ದವು. ಪಾರ್ತಿಸುಬ್ಬ ಆ ಪ್ರದರ್ಶನಗಳನ್ನೂ ಗಮನಿಸಿ ಅಲ್ಲಿನ

ವೇಷಭೂಷಣ, ಬಣ್ಣಗಾರಿಕೆ ಇತ್ಯಾದಿಗಳನ್ನು ಯಕ್ಷಗಾನಕ್ಕೆ ತಂದಿದ್ದಾನೆ. ಈಗಾಗಲೇ ಕುಂಬಳೆ ಪರಿಸರದಲ್ಲಿದ್ದ ಯಕ್ಷಗಾನದ ಮೂಲಸ್ವರೂಪಕ್ಕೆ ಕೇರಳದಿಂದ ಪಡೆದ ಕಲಾಪರಂಪರೆಯ ಜ್ಞಾನವನ್ನು ಎರಕ ಹೊಯ್ದು ತೆಂಕುತಿಟ್ಟು ಯಕ್ಷಗಾನವನ್ನು ಈತ ರೂಪಿಸಿದ ಎನ್ನಬಹುದು.

- ಪಾರ್ತಿಸುಬ್ಬನಿಗಿಂತ ಹಿಂದೆಯೇ ಯಕ್ಷಗಾನದ ಮೂಲಸ್ವರೂಪವೊಂದು ಇತ್ತಾದರೂ, ಅದಕ್ಕೆ ಒಂದು ನಿಶ್ಚಿತ ರಂಗಚೌಕಟ್ಟು ಇದ್ದಿರಲಿಲ್ಲ. ಕೇರಳದ ರಾಮನಾಟ್ಟಂ – ಕಥಕಳಿಯಿಂದ ಪ್ರೇರಿತನಾಗಿ ಪ್ರಸಂಗ ರಚನೆ, ತೆಂಕುತಿಟ್ಟು ವೇಷಭೂಷಣಗಳ ರಚನೆ, ಕುಣಿತ, ಅಭಿನಯಗಳನ್ನು ಅಳವಡಿಸಿ ಪಾರ್ತಿಸುಬ್ಬ ತೆಂಕುತಿಟ್ಟು ಯಕ್ಷಗಾನದ ಪ್ರವರ್ತಕನೂ, ಯಕ್ಷಗಾನ ಕಲೆಯ ಸುಧಾರಕನೂ ಆಗಿದ್ದಾನೆ.
- ಪಾರ್ತಿಸುಬ್ಬನ ಪ್ರಸಂಗಗಳು ಪ್ರದರ್ಶನವನ್ನು ದೃಷ್ಟಿಯಲ್ಲಿಟ್ಟುಕೊಂಡೇ ರಚಿತಗೊಂಡಿವೆ ಎನ್ನುವುದನ್ನು ಪ್ರಸಂಗಗಳ ವಸ್ತು ಪರಿಶೀಲನೆಯಿಂದ ಗುರುತಿಸಲಾಗಿದೆ. ರಾಮಾಯಣದ ಪ್ರಸಂಗಗಳ ವಿಭಜನ ಕ್ರಮದಲ್ಲಿಯೇ ಆತ ಪ್ರದರ್ಶನವನ್ನು ದೃಷ್ಟಿಯಲ್ಲಿಟ್ಟುಕೊಂಡಿದ್ದ ಎಂಬುದು ತಿಳಿದುಬರುತ್ತದೆ. ಒಂದು ಬಯಲಾಟದ ಪ್ರದರ್ಶನಕ್ಕೆ ಬೇಕಾಗುವ ಎಲ್ಲಾ ಮಾದರಿಯ ಪಾತ್ರಗಳು, ರಸ ಘಟ್ಟಗಳು, ವೈವಿಧ್ಯಮಯ ಸನ್ನಿವೇಶಗಳು ಬರುವಂತೆ ಗಮನಕೊಟ್ಟಿದ್ದಾನೆ. ಪ್ರದರ್ಶನದಲ್ಲಿ ಉನ್ನತಿಯನ್ನು ಸಾಧಿಸಬಹುದಾದ ಸನ್ನಿವೇಶಗಳಿಗೆ ಕಥನದಲ್ಲಿ ಆದ್ಯತೆ ನೀಡಿದ್ದಾನೆ. ಪಾರ್ತಿಸುಬ್ಬನಿಗೆ ರಾಮಾಯಣ ಕತೆಯನ್ನು ಹೇಳುವ ಉದ್ದೇಶಕ್ಕಿಂತ ಹೆಚ್ಚಾಗಿ ಪ್ರದರ್ಶನಕ್ಕೆ ಬೇಕಾದ ಪಠ್ಯವನ್ನು ರಚಿಸುವ ಉದ್ದೇಶವೇ ಮುಖ್ಯವಾಗಿದೆ. ಯಕ್ಷಗಾನ ಪ್ರದರ್ಶನವನ್ನು ಲಕ್ಷ್ಯದಲ್ಲಿಟ್ಟುಕೊಂಡೇ ಆತನ ಪ್ರಸಂಗಗಳು ಮತ್ತು ಸಭಾಲಕ್ಷಣ ರಚನೆಗೊಂಡಿದೆ ಎಂಬುದನ್ನು ಕಂಡುಕೊಳ್ಳಲಾಗಿದೆ.
- ಕೇರಳದ ಕಲಾ ಪ್ರಬಂಧಗಳಲ್ಲದೇ ಪಾರ್ತಿಸುಬ್ಬನಿಗೆ ಕನ್ನಡ ಕಾವ್ಯ ಪರಂಪರೆಯ ಪರಿಚಯ ಚೆನ್ನಾಗಿ ಇತ್ತೆಂದೂ, ತೊರವೆ ರಾಮಾಯಣ, ಕನ್ನಡ ಜೈಮಿನಿ ಭಾರತ, ಕುಮಾರವ್ಯಾಸ ಭಾರತ, ದಾಸ ಸಾಹಿತ್ಯದ ಪ್ರಭಾವ ಈತನ ಮೇಲಾಗಿರುವುದನ್ನು ಈ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.
- ಈತನ ಪ್ರಸಂಗಗಳ ಸಾಹಿತ್ಯಾಧ್ಯಯನದ ಸಂದರ್ಭದಲ್ಲಿ ಈತನ ಬಿಡಿ ಬಿಡಿ ಪ್ರಸಂಗಗಳನ್ನು ಅಧ್ಯಾಯಗಳಂತೆ ಪರಿಗಣಿಸಿ ಸಂಪೂರ್ಣ ರಾಮಾಯಣ ಕಾವ್ಯ ಬರೆಯುವ ಅವನ ಆಶಯವನ್ನು ಗುರುತಿಸಲಾಗಿದೆ. ವೀರ, ಶೃಂಗಾರ, ಹಾಸ್ಯ ಮೊದಲಾಗಿ ವಿವಿಧ ರಸಸ್ಥಾನಗಳನ್ನು ಪಾರ್ತಿಸುಬ್ಬ ನಿರ್ವಹಿಸಿದ ಸೊಬಗನ್ನು ಈ ಅಧ್ಯಯನ ಗುರುತಿಸಿದೆ.
- ಪಾರ್ತಿಸುಬ್ಬನ ಯಕ್ಷಗಾನ ಪ್ರಸಂಗಗಳನ್ನು ಸಾಹಿತ್ಯ ಪಠ್ಯವಾಗಿ ಪರಿಶೀಲಿಸಿ, ವರ್ಣನೆಗಳು, ಅಲಂಕಾರಗಳು, ಪ್ರಾಸ, ಪ್ರಸಂಗಗಳ ಚಿತ್ರಕಶಕ್ತಿ, ಸಂಗ್ರಹಗುಣ, ಛಂದೋವೈವಿಧ್ಯ, ರಾಗ–ತಾಳಗಳ

ವೈವಿಧ್ಯ ಮತ್ತು ಭಾಷಾಸೊಬಗನ್ನು ಗುರುತಿಸಿ ಆತನಿಗಿದ್ದ ವಿಪುಲ ವ್ಯುತ್ಪತ್ತಿಯನ್ನು ಕಂಡುಕೊಳ್ಳಲಾಗಿದೆ. ಮಲಯಾಳಂ, ತುಳು, ಹವ್ಯಕ ಕನ್ನಡ, ಕೊಂಕಣಿ ಭಾಷಾ ಬಳಕೆಯನ್ನು ಈತ ತನ್ನ ಪ್ರಸಂಗಗಳಲ್ಲಿ ಬಳಸಿರುವುದು ಈತನ ಬಹುಭಾಷಿಕ ಆಸಕ್ತಿಯನ್ನು ತೋರುತ್ತದೆ.

- ಪಾರ್ತಿಸುಬ್ಬನ ಪ್ರಸಂಗಗಳ ಆಕರ ಪರಿಶೀಲನೆ ಮತ್ತು ಸಾಹಿತ್ಯ ಪರಿಶೀಲನೆಯಿಂದ ದೊರಕಿದ ತಿಳುವಳಿಕೆಯನ್ನು ಹೀಗೆ ಸಂಕ್ಷೇಪಿಸಬಹುದು. ಪಾರ್ತಿಸುಬ್ಬನು ಪ್ರಸಂಗಗಳನ್ನು ರಚಿಸುವಾಗ ಹಲವು ಆಕರಗಳನ್ನು ಬಳಸಿಕೊಂಡಿದ್ದಾನೆ. ಹೀಗೆ ಬಳಸಿಕೊಳ್ಳುವುದರಲ್ಲಿ ಎರಡು ಬಗೆಗಳಿವೆ. ಮೊದಲನೆಯದು ಕಥನಕ್ರಮಕ್ಕೆ ಸಂಬಂಧಿಸಿದೆ. ಎರಡನೆಯದು ನಿರೂಪಣೆ ಮತ್ತು ವರ್ಣನೆಗಳಿಗೆ ಸಂಬಂಧಿಸಿದೆ. ಪಾರ್ತಿಸುಬ್ಬನು ರಚಿಸಿರುವ ಕೆಲವು ಪದ್ಯಗಳು ಅವನು ಬಳಸಿರುವ ಕೆಲವು ಆಕರಗಳಲ್ಲಿ ಇರುವ ಪದ್ಯಗಳನ್ನು ಹೋಲುತ್ತವೆ. ಹೀಗಿದ್ದರೂ ಪಾರ್ತಿಸುಬ್ಬನು ಪ್ರಸಂಗಗಳಲ್ಲಿ ತನ್ನ ಛಾಪನ್ನು ಮೂಡಿಸಿದ್ದಾನೆ. ಸ್ವಂತಿಕೆಯನ್ನು ಮೆರೆದಿದ್ದಾನೆ ಎನ್ನಬಹುದು. ಮೂಲ ಆಕರಗಳ ಪದ್ಯಗಳಿಗಿಂತ ಪಾರ್ತಿಸುಬ್ಬನ ಪದ್ಯಗಳು ಯಕ್ಷಗಾನದ ಹಾಡುಗಾರಿಕೆಯ ಶೈಲಿಗೆ ಹೊಂದಿಕೆಯಾಗುವಂತೆ ಸರಳವಾಗಿವೆ. ಪ್ರಸಂಗದ ಪದ್ಯಗಳನ್ನು ಬರೆಯುವಾಗ ಪಾರ್ತಿಸುಬ್ಬನ ಮನಸಿನಲ್ಲಿ 'ಪ್ರದರ್ಶನ ಪಠ್ಯ'ದ ಪರಿಕಲ್ಪನೆ ಕೆಲಸ ಮಾಡುತ್ತಿತ್ತು ಎಂಬುದನ್ನು ಕಂಡುಕೊಳ್ಳಲಾಗಿದೆ.
- ಪ್ರಸಂಗಕರ್ತರು ಪ್ರಸಂಗ ಪದ್ಯಗಳನ್ನು ಬರೆಯುವಾಗ ಪಾರ್ತಿಸುಬ್ಬನು ಮಾಡಿದಂತೆ ಕೆಲವು ಪದ್ಯಗಳನ್ನು ಮೂಲ ಆಕರಗಳಲ್ಲಿರುವ ಪದ್ಯಗಳ ಅನುಸರಣೆ/ ಅನುಕರಣೆ ಎಂಬಂತೆ ರಚಿಸಿರುವುದರಿಂದ ಯಕ್ಷಗಾನ ಕವಿಗಳು ಎರಡನೆಯ ದರ್ಜೆಯ ಕವಿಗಳು, ಬೇರೆ ಬೇರೆ ಆಕರಗಳಿಂದ ಪದ್ಯಗಳನ್ನು ಆಯ್ದು ತಮ್ಮ ಪ್ರಸಂಗಗಳಲ್ಲಿ ಸಂಯೋಜಿಸಿ ಕೊಂಡಿದ್ದಾರೆ, ಪ್ರಸಂಗ ಪದ್ಯಗಳಲ್ಲಿ ಸ್ವಂತದ್ದು ಕಡಿಮೆ ಎಂಬ ಗ್ರಹಿಕೆ ಪ್ರಚಲಿತಕ್ಕೆ ಬರಲು ಕಾರಣವಾಗಿರಬೇಕು. ಆದರೆ ಯಕ್ಷಗಾನ ಕವಿಗಳು ಪ್ರತಿಭಾಸಂಪನ್ನರು, ಸ್ವಂತಿಕೆಯುಳ್ಳವರು. ಕನ್ನಡ ಕಾವ್ಯಗಳನ್ನು ಬರೆದಿರುವ ಇತರೆ ಕವಿಗಳಂತೆ ಸೋಪಜ್ಞತೆಯುಳ್ಳವರು ಎಂಬ ನಿಲುವನ್ನು ಪಾರ್ತಿಸುಬ್ಬನ ಪ್ರಸಂಗಗಳ ಸಾಹಿತ್ಯಕ ಅವಲೋಕನದ ಹಿನ್ನೆಲೆಯಿಂದ ತಿಳಿದುಕೊಳ್ಳಲಾಗಿದೆ.
- ಪಾರ್ತಿಸುಬ್ಬನ ಪ್ರಸಂಗಗಳ ಶೈಲಿ ವಿವೇಚನೆಯನ್ನು ಪ್ರಾಚೀನ ಕಾವ್ಯಗಳ ಸಾಂಪ್ರದಾಯಿಕ ವಿವೇಚನೆಯ ಮಾದರಿಯಲ್ಲಿಯೇ ಇಲ್ಲಿ ನಡೆಸಲಾಗಿದೆ. ಶೈಲಿಯು ಮುಖ್ಯವಾಗಿ ಭಾಷಿಕ ಅಭಿವ್ಯಕ್ತಿಗೆ ಸಂಬಂಧಪಟ್ಟಿದೆ. ವರ್ಣನೆಗಳು, ರಸಪ್ರಭೇದಗಳು, ಅಲಂಕಾರದ ಬಗೆಗಳು, ಛಂದಸ್ಸು ಒಳಗೊಳ್ಳುವ ಪ್ರಾಸ, ಪದ್ಯಗಳ ಚೌಕಟ್ಟಿನ ಲಯವಿನ್ಯಾಸ ಇವೆಲ್ಲ ಒಟ್ಟಾಗಿ ಶೈಲಿಯ ವ್ಯಾಪ್ತಿಯೊಳಗೆ ಬರುತ್ತದೆ. ಪ್ರಸಂಗದಲ್ಲಿ ಬರುವ ಬೇರೆ ಬೇರೆ ಸನ್ನಿವೇಶಗಳಿಗೆ ಅನುಗುಣವಾದ ಭಾಷಾ ಸ್ವರೂಪ ಮತ್ತು ಅದನ್ನು ಮೂರ್ತರೂಪಕ್ಕೆ

ತರುವ ಶೈಲಿಯು ಈತನಿಗೆ ಸಿದ್ಧಿಸಿದೆ ಎಂಬುದು ಸ್ಪಷ್ಟ. ಪಾರ್ತಿಸುಬ್ಬನ ಪ್ರಸಂಗದ ವಸ್ತು ಮತ್ತು ಶೈಲಿ ಇವುಗಳನ್ನು ಆಧರಿಸಿ ಅವನ ಕೃತಿಗಳ ಆಕೃತಿಯನ್ನು ಪರಿಕಲ್ಪಿಸಿಕೊಳ್ಳಬಹುದು. ವಾಸ್ತವಿಕವಾಗಿ ಈತನ ಪ್ರಸಂಗಗಳ ಆಕೃತಿಯ ಅಸ್ತಿತ್ವ ಮತ್ತು ಅನನ್ಯತೆಯನ್ನು ಅವುಗಳ ಪ್ರದರ್ಶನದ ಸಂದರ್ಭದಲ್ಲಿಯೇ (performance context) ಪರಿಶೀಲಿಸುವ ಅಗತ್ಯವಿದೆ. ಪ್ರಸಂಗಗಳ ಅರ್ಥ ಮತ್ತು ಆಶಯಗಳು ಪ್ರದರ್ಶನದಲ್ಲಿ ಸಾರ್ಥಕತೆಯನ್ನು ಪಡೆಯುತ್ತವೆ. ಪಾರ್ತಿಸುಬ್ಬನ ಪ್ರಸಂಗಗಳನ್ನು ರಂಗಪಠ್ಯದ ಪರಿಕಲ್ಪನೆಯ ಹಿನ್ನೆಲೆಯಿಂದಲೇ ಪರಿಶೀಲಿಸಬೇಕಾಗುತ್ತದೆ ಎಂಬ ತೀರ್ಮಾನಕ್ಕೆ ಬರಲಾಗಿದೆ.

- ಪ್ರದರ್ಶನಕ್ಕೆ ಪದ್ಯಗಳನ್ನು ಆಯ್ಕೆ ಮಾಡುವಾಗ ಬಯಲಾಟಕ್ಕೆ ಮತ್ತು ತಾಳಮದ್ದಳೆಗೆ ವ್ಯತ್ಯಾಸ ಇದೆ. ಬಯಲಾಟ ಮುಖ್ಯವಾಗಿ ದೃಶ್ಯ ಪ್ರಧಾನ, ಅಭಿನಯ ಪ್ರಧಾನ. ತಾಳಮದ್ದಳೆ ವಿಚಾರ ಪ್ರಧಾನ. ಬಯಲಾಟಕ್ಕೆ ಪದ್ಯ ಜಾಸ್ತಿ ಬೇಕು. ಅಲ್ಲಿ ಅರ್ಥ ವಿಸ್ತಾರ ಇಲ್ಲ. ಕುಣಿತ, ಅಭಿನಯಕ್ಕೂ ಅವಕಾಶವಿದೆ. ಸಾಮಾನ್ಯವಾಗಿ ಭಾಗವತರು ಅಭಿನಯಕ್ಕೆ ಪ್ರಾಶಸ್ತ್ಯವಿರುವ ಪದ್ಯಗಳನ್ನು ಬಯಲಾಟದಲ್ಲಿ ಹೆಚ್ಚು ಆಯ್ಕೆ ಮಾಡುತ್ತಾರೆ. ಪಾರ್ತಿಸುಬ್ಬನ ಪ್ರಸಂಗಗಳು ಪ್ರದರ್ಶನದ ಈ ಎರಡೂ ಬಗೆಗಳಿಗೂ ಹೊಂದುವಂತಿದೆ.
- ಪ್ರಸಂಗ ಪಠ್ಯಗಳು ಓದು ಪಠ್ಯಗಳಲ್ಲ. ಅದು ಪರಿಪೂರ್ಣಗೊಳ್ಳುವುದು ಪ್ರದರ್ಶನದಲ್ಲಿಯೇ. ಪ್ರದರ್ಶನದಲ್ಲಿ ಪ್ರಸಂಗ ಪಠ್ಯ ಹಲವು ಓದುಗಳಿಗೆ ಒಳಗಾಗುತ್ತದೆ. ಭಾಗವತರ ಓದು, ಅರ್ಥಧಾರಿಯ ಓದು, ಹಾಡು, ಅರ್ಥ, ಅಭಿನಯ, ಕುಣಿತಗಳ ಮೂಲಕ ಪ್ರೇಕ್ಷಕನ ಓದು ಹೀಗೆ ಹಲವು ನೆಲೆಗಳ ಓದು ಬಹು ಅರ್ಥದ ಮಜಲುಗಳನ್ನು ತೆರೆಯುತ್ತವೆ. ಈ ಕಲ್ಪನೆ ಪಾರ್ತಿಸುಬ್ಬನಿಗಿತ್ತು ಎಂಬುದು ಆತನ ಪ್ರಸಂಗಗಳ ಕಟ್ಟುವಿಕೆಯ ವಿಶ್ಲೇಷಣೆಯಿಂದ ಗೋಚರವಾಗುತ್ತದೆ.
- ಪಾರ್ತಿಸುಬ್ಬನ ಪ್ರಸಂಗಗಳಲ್ಲಿ ಪ್ರದರ್ಶನದ ಸೂಚನೆಗಳಿವೆ ಎಂಬುದು ಸ್ಪಷ್ಟ. ಯಕ್ಷಗಾನ ಪ್ರದರ್ಶನದ ರಂಗ ಚೌಕಟ್ಟಿನ ಕಲ್ಪನೆ, ಪಾತ್ರಗಳ ಸ್ವಭಾವ ಮತ್ತು ಅದಕ್ಕನುಗುಣವಾದ ವೇಷಭೂಷಣಗಳು, ಕುಣಿತ ಮತ್ತು ಅಭಿನಯ, ಮಾತಿನಲ್ಲಿ ಪದ್ಯದ ಅರ್ಥವನ್ನು ವಿಸ್ತರಿಸುವ ಬಗೆ, ಪ್ರಸಂಗದ ಕತೆಯನ್ನು ಪ್ರೇಕ್ಷಕರಿಗೆ ದಾಟಿಸುವ ಸಾಧ್ಯತೆ ಇತ್ಯಾದಿ ಪ್ರದರ್ಶನಕೇಂದ್ರಿತ ಸಂಗತಿಗಳ ಬಗೆಗೆ ಪಾರ್ತಿಸುಬ್ಬನಿಗೆ ತಿಳುವಳಿಕೆಯಿತ್ತು ಎಂಬುದಕ್ಕೆ ಆತನ ಪ್ರಸಂಗಗಳಲ್ಲಿ ಆಂತರಿಕ ಸಾಕ್ಷ್ಯಗಳು ಸಿಗುತ್ತವೆ.
- ಪಾರ್ತಿಸುಬ್ಬ ಬಯಲಾಟ ಮತ್ತು ತಾಳಮದ್ದಳೆ ಎರಡರ ಕುರಿತೂ ಗಂಭೀರವಾಗಿ ಯೋಚಿಸಿದ್ದ ಎಂಬುದಕ್ಕೆ ಆತನ ಪ್ರಸಂಗಗಳು ಈ ಎರಡೂ ನೆಲೆಗಳಲ್ಲಿ ಯಶಸ್ಸು ಕಂಡಿರುವುದೇ ಸಾಕ್ಷಿಯಾಗಿದೆ. ಆತನ ಕಾಲದಲ್ಲಿ ಯಕ್ಷಗಾನವು ಪ್ರಾಗ್ದ್ರಾವಿಡ ಜಾನಪದ ಕಲೆಯ ರೂಪದಲ್ಲಿದ್ದು, ಪಾರ್ತಿಸುಬ್ಬ

ಅದಕ್ಕೊಂದು ಖಚಿತ ಕಲಾರೂಪದ ಚೌಕಟ್ಟನ್ನು ನೀಡಿ ತೆಂಕುತಿಟ್ಟು ಯಕ್ಷಗಾನದ ಪ್ರವರ್ತಕನೂ, ಸುಧಾರಕನೂ ಆಗಿದ್ದಾನೆ. ಈ ಹಂತದಲ್ಲಿ ಅದರ ಬೆಳವಣಿಗೆಗೆ ಅತ್ಯಂತ ಅಗತ್ಯವಾಗಿದ್ದ ಸಾಹಿತ್ಯಕ ಬುನಾದಿಯನ್ನು ಪ್ರಸಂಗಗಳ ರಚನೆಯ ಮೂಲಕ ಒದಗಿಸಿದ ಎನ್ನಬಹುದು.

- ಪಾರ್ತಿಸುಬ್ಬನ ಪ್ರಸಂಗಗಳ ಸಾಹಿತ್ಯ ಮತ್ತು ಪ್ರಯೋಗ ಪರಿಶೀಲನೆಗೆ ಪೂರಕವಾಗಿ ಪ್ರಸಂಗದ ರಾಚನಿಕ ಸ್ವರೂಪದ ಅಧ್ಯಯನವನ್ನೂ ನಡೆಸಲಾಗಿದೆ. ಪಾರ್ತಿಸುಬ್ಬನ ಯಕ್ಷಗಾನ ಪ್ರಸಂಗಗಳು ಪೌರಾಣಿಕ ಕಥಾನಕವನ್ನೇ ಹೊಂದಿದ್ದರೂ ಕಥೆಯ ನಡಿಗೆಯ ಸ್ವರೂಪಕ್ಕೆ ಒಂದು ನಿಶ್ಚಿತ ಲಯವಿದೆ. ಕಥಾರಂಭದ ಬಳಿಕ ಸಮಸ್ಯೆಯೊಂದರ ಉದ್ಭವ, ಆ ಸಮಸ್ಯೆಯನ್ನು ಬಿಡಿಸಿಕೊಳ್ಳುವ ಹಂತದಲ್ಲಿ ಅದು ಪಡೆಯುವ ಸಂಕೀರ್ಣತೆ, ಕೊನೆಯಲ್ಲಿ ಸಮಸ್ಯೆಗೆ ಪರಿಹಾರ, ಮಂಗಳಕರ ವಾತಾವರಣ ಈ ಬಗೆಯ ಚಲನೆಯನ್ನು ಪಾರ್ತಿಸುಬ್ಬನ ಎಲ್ಲಾ ಪ್ರಸಂಗಗಳಲ್ಲೂ ಗುರುತಿಸಬಹುದಾಗಿದೆ. ಇಂದು ಇದು ಯಕ್ಷಗಾನ ಪ್ರಸಂಗಗಳ ಸಾಮಾನ್ಯವಾದ ನಡೆ ಕೂಡ. ಈ ನಡೆಯನ್ನು ಪಾರ್ತಿಸುಬ್ಬ ಹೇಗೆ ನಿರ್ವಹಿಸಿದ್ದಾನೆ ಹಾಗೂ ಉದ್ದೇಶಿತ ಕಾರ್ಯಕ್ಕೆ ಪ್ರಸಂಗ ಪದ್ಯಗಳು ಒದಗಿ ಬರುವಂತೆ ಮಾಡುವಲ್ಲಿ ಎಷ್ಟು ಯಶಸ್ವಿಯಾಗಿದ್ದಾನೆ ಎಂಬುದನ್ನು ಈ ಅಧ್ಯಯನದ ಮೂಲಕ ಕಂಡುಕೊಳ್ಳಲಾಗಿದೆ.
- ಜಾನಪದ ಕಲೆಯಾಗಿದ್ದ ಯಕ್ಷಗಾನಕ್ಕೆ ಶಾಸ್ತ್ರೀಯವಾದ ರಂಗಕಲೆಯ ಚೌಕಟ್ಟನ್ನು ಒದಗಿಸಿ ತೆಂಕುತಿಟ್ಟು ಯಕ್ಷಗಾನಕ್ಕೆ ನಾಂದಿ ಹಾಡಿದ ಕವಿ ಪಾರ್ತಿಸುಬ್ಬ. ಆತನ 'ಸಭಾಲಕ್ಷಣ' ಯಕ್ಷಗಾನಕ್ಕೆ ಶಾಸ್ತ್ರೀಯ ಚೌಕಟ್ಟನ್ನು ಒದಗಿಸುವ ಉದ್ದೇಶದಿಂದಲೇ ರಚಿತಗೊಂಡಿದೆ ಎಂಬುದನ್ನು ಈ ಅಧ್ಯಯನ ಗುರುತಿಸಿದೆ.
- ಕಲೆಯೊಂದು ತನ್ನೊಡಲೊಳಗೆ ಶಿಕ್ಷಣವನ್ನೂ ಪ್ರದರ್ಶನದ ಭಾಗವಾಗಿಯೇ ಒದಗಿಸುವ ವಿಶಿಷ್ಟತೆ ಯಕ್ಷಗಾನದಲ್ಲಿದೆ. ಪೂರ್ವರಂಗದ ನಿಯತವಾದ ಪಾತ್ರಗಳ ನಿರ್ವಹಣೆಯ ಮೂಲಕ ಭಾಗವತಿಕೆಯಿಂದ ತೊಡಗಿ ಅರ್ಥಗಾರಿಕೆಯವರೆಗೆ, ರಂಗ ಕಲ್ಪನೆ, ಬಣ್ಣಗಾರಿಕೆ, ವೇಷಕಟ್ಟುವ ಕಲೆ, ಕುಣಿತ ಹೀಗೆ ಎಲ್ಲಾ ನೆಲೆಗಳಲ್ಲೂ ಅಭ್ಯಾಸವನ್ನು ಒದಗಿಸುತ್ತದೆ. ಪಾರ್ತಿಸುಬ್ಬ ಈ ಭಾಗಕ್ಕೆ ಬೇಕಾದ ಪದ್ಯಗಳನ್ನು ಸ್ವತ: ರಚಿಸಿ ಯಕ್ಷ ಶಿಕ್ಷಣಕ್ಕೆ ಅನುಪಮವಾದ ಕೊಡುಗೆಯನ್ನು ನೀಡಿದ್ದಾನೆ.
- ಮುಂದಿನ ಯಕ್ಷಗಾನ ಕವಿಗಳನ್ನು ಪಾರ್ತಿಸುಬ್ಬ ಪ್ರಭಾವಿಸಿದ್ದಾನೆ. ತೌಲನಿಕ ಅಧ್ಯಯನದ ಮೂಲಕ ಮುದ್ದಣ, ಕೀರಿಕ್ಕಾಡು ವಿಷ್ಣು ಮಾಸ್ತರ, ಬಡಕಬೈಲು ಸಂಕಯ್ಯ ಭಾಗವತರು, ಸೀತಾನದಿ ಗಣಪಯ್ಯ, ಮಂದಾರ ಕೇಶವ ಭಟ್ಟ, ಜತ್ತಿ ಈಶ್ವರ ಭಟ್ಟ ಇವರೊಂದಿಗಿನ ತೌಲನಿಕ ನೋಟದ ಮೂಲಕ ಇದನ್ನು ಗ್ರಹಿಸಲಾಗಿದೆ.

- ತೆಂಕುತಿಟ್ಟು ಯಕ್ಷಗಾನ ಸ್ವರೂಪವನ್ನು ಕಟ್ಟಿಕೊಡುವಲ್ಲಿ ಪಾರ್ತಿಸುಬ್ಬನ ಯಕ್ಷಗಾನ ಪ್ರಸಂಗಗಳ ಕೊಡುಗೆ, ಆತನ ಭಾಷಾ ಬಳಕೆ, ಪ್ರಸಂಗ ನಿರ್ಮಾಣದ ಕಲೆ, ಪ್ರಾದೇಶಿಕ ಸಂಸ್ಕೃತಿಯ ಒಳಗೊಳ್ಳುವಿಕೆ ಹಾಗೂ ಮುಂದಿನ ತಲೆಮಾರಿನ ಪ್ರಸಂಗಕರ್ತರ ಮೇಲೆ ಆತನ ಪ್ರಭಾವ ಇತ್ಯಾದಿಗಳ ಕುರಿತು ಅಧ್ಯಯನದ ಮೂಲಕ ಯಕ್ಷಗಾನಕ್ಕೆ ಪಾರ್ತಿಸುಬ್ಬನ ಕೊಡುಗೆಯನ್ನು ಈ ಮಹಾಪ್ರಬಂಧವು ಗುರುತಿಸಿದೆ.

ಯಕ್ಷಗಾನ ಪ್ರಸಂಗ ಕವಿ ಪರಂಪರೆಯಲ್ಲಿ ಪಾರ್ತಿಸುಬ್ಬನದು ವಿಶಿಷ್ಟವಾದ ಹೆಸರು. ಯಕ್ಷಗಾನದ ಚಾರಿತ್ರಿಕ ನೆಲೆಯಿಂದ ಈ ಅಧ್ಯಯನವು ಹಲವು ವಿವರಗಳನ್ನು ಮುನ್ನೆಲೆಗೆ ತಂದಿದೆ. ಯಕ್ಷಗಾನದ ಆರಂಭ ಘಟ್ಟದ ಸ್ವರೂಪವನ್ನು ಪಾರ್ತಿಸುಬ್ಬನ ಪ್ರಸಂಗ ಸಾಹಿತ್ಯವನ್ನು ಆಕರವಾಗಿಟ್ಟುಕೊಂಡು ಈ ಅಧ್ಯಯನವು ಚರ್ಚಿಸಿರುವುದರಿಂದ ಎರಡು ಶತಮಾನಗಳ ಯಕ್ಷಗಾನದ ಪ್ರಸಂಗ ಪಠ್ಯ ಮತ್ತು ಪ್ರದರ್ಶನದ ಸ್ವರೂಪ ನಿರ್ಣಯಕ್ಕೆ ಇದು ಸಹಕಾರಿಯಾಗಲಿದೆ. ಯಕ್ಷಗಾನದ ಕವಿಗಳ ಸಾಲಿನಲ್ಲಿ ಆರಂಭ ಕಾಲಘಟ್ಟದಲ್ಲಿ ಕಾಣಿಸಿಕೊಂಡು ಯಕ್ಷಗಾನದ ಸಾಹಿತ್ಯ ಮತ್ತು ಪ್ರಯೋಗಕ್ಕೆ ತನ್ನದೇ ಸೃಜನಶೀಲ ಕಲ್ಪನೆಗಳ ಮೂಲಕ ಅಮೂಲ್ಯ ಕೊಡುಗೆಯನ್ನು ನೀಡಿದ ಪಾರ್ತಿಸುಬ್ಬನ ಬಗೆಗೆ ಸಂಶೋಧನ ಮಹಾಪ್ರಬಂಧವೊಂದು ರಚನೆಗೊಂಡಿಲ್ಲ ಎಂಬ ಕೊರತೆಯನ್ನು ಈ ಅಧ್ಯಯನ ತುಂಬಿದೆ.

ಅನುಬಂಧದಲ್ಲಿ ಅಧ್ಯಯನಕ್ಕೆ ಬಳಸಿಕೊಂಡ ಪರಾಮರ್ಶನ ಗ್ರಂಥಗಳು, ಪರಾಮರ್ಶನ ಲೇಖನಗಳು, ವಿವಿಧೆಡೆ ದಾಖಲಿಸಿಕೊಂಡ ವಿಷಯ ಸಂಬಂಧಿ ಉಪನ್ಯಾಸಗಳು, ಮಾಹಿತಿಯನ್ನು ಒದಗಿಸಿದ ತಜ್ಞರು ಮತ್ತು ಕಲಾವಿದರ ವಿವರಗಳನ್ನು ಒದಗಿಸಿದ್ದೇನೆ. ಕ್ಷೇತ್ರಕಾರ್ಯದ ಭಾಗವಾಗಿ ದಾಖಲೀಕರಣ ಮಾಡಿಕೊಂಡ ಮುಖ್ಯವಾದ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆ ಹಾಗೂ ಛಾಯಾಚಿತ್ರಗಳನ್ನು ನೀಡಿದ್ದೇನೆ.

ಪರಾಮರ್ಶನ ಗ್ರಂಥಗಳು

- ಅಮೃತ ಸೋಮೇಶ್ವರ, ೧೯೯೦

  ಯಕ್ಷಗಾನ ಕೃತಿ ಸಂಪುಟ

  ಶ್ರೀ ಸೋಮೇಶ್ವರರ ಯಕ್ಷಗಾನ ಕೃತಿ ಪ್ರಕಾಶನ ಸಮಿತಿ, ಮಂಗಳೂರು.
- ಅಮೃತ ಸೋಮೇಶ್ವರ, ೧೯೯೫

  ಯಕ್ಷಾಂದೋಳ

  ಅಮೃತ ಸೋಮೇಶ್ವರ ಅಭಿನಂದನಾ ಸಮಿತಿ, ಕಲಾಗಂಗೋತ್ರಿ, ಸೋಮೇಶ್ವರ, ಉಚ್ಚಿಲ.
- ಆನಂದರಾಮ ಉಪಾಧ್ಯ, ೧೯೮೦

  ಯಕ್ಷಗಾನ ರಾಮಾಯಣ ಪ್ರಸಂಗಗಳು

  ಕನ್ನಡ ಸಂಘ, ಶೇಷಾದ್ರಿಪುರಂ ಕಾಲೇಜು, ಬೆಂಗಳೂರು,
- ಆನಂದರಾಮ ಉಪಾಧ್ಯ, ೧೯೯೦

  ಯಕ್ಷಗಾನ ಮಹಾಭಾರತ ಪ್ರಸಂಗಗಳು

  ಕೃತಿ ಪ್ರಕಾಶನ, ತ್ಯಾಗರಾಜ ನಗರ, ಬೆಂಗಳೂರು,
- ಉಪ್ಪಂಗಳ ರಾಮಭಟ್ಟ, ೧೯೯೪

  ಗಡಿನಾಡು ಕಾಸರಗೋಡು

  ಅಕಲಂಕ ಪ್ರಕಾಶನ, ಉಡುಪಿ ಮತ್ತು ಭಾರದ್ವಾಜ ಪ್ರಕಾಶನ, ಮಂಗಳೂರು.
- ಉಮಾಪತಿ ಶಾಸ್ತ್ರಿ ಗೌ.ಮ, ೨೦೦೮

  ಯಕ್ಷಗಾನ ಹಸ್ತಪ್ರತಿಗಳ ವಿವರಣಾ ಸೂಚಿ

  ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ, ಧರ್ಮಸ್ಥಳ, ದ.ಕ.
- ಕೃಷ್ಣ ಭಟ್ಟ ಕುಕ್ಕಿಲ, ೧೯೬೧

ಕುಂಬಳೆ ಪಾರ್ತಿಸುಬ್ಬ ಕವಿಯ ಕಾಲ ಮತ್ತು ಕರ್ತೃತ್ವದ ನಿರ್ಣಯ

ಸಾಹಿತ್ಯ ಸಂಘ, ಕೋಟೆಕಾರು, ದ.ಕ.

- ಕೃಷ್ಣ ಭಟ್ಟ ಕುಕ್ಕಿಲ (ಸಂ.), ದ್ವಿತೀಯ ಮುದ್ರಣ: ೨೦೦೯

  ಪಾರ್ತಿಸುಬ್ಬನ ಯಕ್ಷಗಾನಗಳು

  ಡಾ. ಕೀಲಾರು ಗೋಪಾಲಕೃಷ್ಣಯ್ಯ ಪ್ರತಿಷ್ಠಾನ, ಸಂಪಾಜೆ.

- ಕೃಷ್ಣ ಭಟ್ಟ ತಾಳ್ತಜೆ, ೧೯೭೪

  ಯಕ್ಷಗಾನ ಪ್ರಭಾ

  ಅಭ್ಯುದಯ ಪ್ರಕಾಶನ, ಪಂಜಳ, ಉಪ್ಪಿನಂಗಡಿ, ದ.ಕ.

- ಕೃಷ್ಣ ಭಂಡಾರಿ, ಸೋಂದಾ, ೨೦೧೪

  ಯಕ್ಷಗಾನ ಕೈಪಿಡಿ

  ಬಂಡಾಯ ಪ್ರಕಾಶನ, ಕೆರೆಕೋಣ, ಹೊನ್ನಾವರ, ಉ.ಕ.

- ಗಾಯತ್ರೀ ನಾವಡ (ಸಂ.), ೧೯೯೩

  ತೇರು

  ಸ್ವಾಗತ ಸಮಿತಿ, ದಕ್ಷಿಣ ಕನ್ನಡ ಜಿಲ್ಲಾ ಆರನೆಯ ಕನ್ನಡ ಸಾಹಿತ್ಯ ಸಮ್ಮೇಳನ, ಕುಂದಾಪುರ.

- ಗೋಪಾಲಕೃಷ್ಣ ಭಟ್ಟ ಶೇಣಿ, ೧೯೮೧

  ಯಕ್ಷಗಾನ ಮತ್ತು ನಾನು

  ಶೇಣಿ ಸನ್ಮಾನ ಸಮಿತಿ, ಪುತ್ತೂರು

- ಗೋಪಾಲಕೃಷ್ಣ ಪುಣಿಂಚತ್ತಾಯ, ೧೯೮೩

  ದಕ್ಷಿಣ ಯಕ್ಷಗಾನ

  ಲೇಖಕ ಪ್ರಕಾಶನ, ಪುಂಡೂರು, ಕಾಸರಗೋಡು.

- ಚಿನ್ನಪ್ಪ ಗೌಡ ಕೆ. ೨೦೦೨

  ಪ್ರಾದೇಶಿಕ ಜಾನಪದ ಅಧ್ಯಯನ ನೆಲೆಗಳು ಮತ್ತು ಸಾಧ್ಯತೆಗಳು

  ಮದಿಪು ಪ್ರಕಾಶನ, ಮಂಗಳಗಂಗೋತ್ರಿ.

- ಜತ್ತಿ ಈಶ್ವರ ಭಟ್ಟ, ೧೯೩೮

  ಸಂಪೂರ್ಣ ರಾಮಾಯಣ

  ಮಂಗಳೂರು ಪ್ರೆಸ್, ರಥಬೀದಿ, ಮಂಗಳೂರು.

- ಜಯರಾಮ ಕಾರಂತ ಮತ್ತು ನಂದಳಿಕೆ ಬಾಲಚಂದ್ರ ರಾವ್ (ಸಂ.), ೧೯೯೬

  ಮುದ್ದಣನಿಗೆ ನಮನ

  ಕರ್ನಾಟಕ ಸಂಘ, ಪುತ್ತೂರು, ದ.ಕ.

- ಜ್ಯೋತಿ ರಾಜ, ೨೦೦೩

  ಬಯಲಾಟ ಪದಗಳು : ಸಾಂಸ್ಕೃತಿಕ ಅಧ್ಯಯನ

  ಎಂ.ಫಿಲ್ ಸಂಪ್ರಬಂಧ, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ.

- ದೇರಣ್ಣ ರೈ ಕೋಟೆಕಾರು, ೨೦೦೪

  ತೆಂಕಣ ಯಕ್ಷಪಥ

  ಜಾನಪದ ಪುಸ್ತಕಮಾಲೆ, ಹರೀಶ್ ಎಂಟರ್‌ಪ್ರೈಸಸ್, ವಿ.ವಿ. ಪುರಂ, ಬೆಂಗಳೂರು

- ನರಸಿಂಹ ಭಟ್ಟ (ಸಂ.), ೨೦೦೨

  ಬೇಕಲ ರಾಮ ನಾಯಕರ ಸಾಹಿತ್ಯ ಸಂಪುಟ

  ಬೇಕಲ ರಾಮನಾಯಕರ ಜನ್ಮಶತಮಾನೋತ್ಸವ ಸಮಿತಿ, ಕಾಸರಗೋಡು.

- ನಾಗವೇಣಿ ಮಂಚಿ, ೨೦೧೨

  ಯಕ್ಷ ಸ್ತ್ರೀ

  ಡಾ. ಪಿ. ದಯಾನಂದ ಪೈ ಮತ್ತು ಶ್ರೀ ಪಿ. ಸತೀಶ್ ಪೈ ಯಕ್ಷಗಾನ ಅಧ್ಯಯನ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ. ಮಂಗಳಗಂಗೋತ್ರಿ.

- ನಾಯಕ ಎನ್.ಆರ್., ೧೯೮೨

  ಕನ್ನಡ ಬಯಲಾಟ ಪರಂಪರೆ

  ಜಾನಪದ ಪ್ರಕಾಶನ, ಪ್ರಭಾತ ನಗರ, ಹೊನ್ನಾವರ.

- ನಾವಡ ಎ.ವಿ. (ಸಂ.), ೧೯೭೭

  ಕುಂದ ದರ್ಶನ–ಕುಂದಾಪುರ ಪರಿಸರ ಅಧ್ಯಯನ ಗ್ರಂಥ

  ಭಂಡಾರ್ಕಾರ್ಸ್ ಕಾಲೇಜು, ಕುಂದಾಪುರ.

- ನಾವಡ ಎ.ವಿ. (ಸಂ.) ೨೦೦೭

  ಕರಾವಳಿ ಜಾನಪದ

  ಸ್ವಾಗತ ಸಮಿತಿ, ೭೪ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಉಡುಪಿ.

- ನಾವಡ ಎ.ವಿ. ಮತ್ತು ಗಾಯತ್ರಿ ನಾವಡ (ಸಂ.), ೧೯೯೨

ಕಾಡ್ಯನಾಟ : ಪಠ್ಯ ಮತ್ತು ಪ್ರದರ್ಶನ

ಕರ್ನಾಟಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ.

- ನಿಕೇತನ, ೨೦೧೩

  ತುಳು ಮಹಾಕಾವ್ಯ ಮಂದಾರ ರಾಮಾಯಣ ಸ್ವರೂಪ ಮತ್ತು ಅನನ್ಯತೆ

  ರಾಶಿ ಪ್ರಕಾಶನ, ಉಡುಪಿ.

- ನಿತ್ಯಾನಂದ ಶೆಟ್ಟಿ ಬಿ. (ಸಂ.), ೨೦೧೨

  ಅಳಿಕೆ – ಯಕ್ಷಗಾನದ ಮೇರು ಕಲಾವಿದ ಅಳಿಕೆ ರಾಮಯ್ಯ ರೈ ಸ್ಮೃತಿ–ಕೃತಿ

  ದೆಹಲಿ ಮಿತ್ರ, ನವದೆಹಲಿ.

- ಪರಮೇಶ್ವರ ಭಟ್ಟ ಎಸ್.ವಿ. (ಗೌ.ಸಂ.), ೧೯೭೪

  ರಸಋಷಿ

  ದೇರಾಜೆ ಅಭಿನಂದನಾ ಗ್ರಂಥ, ದೇರಾಜೆ ಸೀತಾರಾಮಯ್ಯ ಸನ್ಮಾನ ಸಮಿತಿ, ಬಾಳಿಲ, ದ.ಕ.

- ಪಾದೇಕಲ್ಲು ನರಸಿಂಹ ಭಟ್ಟ. (ಸಂ.), ೧೯೮೧

  ರಂಗವೈಖರಿ

  ಶ್ರೀ ಮಾಂಬಾಡಿ ನಾರಾಯಣ ಭಾಗವತರ ಸನ್ಮಾನ ಸಮಿತಿ, ಮಿತ್ತನಡ್ಕ, ಕರೋಪಾಡಿ, ದ.ಕ.

- ಪಾದೇಕಲ್ಲು ವಿಷ್ಣು ಭಟ್ಟ. (ಸಂ.), ೨೦೦೪

  ಯಕ್ಷಭೀಮನ ನೂರು ಹೆಜ್ಜೆಗಳು

  ಡಾ. ಕೃಷ್ಣಮೂರ್ತಿ, ಪಂಜ, ಸುಳ್ಯ ತಾಲೂಕು, ದ.ಕ.

- ಪಾದೇಕಲ್ಲು ವಿಷ್ಣು ಭಟ್ಟ. (ಸಂ.), ೨೦೦೬

  ಯಕ್ಷಗಾನ ಪ್ರಸಂಗ ಸಂಚಯ

  ಕನ್ನಡ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ.

- ಪಾದೇಕಲ್ಲು ವಿಷ್ಣು ಭಟ್ಟ, ೨೦೦೭

  ಪ್ರಸಂಗ ವಿಶ್ಲೇಷಣೆ

  ಸ್ವಾಗತ ಸಮಿತಿ, ೭೪ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ೨೦೦೭, ಉಡುಪಿ.

- ಪಾದೇಕಲ್ಲು ವಿಷ್ಣು ಭಟ್ಟ (ಸಂ.), ೨೦೧೪

  ಮಹಾಜನಪದ

ಡಾ. ವೆಂಕಟರಾಜ ಪುಣಿಚಿತ್ತಾಯರ ಸಮಗ್ರ ಲೇಖನ ಸಂಪುಟ, ಪ್ರಕಾಶಕರು: ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ ಉಡುಪಿ.

- ಪುರುಷೋತ್ತಮ ಬಿಳಿಮಲೆ, ನಾವಡ ಎ.ವಿ. ಮತ್ತು ರಾಮಚಂದ್ರ ಉಚ್ಚಿಲ. (ಸಂ.), ೧೯೯೫

  ಸಿರಿ

  ಅಮೃತ ಸೋಮೇಶ್ವರ ಅಭಿನಂದನ ಸಂಪುಟ, ಕಲಾಗಂಗೋತ್ರಿ, ಉಚ್ಚಿಲ, ದ.ಕ.
- ಪ್ರಕಾಶ ಗಿರಿಮಲ್ಲನವರ, ೨೦೧೬

  ಉತ್ತರ ಕರ್ನಾಟಕದ ಬಯಲಾಟ ಸಂಸ್ಕೃತಿ

  ಬೆಳದಿಂಗಳು ಪ್ರಕಾಶನ, ಬೆಳಗಾವಿ
- ಪ್ರಭಾಕರ ಜೋಶಿ. (ಸಂ.), ೧೯೮೧

  ಅರ್ಥಗಾರಿಕೆ ಸ್ವರೂಪ ಸಮೀಕ್ಷೆ

  ಪೊಳಲಿ ಶಾಸ್ತ್ರಿ ಸ್ಮಾರಕ ಸಮಿತಿ, ಮಂಗಳೂರು.
- ಪ್ರಭಾಕರ ಜೋಶಿ, ೧೯೮೬

  ಕೇದಗೆ

  ಚಿತ್ರಾ ಪ್ರಕಾಶನ, ಮಂಗಳೂರು, ದ.ಕ.
- ಪ್ರಭಾಕರ ಜೋಶಿ ಎಂ, ೧೯೯೦

  ಮಾರುಮಾಲೆ

  ನ್ಯೂ ಸ್ಟಾರ್ ಪಬ್ಲಿಕೇಶನ್ಸ್, ಸಾರಕ್ಕಿ, ಬೆಂಗಳೂರು.
- ಪ್ರಭಾಕರ ಜೋಶಿ. ಎಂ, ೧೯೯೩

  ಪ್ರಸ್ತುತ

  ಕರ್ನಾಟಕ ಸಂಘ, ಪುತ್ತೂರು, ದ.ಕ.
- ಪ್ರಭಾಕರ ಜೋಶಿ ಎಂ. (ಸಂ.), ೧೯೯೮

  ಕುಕ್ಕಿಲ ಸಂಪುಟ

  ಕರ್ನಾಟಕ ಸಂಘ, ಪುತ್ತೂರು – ೫೭೪೨೦೨,
- ಪ್ರಭಾಕರ ಜೋಶಿ ಎಂ., ೧೯೮೪

  ಜಾಗರ

  ಸುಮನಸಾ ವಿಚಾರ ವೇದಿಕೆ, ಚೊಕ್ಕಾಡಿ

- ಪ್ರಭಾಕರ ಜೋಶಿ ಎಂ. ಮತ್ತು ಕೃಷ್ಣ ಶಾಸ್ತ್ರಿ ಸಿ.ಎಚ್. ಬಾಳಿಲ (ಸಂ.), ೨೦೧೨

  ಮೂಡಂಬೈಲು ಶಾಸ್ತ್ರಿ ೭೫

  ಮೂಡಂಬೈಲು ಸಿ. ಗೋಪಾಲಕೃಷ್ಣ ಶಾಸ್ತ್ರಿ ಸಾಂಸ್ಕೃತಿಕ ಪ್ರತಿಷ್ಠಾನ, ಮೂಡಂಬೈಲು, ಅಡ್ಯನಡ್ಕ, ದ.ಕ.
- ಪ್ರಭಾಕರ ಜೋಶಿ ಎಂ. ಮತ್ತು ಹಿರಣ್ಯ ವೆಂಕಟೇಶ್ವರ ಭಟ್ಟ (ಸಂ.), ೨೦೧೫

  ದಿವಾಣ ಸಂಪದ

  ದಿವಾಣ ಭೀಮ ಭಟ್ಟ ಜನ್ಮ ಶತಮಾನೋತ್ಸವ ಸಮಿತಿ, ಶಕ್ತಿನಗರ ಬಂಟ್ವಾಳ.
- ಭಟ್ಟ ಜಿ.ಎಸ್., ೧೯೯೫

  ಯಕ್ಷಗಾನ ಪರಿಶೀಲನ

  ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.
- ಭಟ್ಟ ಜಿ.ಎಸ್., ೨೦೧೩

  ಜಾನಪದ ಸಾಹಿತ್ಯ ಚರಿತ್ರೆ – ಯಕ್ಷಗಾನ ಬಯಲಾಟ

  ಕಲಾ ಪ್ರಕಾಶನ, ಗುತ್ತಹಳ್ಳಿ, ಬೆಂಗಳೂರು.
- ಭಟ್ಟ ಜಿ.ಎಸ್., ೨೦೧೫

  ಕೆರೆಮನೆ ಶಂಭು ಹೆಗಡೆ ಸ್ಮೃತಿಬಿಂಬ

  ನವಭಾರತಿ ಪ್ರಕಾಶನ, ಸರಸ್ವತೀಪುರಂ, ಮೈಸೂರು.
- ಭಟ್ಟ ಜಿ.ಎಸ್., ೨೦೦೪

  ಕೆರೆಮನೆ ಶಂಭು ಹೆಗಡೆ ಅಧ್ಯಯನ

  ನಿಧಿ ಪ್ರಕಾಶನ, ಸಾಗರ, ಶಿವಮೊಗ್ಗ.
- ಭಟ್ಟ ಜಿ.ಎಸ್. (ಸಂ.), ೧೯೯೬

  ವಾಲ್ಮೀಕಿ ರಾಮಾಯಣ ಮತ್ತು ಪರಂಪರೆ

  ಕೆನರಾ ಹೈಸ್ಕೂಲ್ ಅಸೋಸಿಯೇಶನ್, ಮಂಗಳೂರು.
- ಮಂದಾರ ಕೇಶವ ಭಟ್ಟ ಮತ್ತು ಪ್ರಭಾಕರ ಜೋಶಿ ಎಂ. (ಸಂ.) ೧೯೮೦

  ಶ್ರೀಚಕ್ರ, ಪೊಳಲಿ ಶಂಕರನಾರಾಯಣ ಶಾಸ್ತ್ರಿ ಸ್ಮರಣ ಸಂಚಿಕೆ

  ಪೊಳಲಿ ಶಾಸ್ತ್ರಿ ಸ್ಮಾರಕ ಸಮಿತಿ, ಮಂಗಳೂರು.
- ಮಾಧವ ಪೆರಾಜೆ, ೨೦೦೦

  ಯಕ್ಷಗಾನ ತಾಳಮದ್ದಳೆ: ನವ್ಯೋತ್ತರ ಸಂಕಥನ

ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೨೦೦೦

- ಮುಳಿಯ ಮಹಾಬಲ ಭಟ್ಟ (ಸಂ.) ೧೯೮೦

  ಯಕ್ಷಗಾನ ಮಕರಂದ

  ಸಂಭಾವನಾ ಗ್ರಂಥ, ಪೊಳಲಿ ಶಂಕರನಾರಾಯಣ ಶಾಸ್ತ್ರಿ ಸ್ಮಾರಕ ಸಮಿತಿ, ಮಂಗಳೂರು

- ಮುಳಿಯ ಮಹಾಬಲ ಭಟ್ಟ. (ಸಂ.), ೧೯೯೭

  ಮುಳಿಯ ತಿಮ್ಮಪ್ಪಯ್ಯ ಸಮಗ್ರ ಸಾಹಿತ್ಯ ಸಂಪುಟ – ೨

  ಮುಳಿಯ ತಿಮ್ಮಪ್ಪಯ್ಯ ಶತಮಾನೋತ್ಸವ ಸಮಿತಿ, ಮಂಗಳೂರು.

- ಮುಳಿಯ ಶಂಕರ ಭಟ್ಟ. (ಸಂ.), ೨೦೦೫

  ಯಕ್ಷಶಾಂತಲಾ–ಪಾತಾಳ

  ಶ್ರೀ ಪಾತಾಳ ಅಭಿನಂದನ– ಕೃತಿ ಪ್ರಕಾಶನ ಸಮಿತಿ, ಪುತ್ತೂರು.

- ಮುಳಿಯ ಶಂಕರ ಭಟ್ಟ. (ಸಂ.) ೨೦೦೬

  ಡಾ. ಅಂಬೇಮೂಲೆ ಯಕ್ಷವಲ್ಲರಿ

  ಡಾ. ಅಂಬೇಮೂಲೆ ಗೋವಿಂದ ಭಟ್ಟರ ಸಾಹಿತ್ಯ ಪ್ರಕಾಶನ ಸಮಿತಿ, ಕಾಸರಗೋಡು.

- ಮೋಹನ ಕುಂಟಾರ್, ೨೦೦೦

  ಯಕ್ಷಗಾನ ವಾಚಿಕಾಧ್ಯಯನ

  ಕನ್ನಡ ವಿಶ್ವವಿದ್ಯಾನಿಲಯ, ಹಂಪಿ. ಹೊಸಪೇಟೆ.

- ಯಶೋಧರಾ ಎಚ್ ಬಿ. ೨೦೦೬

  ಕನ್ನಡದಲ್ಲಿ ಯಕ್ಷಗಾನ ಸಾಹಿತ್ಯ

  ರಾಜ್ ಪ್ರಕಾಶನ, ಹನುಮಂತನಗರ, ಮೈಸೂರು.

- ರವಿ ರಾ. ಅಂಚನ್, ೧೯೯೨

  ಯಕ್ಷರಂಗ

  ಪ್ರಗತಿ ಗ್ರಾಫಿಕ್ಸ್, ಆರ್.ಪಿ.ಸಿ. ಬಡಾವಣೆ, ಬೆಂಗಳೂರು.

- ರಾಘವ ನಂಬಿಯಾರ್ ಕೆ.ಎಂ. (ಸಂ.), ೧೯೮೫

  ಪಂಚವಟಿ–ವಾಲಿ ಸುಗ್ರೀವರ ಕಾಳಗ

  ಸಮೀರ ಪ್ರಕಾಶನ, ಪುತ್ತೂರು, ದ.ಕ.

- ರಾಘವ ನಂಬಿಯಾರ್ ಕೆ.ಎಂ. (ಸಂ.), ೨೦೦೧

  ಮುಳಿಯ ಮಹಾಬಲ ಭಟ್ಟ ಕೃತಿ ಸಂಚಯ

  ಕರ್ನಾಟಕ ಸಂಘ, ಪುತ್ತೂರು, ದ.ಕ.

- ರಾಘವ ನಂಬಿಯಾರ್ ಕೆ.ಎಂ., ೨೦೦೨

  ತಿಳಿನೋಟ

  ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಎಂ.ಜಿ.ಎಂ ಕಾಲೇಜು, ಉಡುಪಿ.

- ರಾಘವ ನಂಬಿಯಾರ್ ಕೆ.ಎಂ., ೨೦೧೧

  ಹಾಡು – ಆಡು ಕಾವ್ಯ

  ಶ್ರೀ ಗಾಯತ್ರಿದೇವಿ ಆಫ್‌ಸೆಟ್ ಪ್ರಿಂಟರ್ಸ್, ಕೆ.ಆರ್. ಮೊಹಲ್ಲಾ, ಮೈಸೂರು.

- ರಾಘವ ನಂಬಿಯಾರ್ ಕೆ.ಎಂ., ೧೯೯೮

  ವಿಲೋಕನ

  ಇಳಾ ಪ್ರಕಾಶನ, ಚಾಮರಾಜಪೇಟೆ, ಬೆಂಗಳೂರು

- ರಾಘವ ನಂಬಿಯಾರ್ ಕೆ.ಎಂ, ೨೦೦೭

  ಹಿಮ್ಮೇಳ

  ವತ್ಸಲಾ ರಾಘವನ್, ಪಂಚಮೂಲ, ಇಂದ್ರಾಣಿ ದೇವಸ್ಥಾನದ ಬಳಿ, ಕುಂಜಿಬೆಟ್ಟು, ಉಡುಪಿ

- ರಾಘವ ನಂಬಿಯಾರ್ ಕೆ.ಎಂ., ೨೦೧೨

  ಆಶುವೈಖರಿ

  ಸಾಗರ್ ಪ್ರಕಾಶನ, ನಾಗರಬಾವಿ, ಬೆಂಗಳೂರು.

- ರಾಜಗೋಪಾಲಾಚಾರ್ಯ. ಎಂ. ೧೯೮೫

  ರಂಗ ಪ್ರಸಂಗ

  ಪ್ರಾದೇಶಿಕ ಜಾನಪದ ರಂಗಕಲೆಗಳ ಅಧ್ಯಯನ ಕೇಂದ್ರ, ಉಡುಪಿ.

- ರಾಜೇಗೌಡ ಹ.ಕ. (ಸಂ.), ೧೯೯೩

  ಕೆಂಪಣ್ಣಗೌಡನ ಯಕ್ಷಗಾನ ಕಾವ್ಯಗಳು

  ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

- ರಾಮಚಂದ್ರ ಉಚ್ಚಿಲ, ೧೯೯೩

  ಯಕ್ಷಗಾನ ನಡೆದು ಬಂದ ದಾರಿ

ಕಲಾಗಂಗೋತ್ರಿ, ಯಕ್ಷಗಾನ ಅಧ್ಯಯನ ಕೇಂದ್ರ, ಸೋಮೇಶ್ವರ, ಉಚ್ಚಿಲ, ದ.ಕ.

- ರಾವ್ ಎಚ್.ಬಿ.ಎಲ್. (ಸಂ.), ೧೯೯೩

  ಯಕ್ಷಸುಧಾ

  ಆರನೆಯ ಯಕ್ಷಗಾನ ಸಾಹಿತ್ಯ ಸಮ್ಮೇಳನದ ಸಂಸ್ಮರಣ ಗ್ರಂಥ, ಪದವೀಧರ ಯಕ್ಷಗಾನ ಸಮಿತಿ, ಮುಂಬೈ.

- ರಾವ್ ಎಚ್.ಬಿ.ಎಲ್. (ಸಂ.) ೧೯೯೮

  ಯಕ್ಷಲಕ್ಷ್ಮೀ

  ಏಳನೆಯ ಯಕ್ಷಗಾನ ಸಾಹಿತ್ಯ ಸಮ್ಮೇಳನದ ಪ್ರಬಂಧ ಸಂಕಲನ, ಪದವೀಧರ ಯಕ್ಷಗಾನ ಸಮಿತಿ, ಮುಂಬೈ.

- ರಾವ್ ಎಚ್.ಬಿ.ಎಲ್, ೨೦೦೫

  ಯಕ್ಷಗಾನ ಮುಖವರ್ಣಿಕೆ

  ಪದವೀಧರ ಯಕ್ಷಗಾನ ಸಮಿತಿ, ಮುಂಬೈ.

- ಲಲಿತಾ ಎಸ್.ಎನ್. ಭಟ್ (ಸಂ.), ೨೦೦೦

  ಚಂದ್ರಗಿರಿ

  ಕನ್ನಡ ಸಾಹಿತ್ಯ ಪರಿಷತ್ತು ಕೇರಳ ಗಡಿನಾಡ ಘಟಕ, ಕಾಸರಗೋಡು.

- ವಸಂತ ಭಾರದ್ವಾಜ ಕಬ್ಬಿನಾಲೆ, ೨೦೧೫

  ಛಂದೋವಸಂತ

  ರವಿ ಪ್ರಕಾಶನ, ಬೆಂಗಳೂರು.

- ವಿಜಯ ನಳಿನಿ ಆರ್ ಹೆಗಡೆ, ೧೯೯೭

  ತಾಳಮದ್ದಳೆ

  ಕರ್ನಾಟಕ ಸಂಘ, ಪುತ್ತೂರು. ದ.ಕ.

- ವಿವೇಕ ರೈ. ಬಿ. ಎ. (ಸಂ.), ೧೯೮೯

  ಮುಳಿಯ ತಿಮ್ಮಪ್ಪಯ್ಯನವರ ಸಾಹಿತ್ಯ

  ಕನ್ನಡ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ.

- ವೆಂಕಟರಾಜ ಪುಣಿಂಚತ್ತಾಯ, ೧೯೯೫

  ಬಾಯಾರ್ ಸಂಕಯ್ಯ ಬಾಗೋತೇರ್

ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ, ಮಂಗಳೂರು.

- ಶರ್ಮ ಕೆ.ಎಸ್. ಮತ್ತು ವೆಂಕಟರಾಜ ಪುಣಿಂಚತ್ತಾಯ. (ಸಂ.), ೧೯೭೪

  ಯಕ್ಷಗಾನ

  ತರುಣ ಕಲಾವೃಂದ, ಎಡನೀರು, ಕಾಸರಗೋಡು.

- ಶಂಕರ ನಾರಾಯಣ ಭಟ್ಟ ಸಿದ್ಧಮೂಲೆ, ೨೦೦೪

  ಮುದ್ದಣನ ರಾಮಾಶ್ವಮೇಧ ಒಂದು ಸಮೀಕ್ಷೆ

  ಮಾನಸ ಪ್ರಕಾಶನ, ಪೆರ್ಲಂಪಾಡಿ, ಪುತ್ತೂರು.

- ಶಿವರಾಮ ಕಾಡನಕುಪ್ಪೆ. (ಸಂ.), ೧೯೮೨

  ಶಿವರಾಮ ಕಾರಂತ ಹತ್ತು ಅಧ್ಯಯನಗಳು

  ಭಾರತೀ ಪ್ರಕಾಶನ, ಸರಸ್ವತೀಪುರಂ, ಮೈಸೂರು.

- ಶಿವರಾಮ ಕಾರಂತ ಕೆ. ೧೯೭೪

  ಯಕ್ಷಗಾನ

  ಪಠ್ಯಪುಸ್ತಕ ಮಾಲೆ, ಸಂ:ಹಾಮಾನಾ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು

- ಶಿವರಾಮ ಕಾರಂತ ಕೆ. ೧೯೬೨

  ಯಕ್ಷಗಾನ ಬಯಲಾಟ

  ಹರ್ಷ ಪ್ರಕಟನಾಲಯ, ಪುತ್ತೂರು, ದ.ಕ,

- ಶಿವರಾಮಯ್ಯ ಡಿ.ವಿ.(ಸಂ.), ೧೯೯೨

  ತಾಳಮದ್ದಳೆ ಪರಂಪರೆ ಮತ್ತು ಹೊಸಮಾರ್ಗ

  ಶ್ರೀ ತ್ರಿಪುರಾಂತಕೇಶ್ವರ ಯಕ್ಷಗಾನ ಕಲಾಸಂಘ, ಸಿರಿವಂತೆ ಸಾಗರ.

- ಶೇಣಿ ಗೋಪಾಲಕೃಷ್ಣ ಭಟ್, ೨೦೦೬

  ಯಕ್ಷಗಾನ ಮತ್ತು ನಾನು

  ಕಲ್ಕೂರ ಪ್ರಕಾಶನ, ಮಹಾತ್ಮಾಗಾಂಧಿ ರಸ್ತೆ, ಮಂಗಳೂರು.

- ಶ್ರೀಧರ ಉಪ್ಪೂರ, ೨೦೦೭

  ಬಡಗುತಿಟ್ಟು ಯಕ್ಷಗಾನ ಪರಂಪರೆ ಮತ್ತು ಪ್ರಯೋಗ

  ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ಮಹಾಪ್ರಬಂಧ.

- ಶ್ರೀನಿವಾಸ ಭಟ್ ಮ., ೧೯೭೩

  ಯಕ್ಷಗಾನ ಕಲಾವಿದರು

  ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ, ದ.ಕ.

- ಶ್ರೀನಿವಾಸ ಹಾವನೂರು, (ಸಂ.), ೨೦೦೬

  ಪಂ. ಮುಳಿಯ ತಿಮ್ಮಪ್ಪಯ್ಯ ಸಾಹಿತ್ಯ ವಾಚಿಕೆ

  ಅಳಿಲು ಸೇವಾ ಸಂಸ್ಥೆ, ಕೆ.ಆರ್. ರಸ್ತೆ, ಬೆಂಗಳೂರು.

- ಸರಸ್ವತಿ ಕುಮಾರಿ ಕೆ. (ಸಂ.), ೧೯೯೮

  ಯಕ್ಷಸುಗಂಧ

  ಯಕ್ಷಗಾನ ಸಂಘ, ಸಂತ ಅಲೋಶಿಯಸ್ ಕಾಲೇಜು, ಮಂಗಳೂರು.

- ಸೀತಾರಾಮ ಕೆದಿಲಾಯ. ಕ.ಪು. ಕೆದಿಲ, ೧೯೮೭

  ಯಕ್ಷಗಾನ ಛಂದೋವಿವೇಕ

  ಭಾರದ್ವಾಜ ಪ್ರಕಾಶನ, ಕದಿರೆ, ಮಂಗಳೂರು.

- ಸೇತು ಮಾಧವರಾವ್ (ಸಂ), ೧೯೮೦

  ಸಭಾಲಕ್ಷಣ ಮತ್ತು ಪ್ರಸಂಗ ಪೀಠಿಕೆ

  ಶ್ರೀಮನ್ಮಧ್ವಸಿದ್ಧಾಂತ ಗ್ರಂಥಾಲಯ ಉಡುಪಿ.

- ಸೋಂದಾ ಕೃಷ್ಣ ಭಂಡಾರಿ, ೧೯೫೫

  ಯಕ್ಷಗಾನ ಕೈಪಿಡಿ

  ಸಹಕಾರಿ ಮುದ್ರಣ ಸಂಘ ನಿಯಮಿತ, ಕುಮಟಾ.

- ಹಾ ಮಾ ನಾಯಕ (ಸಂ..), ೨೦೦೭

  ಕನ್ನಡ ವಿಷಯ ವಿಶ್ವಕೋಶ

  ಮೈಸೂರು ವಿಶ್ವವಿದ್ಯಾನಿಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ.

ಮಲಯಾಳಂ ಕೃತಿಗಳು

- ಉಳ್ಳೂರು ಎಸ್ ಪರಮೇಶ್ವರ ಅಯ್ಯರ್, ೧೯೯೦
  ಕೇರಳ ಸಾಹಿತ್ಯ ಚರಿತ್ರಂ Vol: III, 4th Edition
  ಯುನಿವರ್ಸಿಟಿ ಆಫ್ ಕೇರಳ, ತಿರುವನಂತಪುರಂ–೩೪
- ನಾಯರ್ ಎಸ್.ಕೆ., ೧೯೫೭
  ಕಥಕಳಿ ಮಂಜರಿ
  ಮದರಾಸು ಸರಕಾರ ಓರಿಯೆಂಟಲ್ ಸಿರೀಸ್, ಮದ್ರಾಸ್.
- ಮೆನೋನ್ ಕೆ.ವಿ., ೧೯೭೫
  ಕಥಕಳಿ ಎನ್ನ ಕಲಾ
  ಶ್ರೀಮತಿ ಮಾಲತಿ ಮೆನೋನ್, ತಿರುವನಂತಪುರಂ.
- ವೆಲ್ಲಿನಿಜಿ ಅಚ್ಯುತನ್ ಕುಟ್ಟಿ, ೨೦೧೩
  ಕಥಕಳಿಯುಡೆ ಕೈ ಪುಸ್ತಕಂ
  ಕೊಚ್ಚಿ, ಕೇರಳ. ಐಎಸ್‌ಬಿಎನ್ : ೯೭೮–೯೩–೫೨೭೯–೪೯೦–೪

English

- Appu Kuttan Nair and Ayyappa K Panikkar, 1993
  Kathakali : The Art of the Non-Worldly
  Marg Publications, Tiruvananthapuram. ISBN : 978-81-85026-22-0
- Usha Rani. N, 1996
  Folk Media for development: A study of Karnataka's Traditional Media
  Karnataka Book Publishers, Bangalore.

ಲೇಖನಗಳು

- ಕುಬಣೂರು ಶ್ರೀಧರ ರಾವ್ (ಸಂ), **ಯಕ್ಷಪ್ರಭಾ** ಮಾಸಪತ್ರಿಕೆಯ ಸಂಚಿಕೆಗಳು, ಉಜಿರೆ, ಬೆಳ್ತಂಗಡಿ. ೧೯೯೯ ಜೂನ್ ತಿಂಗಳಿನಿಂದ ೨೦೦೦ನೇ ಇಸವಿಯ ನವಂಬರ್ ತಿಂಗಳವರೆಗಿನ ೧೮ ಸಂಚಿಕೆಗಳು.
- ಕೇಶವ ಭಟ್ಟ, ಟಿ, ೧೯೮೭, ಶ್ರೀರಾಮ ಪಟ್ಟಾಭಿಷೇಕ, **ಮನೋರಮಾ– ನೆನಪಿನ ಸಂಚಿಕೆ**, ನಾ. ಮೊಗಸಾಲೆ (ಸಂ.), ಕವಿ ಮುದ್ದಣ ಸ್ಮಾರಕ ಮಿತ್ರ ಮಂಡಳಿ, ಕಾರ್ಕಳ.

- ಗಣಪತಿ. ಬಿ. ೧೯೯೮, ಕೆರೆಮನೆ ಕುಟುಂಬದ ಯಕ್ಷಗಾನ ಕೊಡುಗೆ – ಯಕ್ಷಗಾನದ ರಸಿಕರಾಜ, **ತರಂಗ ವಾರಪತ್ರಿಕೆ**. ನವೆಂಬರ್ ೧೯, ಸಂಪುಟ ೧೩, ಸಂಚಿಕೆ ೪೭. ಮಣಿಪಾಲ ಮುದ್ರಣಾಲಯ, ಮಣಿಪಾಲ, ಉಡುಪಿ.
- ಪುರುಷೋತ್ತಮ ಬಿಳಿಮಲೆ, ೨೦೦೦, ಯಕ್ಷಗಾನ ಬದಲಾವಣೆ, **ಪೊಲಿ– ಕೆನರಾ ೨೦೦**, ಮುಕುಂದ ಪ್ರಭು (ಸಂ.), ಕೆನರಾ ಜಿಲ್ಲಾ ಆಡಳಿತ, ಮಂಗಳೂರು.
- ಮಳಲಿ ವಸಂತ ಕುಮಾರ, ೨೦೧೦, ದಕ್ಷಿಣ ಕನ್ನಡ ಜಿಲ್ಲೆಯ ಜನಪದ ಕಲೆಗಳು, **ವಿಶ್ವಕನ್ನಡ ಕೃತಿ ಸಂಪುಟ ಮೂರು,** ಎಲ್ ಎಸ್ ಶೇಷಗಿರಿರಾವ್(ಸಂ.), ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
- ರಾಘವ ನಂಬಿಯಾರ್, ೧೯೯೬, ಯಕ್ಷಗಾನದ ಆಹಾರ್ಯ, **ಸಂಕುಲ ದ್ವೈಮಾಸಿಕ,** ಡಾ. ವಿಜಯಾ (ಸಂ.), ಸಂ.೪, ಸಂ.೧. ಅಸೀಮ ಪ್ರಕಾಶನ, ಚಾಮರಾಜಪೇಟೆ, ಬೆಂಗಳೂರು.
- ರಾಘವ ನಂಬಿಯಾರ ೨೦೦೦, ಯಕ್ಷಗಾನ ಆಧುನೀಕರಣ ತೆಕ್ಕೆಯಲ್ಲಿ, **ಪೊಲಿ– ಕೆನರಾ ೨೦೦,** ಮುಕುಂದ ಪ್ರಭು (ಸಂ.), ಕೆನರಾ ಜಿಲ್ಲಾ ಆಡಳಿತ, ಮಂಗಳೂರು.
- ವಿಜಯನಳಿನಿ ರಮೇಶ್, ೧೯೯೮, ಯಕ್ಷಗಾನದಲ್ಲಿ ಮಹಿಳೆ, **ಸಂಕುಲ ದ್ವೈಮಾಸಿಕ,** ಡಾ. ವಿಜಯಾ (ಸಂ.), ಸಂ.೫, ಸಂ.೧. ಅಸೀಮ ಪ್ರಕಾಶನ, ಚಾಮರಾಜಪೇಟೆ, ಬೆಂಗಳೂರು.
- ಸುಬ್ಬಣ್ಣ ರೈ ಎ, ೧೯೯೮, ಯಕ್ಷಗಾನದ ವಿಮರ್ಶೆ, **ಸಂಕುಲ ದ್ವೈಮಾಸಿಕ,** ಡಾ. ವಿಜಯಾ (ಸಂ.), ಸಂ.೫, ಸಂ.೧. ಅಸೀಮ ಪ್ರಕಾಶನ, ಚಾಮರಾಜಪೇಟೆ, ಬೆಂಗಳೂರು.

ಉಪನ್ಯಾಸಗಳು

- ಎಂ.ಎಲ್. ಸಾಮಗ (ಡಾ.), ವಿಶ್ರಾಂತ ಪ್ರಾಧ್ಯಾಪಕರು, ಎಂಜಿಎಂ ಕಾಲೇಜು, ಉಡುಪಿ. ವಿಷಯ: **ಪಾರ್ತಿಸುಬ್ಬನ ಪ್ರಸಂಗಗಳು ವಿಚಾರಗೋಷ್ಠಿಯ ಸಮಾರೋಪ ಭಾಷಣ,** ಕರ್ನಾಟಕ ಯಕ್ಷಗಾನ ಅಕಾಡೆಮಿ ಆಯೋಜಿತ ಪಾರ್ತಿಸುಬ್ಬನ ಬದುಕು ಬರಹ ಕುರಿತ ವಿಚಾರ ಸಂಕಿರಣ. ಸ್ಥಳ : ಭಾರತೀಯ ಭಾಷಾ ಅಧ್ಯಯನಾಂಗ, ಕಣ್ಣೂರು ವಿಶ್ವವಿದ್ಯಾನಿಲಯ, ಕಾಸರಗೋಡು. ದಿನಾಂಕ: ೧೪/೦೨/೨೦೧೯
- ಎಂ.ನಾ ಚಂಬಲ್ತಿಮಾರ್, ಸಂಪಾದಕರು, ಕಣಿಪುರ ಪತ್ರಿಕೆ, ಕಂಚಿಕಟ್ಟೆ ರಸ್ತೆ, ಕುಂಬಳೆ, ಕಾಸರಗೋಡು, ೬೭೧೩೨೧ ವಿಷಯ: **ಪಾರ್ತಿಸುಬ್ಬನ ಇತಿಹಾಸ ಹಾಗೂ ಐತಿಹ್ಯಗಳು,** ಕರ್ನಾಟಕ ಯಕ್ಷಗಾನ ಅಕಾಡೆಮಿ ಆಯೋಜಿತ ಪಾರ್ತಿಸುಬ್ಬನ ಬದುಕು ಬರಹ ಕುರಿತ ವಿಚಾರ ಸಂಕಿರಣ. ಸ್ಥಳ : ಭಾರತೀಯ ಭಾಷಾ ಅಧ್ಯಯನಾಂಗ, ಕಣ್ಣೂರು ವಿಶ್ವವಿದ್ಯಾನಿಲಯ, ಕಾಸರಗೋಡು. ದಿನಾಂಕ: ೧೩/೦೨/೨೦೧೯

- ಪ್ರಭಾಕರ ಜೋಶಿ ಎಂ. (ಡಾ.), ೨೦೫, ಹರಿಭಕ್ತಿ, ಪಿಂಟೋಲೇನ್, ಕದ್ರಿಕಂಬಳ, ಮಂಗಳೂರು – ೫೭೫೦೦೪ ವಿಷಯ: **ಯಕ್ಷಗಾನದ ಮಹಾಕವಿ ಪಾರ್ತಿಸುಬ್ಬ**, ದಕ್ಷಿಣ ಕನ್ನಡ ಜಿಲ್ಲಾ ೨೧ನೇ ಕನ್ನಡ ಸಾಹಿತ್ಯ ಸಮ್ಮೇಳನ, ಉಜಿರೆ ದಿನಾಂಕ : ೨೮, ಜನವರಿ ೨೦೧೭.
- ಮಧುಕರ ಮಲ್ಯ, ಶಿಕ್ಷಕರು, ಮಡಂತ್ಯಾರು, ಬೆಳ್ತಂಗಡಿ ತಾಲೂಕು, ದ.ಕ ವಿಷಯ: **ಪಾರ್ತಿಸುಬ್ಬನ ಪ್ರಸಂಗಗಳ ಭಾಷಾ ಸೌಂದರ್ಯ**, ದಕ್ಷಿಣ ಕನ್ನಡ ಜಿಲ್ಲಾ ೨೧ನೇ ಕನ್ನಡ ಸಾಹಿತ್ಯ ಸಮ್ಮೇಳನ, ಉಜಿರೆ ದಿನಾಂಕ : ೨೮, ಜನವರಿ ೨೦೧೭.
- ರಮಾನಂದ ಬನಾರಿ (ಡಾ.), ಗಣರಾಜ ಕ್ಲಿನಿಕ್, ಮಂಜೇಶ್ವರ ೬೭೧೩೨೩ ವಿಷಯ: **ಪಾರ್ತಿಸುಬ್ಬನ ಪ್ರಸಂಗಗಳು ವಿಚಾರಗೋಷ್ಠಿಯ ಅತಿಥಿ ಭಾಷಣ,** ಕರ್ನಾಟಕ ಯಕ್ಷಗಾನ ಅಕಾಡೆಮಿ ಆಯೋಜಿತ ಪಾರ್ತಿಸುಬ್ಬನ ಬದುಕು ಬರಹ ಕುರಿತ ವಿಚಾರ ಸಂಕಿರಣ. ಸ್ಥಳ : ಭಾರತೀಯ ಭಾಷಾ ಅಧ್ಯಯನಾಂಗ, ಕಣ್ಣೂರು ವಿಶ್ವವಿದ್ಯಾನಿಲಯ, ಕಾಸರಗೋಡು. ದಿನಾಂಕ: ೧೪/೦೨/೨೦೧೯
- ರಾಘವ ನಂಬಿಯಾರ್, ಪಂಚಮೂಲ, ಇಂದ್ರಾಣಿ ದೇಗುಲದ ಬಳಿ, ಕುಂಜಿಬೆಟ್ಟು, ಉಡುಪಿ ವಿಷಯ: **ಪಾರ್ತಿಸುಬ್ಬನ ಪ್ರಸಂಗಗಳು ವಿಚಾರಗೋಷ್ಠಿಯ ಅಧ್ಯಕ್ಷ ಭಾಷಣ,** ಕರ್ನಾಟಕ ಯಕ್ಷಗಾನ ಅಕಾಡೆಮಿ ಆಯೋಜಿತ ಪಾರ್ತಿಸುಬ್ಬನ ಬದುಕು ಬರಹ ಕುರಿತ ವಿಚಾರ ಸಂಕಿರಣ. ಸ್ಥಳ: ಭಾರತೀಯ ಭಾಷಾ ಅಧ್ಯಯನಾಂಗ, ಕಣ್ಣೂರು ವಿಶ್ವವಿದ್ಯಾನಿಲಯ, ಕಾಸರಗೋಡು. ದಿನಾಂಕ: ೧೩/೦೨/೨೦೧೯
- ಶ್ರೀಧರ ಡಿ. ಎಸ್., ಭೋಜರಾಜ ಭವನ, ತಾಳಿಪಾಡಿ, ಎಳತ್ತೂರು, ಕಿನ್ನಿಗೋಳಿ ೫೭೪೧೫೦ ವಿಷಯ: **ಪಾರ್ತಿಸುಬ್ಬನ ಪ್ರಸಂಗಗಳಲ್ಲಿ ಗೇಯ ಸೌಂದರ್ಯ,** ದಕ್ಷಿಣ ಕನ್ನಡ ಜಿಲ್ಲಾ ೨೧ನೇ ಕನ್ನಡ ಸಾಹಿತ್ಯ ಸಮ್ಮೇಳನ, ಉಜಿರೆ ದಿನಾಂಕ : ೨೮, ಜನವರಿ ೨೦೧೭.

ಮಾಹಿತಿ ನೀಡಿದ ತಜ್ಞರು

- **ಅಮೃತ ಸೋಮೇಶ್ವರ,** ಒಲುಮೆ, ಅಂಚೆ ಕೋಟೆಕಾರು, ಸೋಮೇಶ್ವರ, ಮಂಗಳೂರು. ೫೭೪೧೫೨
- **ಎಂ.ಎ. ಹೆಗಡೆ** (ಶಿರಸಿ), ಅಧ್ಯಕ್ಷರು, ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು. ೫೬೦೦೦೨
- **ಕುಂಬ್ಳೆ ಸುಂದರ ರಾವ್,** ಯಕ್ಷಾನುಗ್ರಹ, ಪಡೀಲು, ಮಂಗಳೂರು – ೫೭೫೦೦೭
- **ಕೆ. ಚಿನ್ನಪ್ಪ ಗೌಡ,** ವಿಶ್ರಾಂತ ಪ್ರಾಧ್ಯಾಪಕರು, ಎಸ್.ವಿ.ಪಿ. ಕನ್ನಡ ಅಧ್ಯಯನ ಸಂಸ್ಥೆ, ಮಂಗಳೂರು ವಿಶ್ವವಿದ್ಯಾನಿಲಯ. ವಿಳಾಸ: ಸಿರಿಭಾಮಾ, ಅಸೈಗೋಳಿ,
- **ಪೆರುವಡಿ ನಾರಾಯಣ ಭಟ್ಟ,** ನೂಜಿ ಮನೆ, ಬಪ್ಪಳಿಗೆ, ಪುತ್ತೂರು, ೫೭೪೨೦೧
- **ಬಲಿಪ ನಾರಾಯಣ ಭಾಗವತರು,** ನೂಯಿ ಮನೆ, ಮಾರೂರು ಗ್ರಾಮ, ಮೂಡಬಿದ್ರೆ, ದ.ಕ.

- **ಬಲಿಪ ಪ್ರಸಾದ ಭಾಗವತರು,** ನೂಯಿ ಮನೆ, ಮಾರೂರು ಗ್ರಾಮ, ಮೂಡಬಿದ್ರೆ, ದ.ಕ
- **ಮೂರ್ತಿ ದೇರಾಜೆ,** ಅಂಚೆ : ಅಳಿಕೆ, ವಿಟ್ಲ, ದಕ್ಷಿಣ ಕನ್ನಡ.
- **ರಾಜಗೋಪಾಲ ಕನ್ಯಾನ,** ಅಂಚೆ ಕನ್ಯಾನ, ಬಂಟ್ವಾಳ, ದ.ಕ
- ನಾಯರ್‌ಮೂಲೆ, ಮಾಣಿಲ, ಬಂಟ್ವಾಳ ತಾಲೂಕು, ದ.ಕ.
- **Dr. Kamalaksha. K**, Folklorist and Researcher, Rtd.Professor, Govt.College Kannada P.G Dept. Vidyanagara, Kasaragod. 671123
- **Dr. Prabhakarn Hebbarillath,** Researcher, Associate Professor, Hindi Dept. Cochin University of Science and Technology, CUSAT, Kerala.
  Mobile: 9446661250
- **Dr. Shankaranarayana Bhat,** Rtd.Professor, Govt.College Kannada P.G Dept. Vidyanagara, Kasaragod. 671123.
- **Dr. S. Sreenarayanan,** Kathakali Poet and Researcher, Vathallor saradalayam, Evoor Post., Cheppad, Alappuzha, Kerala – 690507. Mobile: 9645179709
- **Sri Lakshminarayana Hebbar,** Panapula Post., Madamangalam, Payyannur, Kerala.

ಛಾಯಾಚಿತ್ರಗಳು

೧. ಕೆ. ವೆಂಕಟಕೃಷ್ಣಯ್ಯ ಅವರು ಸಂಪಾದಿಸಿದ 'ಮಧುರ ಸ್ಮೃತಿ' (೧೯೬೫) ಸಂಚಿಕೆಯಲ್ಲಿ ಪ್ರಕಟಗೊಂಡ ಪಾರ್ತಿಸುಬ್ಬನ ರೇಖಾಚಿತ್ರ.

೨. ಪಾರ್ತಿಸುಬ್ಬನ ಯಕ್ಷಗಾನಗಳು ಕೃತಿಯ ಮುಖಪುಟಗಳು

೩. ಪಾರ್ತಿಸುಬ್ಬನ ಹಿತ್ತಿಲು, ಕುಂಬಳೆ, ಕಣಿಪುರದ ಗೋಪಾಲಕೃಷ್ಣ ದೇವರು ಹಾಗೂ ಪಾರ್ತಿಸುಬ್ಬ ಕಲಾಕೇಂದ್ರದ ಛಾಯಾಚಿತ್ರಗಳು

೪. ಕೂಡಿಯಾಟ್ಟಂ, ಕೃಷ್ಣನಾಟ್ಟಂ, ರಾಮನಾಟ್ಟಂ, ಕಥಕಳಿಯ ಚಿತ್ರಗಳು

೫. ಪಾರ್ತಿಸುಬ್ಬನ ಪ್ರಸಂಗಗಳ ಪ್ರದರ್ಶನದ ಕೆಲವು ಪಾತ್ರಗಳ ಚಿತ್ರಗಳು ಮತ್ತು ತಾಳಮದ್ದಳೆಯ ಛಾಯಾಚಿತ್ರ.

೬. ದಾಖಲೀಕರಣ ಮಾಡಿದ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳು